(8) ನಿಯಮ 69ರ ಮೇರೆಗೆ.

ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯತಿ ಸ್ಥಾನಗಳ ಮೀಸಲಾತಿ ನಿಗದಿಪಡಿಸುವಲ್ಲಿ ಆಗುತ್ತಿರುವ ಗೊಂದಲ.

+ ಶ್ರೀ ಬಿ.ಎನ್.ಬಚ್ಚೇಗೌಡ(ಹೊಸಕೋಟೆ): ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ತಿದ್ದುಪಡಿ ತರುವ ಮೂಲಕ, ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯಿತಿಗಳಿಗೆ ಸ್ಥಾನ ಮೀಸಲಾತಿಯನ್ನು ನಿಗದಿಪಡಿಸುವಂಥ ಕಾರ್ಯದಲ್ಲಿ ಜಿಲ್ಲಾಧಿಕಾರಿಗಳಿಗೆ ಅಧಿಕಾರವನ್ನು ಕೊಡಲಾಗಿದೆ. ಜಿಲ್ಲಾಧಿಕಾರಿಗಳು ಒಬ್ಬ ಕ್ಲರ್ಕ್ ಮಾಡತಕ್ಕಂಥ ಕೆಲಸವನ್ನು ಮಾಡಿದ್ದಾರಷ್ಟೇ. ಜಿಲ್ಲಾ ಉಸ್ತುವಾರಿ ಸಚಿವರಿಗೆ ಜವಾಬ್ದಾರಿ ಕೊಡಲಾಗಿದೆ ಮತ್ತು ಆಡಳಿತ ಪಕ್ಷದ ಶಾಸಕರನ್ನು ಒಟ್ಟಾಗಿ ತೆಗೆದುಕೊಂಡು, ಅದರಲ್ಲೂ ಪ್ರಭಾವವಿರುವ ಶಾಸಕರನ್ನು ಉಪಯೋಗಿಸಿಕೊಂಡು ಅವರಿಗೆ ಬೇಕಾದ ಹಾಗೆ ಮೀಸಲಾತಿಯನ್ನು ಮಾಡಿರುವಂಥಾದ್ದು ಆಗಿದೆ. ಇದು ಬಹಳ ಅವೈಜ್ಞಾನಿಕವಾಗಿ ಮಾಡಿರತಕ್ಕಂಥ ವ್ಯವಸ್ಥೆ. ಉದಾಹರಣೆಗೆ ನನ್ನ ಹೊಸಕೋಟೆ ತಾಲ್ಲೂಕನ್ನು ತೆಗೆದುಕೊಂಡರೆ, ಹೊಸಕೋಟೆಯಲ್ಲಿ ಐದು ಸೀಟುಗಳಿಗೆ ನಾಲ್ಕು ಮಹಿಳೆಯರನ್ನು ಹಾಕಿದ್ದಾರೆ. ಒಂದು ಜಿಲ್ಲೆಗೆ ಹೇಗೆ ನಾಲ್ಕು ಮಹಿಳೆಯರು ಬರುತ್ತಾರೆ? ಅಂದರೆ ವಿರೋಧ ಪಕ್ಷದಲ್ಲಿರತಕ್ಕಂಥ ಶಾಸಕರ ಕ್ಷೇತ್ರಗಳನ್ನು ಆಯ್ಕೆ ಮಾಡಿಕೊಂಡು, ಅದು ಬಿ.ಜೆ.ಪಿ.ಯವರಿರಬಹುದು, ಸಂಯುಕ್ತ ಜನತಾದಳದ ಸದಸ್ಯರಿರಬಹುದು, ಯಾರೇ ಇರಬಹುದು, ಆಯ್ಕೆ ಮಾಡಿಕೊಂಡು, ಅವರಿಗೆ ಯಾವುದು ಬೇಡವೋ ಅದನ್ನು ಕೊಡುವಂಥ ವ್ಯವಸ್ಥೆಯನ್ನು ಮಾಡಿ, ಜಿಲ್ಲಾಧಿಕಾರಿಗಳಿಗೆ ಆ ರೀತಿ ಸೂಚನೆ ಕೊಟ್ಟು, ಅಲ್ಲಿಂದ ಅವರು ಕಳುಹಿಸಿದ ರೀತಿಯಲ್ಲಿ ಇದು ಆಗಿದೆ. ಇದು ಮಾಡಿರತಕ್ಕಂಥ ವ್ಯವಸ್ಥೆ. ಅದಕ್ಕೆ ಯಾವ ಒಂದು ಟೆಕ್ನಿಕ್ಯಾಲಿಟಿ ಇಲ್ಲ, ವೈಜ್ಞಾನಿಕವಾಗಿ ಮಾಡಿರತಕ್ಕಂಥಾದ್ದು ಅಲ್ಲ. ನನ್ನ ಜಿಲ್ಲೆಯದನ್ನು ಉದಾಹರಣೆಯಾಗಿ ಹೇಳಿದೆ. ಅದೇ ರೀತಿ ರಾಜ್ಯದಲ್ಲಿರತಕ್ಕಂಥ ಅನೇಕ ವಿರೋಧ ಪಕ್ಷಗಳ ಶಾಸಕರುಗಳ್ಯಾರನ್ನೂ ಜಿಲ್ಲಾಧಿಕಾರಿಗಳು ಕೇಳಲಿಲ್ಲ. ನಮ್ಮ ಪತ್ರಕ್ಕೆ ಬೆಲೆಯೂ ಇಲ್ಲ. ಬಹಳ ಅವೈಜ್ಞಾನಿಕವಾಗಿ ಇದನ್ನು ಮಾಡಲಾಗಿದೆ. ಈ ರೀತಿ ಮೀಸಲಾತಿ ಎಲ್ಲ ತಾಲ್ಲೂಕುಗಳಲ್ಲೂ ನಡೆದಿದೆ. ಇದು ಇನ್ನೂ ಬದಲಾವಣೆಯಾಗುತ್ತಿದೆ ಎನ್ನುವ ಸುದ್ದಿಯೂ ಇದೆ. ಅಂದರೆ, ನೋಟಿಫಿಕೇಷನ್ ಆದಮೇಲೂ, ಕೆಲವು ಕ್ಷೇತ್ರಗಳಲ್ಲಿ ಬದಲಾವಣೆಯಾಗುತ್ತಿದೆ ಎನ್ನುವ ಸುದ್ದಿ ಎಲ್ಲ ಜಿಲ್ಲೆಗಳಿಂದಲೂ ಬಂದಿದೆ. ನಮ್ಮ ಜಿಲ್ಲೆಯಲ್ಲೂ ಹೇಳುತ್ತಿದ್ದಾರೆ. ಸರ್ಕಾರದಲ್ಲಿ ಮತ್ತೆ ಬದಲಾವಣೆಗಳು ಆಗುತ್ತಿವೆಯಂತೆ, ನೋಟಿಫಿಕೇಷನ್ ಆದಮೇಲೂ ಬದಲಾವಣೆ ಆಗುತ್ತಿವೆ ಎಂದು ಆಚೆ ಮಾತನಾಡುತ್ತಿರುವಂಥ ಸುದ್ದಿ ನಮ್ಮ ಕಿವಿಗೆ ಬಿದ್ದಿದೆ. ಜನ ಹೊರಗೆ ಮಾಡನಾಡುತ್ತಿರುವುದು ವಸ್ತು ಸ್ಥಿತಿಯಾಗಿದೆ. ಅದಕ್ಕೆ ಒಂದು ತೆರೆ ಎಳೆದು ಅದು ಇಲ್ಲಿಗೇ ಮುಗಿಯಬೇಕು ಎನ್ನುವುದಾದರೆ ನಾವಾದರೂ ಸರಿಪಡಿಸಿಕೊಳ್ಳಬಹುದು.

5 ಸೀಟುಗಳಿಗೆ ಶೇ. 100 ಎಂದು ಇಟ್ಟುಕೊಂಡರೆ ಶೇಕಡ 80ರಷ್ಟು ಅಂದರೆ ನಾಲ್ಕು ಸೀಟುಗಳನ್ನು ಮಹಿಳೆಯರಿಗೆ ಕೊಡುವುದಾದರೆ ಇನ್ನು ಒಂದು ಸೀಟು ಮಾತ್ರ ಅವರಿಗೆ ಬೇಕಾದವರನ್ನು ಬಿ.ಸಿ.ಎ.ಗೆ ಮಾಡಿಕೊಳ್ಳಿ ಎಂದು ಹೇಳಿದ ಹಾಗೆ ಆಯಿತು. ಆ ಕಡೆ ಇರುವಂತಹ ಶಾಸಕರಿಗೂ ಆ ಕಷ್ಟ ಗೊತ್ತಾಗಿದೆ, ಆದರೆ ಅವರು ಮಾತನಾಡುವ ಹಾಗೆ ಇಲ್ಲ ಅವರು ತಲೆ ಚಚ್ಚಿ ಕೊಳ್ಳುತ್ತಿದ್ದಾರೆ. ನಿಮ್ಮ ಕಾಲದಲ್ಲಿ ಇದು ಚೆನ್ನಾಗಿತ್ತು, ಎಲೆಕ್ಷನ್ ಕಮೀಷನ್‌ಗೆ ಅಧಿಕಾರ ಕೊಟ್ಟಿದ್ದೆವು, ಈ ಗಂಡಾಂತರ ಈ ಕಷ್ಟ ಇರಲಿಲ್ಲ, ನಾವು ನೆಮ್ಮದಿಯಾಗಿ ಇದ್ದೆವು ಎಂದು ಹೇಳುತ್ತಾರೆ. ಮೊನ್ನೆ ಪಂಚಾಯತ್ ಮೀಸಲಾತಿ ಆಯಿತು, ಯಾವ ಕಷ್ಟವೂ ಇಲ್ಲವೆಂದು ಯಾವುದೋ ಲಾಟರಿ ಸಿಸ್ಟಂ ಮಾಡಿದರು. ನಾವು ನಮ್ಮ ಕಾರ್ಯಕರ್ತರಿಗೆ ಹೇಳಿದೆವು, ನೆಮ್ಮದಿಯಾಗಿ ಇದ್ದೇವೆಂದು ಹೇಳಿದ್ದೀರಿ. ಈಗ ಇದು ಆಡಳಿತ ಪಕ್ಷದಲ್ಲಿರುವಂತಹ ಶಾಸಕರಿಗೆ ಕಷ್ಟವಾಗಿರುವಂಥಾದ್ದು, ಇದನ್ನು ಅವರೇ ಹೇಳಿಕೊಳ್ಳುತ್ತಿದ್ದಾರೆ. ನಾವು ನಿರೀಕ್ಷೆ ಮಾಡಿದ ಹಾಗೆ ಸಿಗಲಿಲ್ಲವೆಂದು ಅಲ್ಲಿ ಉಸ್ತುವಾರಿ ಮಂತ್ರಿಗಳು ಮತ್ತು ಕೆಲವು ಅಲ್ಲಿನ ಜಿಲ್ಲಾ ಅಧ್ಯಕ್ಷರು ಸೇರಿಕೊಂಡು ಅದು ಕೋಲಾರ ಜಿಲ್ಲೆ ಇರಬಹುದು, ಬೆಂಗಳೂರು ಜಿಲ್ಲೆ ಇರಬಹುದು ಅದು ಯಾವುದೇ ಜಿಲ್ಲೆಯಾಗಿರಬಹುದು, ಅವರು ಬೇಕಾದ ಹಾಗೆ, ಅವರ ಕಾರ್ಯಕರ್ತರಿಗೆ ಬೇಕಾದ ಹಾಗೆ ರಾಜಕೀಯವಾಗಿ ಅವರು ಮುಂದೆ ಸರಿಯಾಗಿ ತಾಲ್ಲೂಕನ್ನು ಇಟ್ಟುಕೊಳ್ಳಬೇಕೆನ್ನುವ ದೃಷ್ಟಿಯಿಂದ ಅವರಿಗೆ ಬೇಕು, ಬೇಕಾದ ಹಾಗೆ ಮಾಡಿಕೊಳ್ಳುವಂಥಾದ್ದು, ಯಾವುದಕ್ಕೆ ಬೇಡವೋ, ಅವರಿಗೆ ಕೊಡದೇ ಇರುವಂಥಾದ್ದು, ಇದರಲ್ಲಿ ರೀಜನ್ ಇದೆ. ತಾವು ಹಿರಿಯ ಸಚಿವರಾಗಿದ್ದೀರಿ, ತಾವು ಬಹಳಷ್ಟು ಇದರಲ್ಲಿ ಕಲ್ಪನೆ ಇಟ್ಟುಕೊಂಡು ಮಾಡಿರುವಂಥಾದ್ದು. ಅದನ್ನೇ ನಮ್ಮ ಮಾನ್ಯ ಎಸ್.ಎಸ್.ಪಾಟೀಲ್, ಸಹಕಾರ ಸಚಿವರು ತಿಳಿಸಿರುವಂಥಾದ್ದು. ತಮ್ಮ ಸೂಚನೆಯ ಪ್ರಕಾರ ಮೊನ್ನೆ ಸದನದಲ್ಲಿ ಮಾತನಾಡುವಂತಹ ಸಂದರ್ಭದಲ್ಲಿ ತಿಳಿಸಿದ್ದೀರಿ ಆ ಎಸ್.ಸಿಗೆ ಮೀಸಲಾತಿ ಇದೆ. We take SC in that constituency ಎಸ್.ಸಿ, ಎಸ್.ಟಿ.ಯ ಜನಸಂಖ್ಯೆಯ ಆಧಾರದ ಬಗ್ಗೆ ಗೊತ್ತಿದೆ. ಎಸ್.ಟಿ.ಯವರನ್ನು ತೆಗೆದುಕೊಳ್ಳುತ್ತೇವೆ. Then regarding OBC, there is no population basis. ಅದನ್ನು ನಮಗೆ ಬೇಕಾದ ಹಾಗೆ ಮಾಡಿಕೊಳ್ಳುತ್ತೇವೆ, ಅದು ಮುಗಿದ ಮೇಲೆ ಇನ್ನು ಉಳಿದಂಥಾದ್ದು ಜನರಲ್ ಕ್ಯಾಟಗರಿಗಳನ್ನು ನಾವು ಮಾಡಿಕೊಳ್ಳುವಂಥಾದ್ದು ಎಂದು ಕಳೆದ ಸದನದಲ್ಲಿ ಮಾತನಾಡುವಂತಹ ಸಂದರ್ಭದಲ್ಲಿ ಪ್ರಸ್ತಾಪ ಮಾಡಿದ್ದೀರಿ. ಇವತ್ತು ಎಸ್.ಸಿ, ಎಸ್.ಟಿಗೆ ಮಾತ್ರ ಬಿಟ್ಟು ಮಹಿಳೆಯರನ್ನೆ ಹೆಚ್ಚಾಗಿ ಹಾಕುವಂಥಾದ್ದು Zilla Panchayat composition in Bangalore District is 38% ಬೆಂಗಳೂರು ಡಿಸ್ಟ್ರಿಕ್ಟ್‌ನಲ್ಲಿ 38 ಸೀಟುಗಳನ್ನು ಗ್ರಾಮಾಂತರ ಜಿಲ್ಲಾ ಪಂಚಾಯತ್‌ಗೆ ತೆಗೆದುಕೊಳ್ಳಬೇಕೆಂದರೆ ಒಂದೇ ಕ್ಷೇತ್ರವನ್ನು ತೆಗೆದುಕೊಂಡು 5 ಕ್ಷೇತ್ರಗಳಿಗಿರುವಂತಹ ಕಡೆ ನಾಲ್ಕು ಮಹಿಳೆಯರನ್ನು ಹಾಕುವಂಥದ್ದಾದರೆ ಜನರಲ್‌ಗೆ ಇಬ್ಬರು ಮಹಿಳೆಯನ್ನು

ಹಾಕಿಸಿದ್ದೀರಿ. ಇದರ ಟೆಕ್ನಾಲಿಟಿ ಏನೆಂದು ಇವತ್ತು ಇದರ ಬಗ್ಗೆ ಯೋಚನೆ ಮಾಡಬೇಕು. ತಾವು ದಯಮಾಡಿ ಈ ಜಿಲ್ಲಾಧಿಕಾರಿಗಳಿಂದ ಮಾಹಿತಿಯನ್ನು ಪಡೆದುಕೊಳ್ಳಬೇಕು. ಈಗ ಜಿಲ್ಲಾಧಿಕಾರಿಗಳನ್ನು ಯಾವ ಮಟ್ಟಕ್ಕೆ ಇಳಿಸಿದ್ದೀರೆಂದರೆ ಅವರು ನಾವು ಕೊಟ್ಟಂತಹ ಪತ್ರಕ್ಕೆ ಏನು ಬೆಲೆ ಕೊಡುವುದು ಬೇಡವೆ? ಒಬ್ಬ ಶಾಸಕರು ಪತ್ರ ಕೊಟ್ಟಿದ್ದಾರೆಂದಾದರೂ ಅದಕ್ಕೆ ಗೌರವ ಬೇಡವೆ? ನಮಗೆ ಅವರು ಏನು ಹೇಳುತ್ತಾರೆಂದರೆ ನೀವು ಮಂತ್ರಿಗಳಿಗೆ ಹೇಳಿ, ನೀವು ಯಾವುದಾದರೂ ಒಂದು ಹೇಳಿ ಎನ್ನುತ್ತಾರೆ. ನಾವು ಯಾವುದಾದರೂ ಒಂದು ಹೇಳಿದರೂ ಮಾಡಲಿಲ್ಲ, ಈ ಸದನದಲ್ಲಿ ಶಾಸಕರಿಗೆ ಏನು ಗೌರವ ಕೊಡುತ್ತಿದ್ದೀರಿ? ತಾವು ವಿರೋಧಪಕ್ಷದಲ್ಲಿದ್ದಾಗ ಈ ಕಡೆ ಮಾನ್ಯ ಧರ್ಮಸಿಂಗ್ ಇದ್ದರು, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು, ಮಾನ್ಯ ಕೆ.ಎಸ್.ಈಶ್ವರಪ್ಪನವರು, ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಆಗ ನಾನಾ ರೀತಿಯಲ್ಲಿ ಗಲಾಟೆ ಮಾಡಿದರು, ವ್ಯಾಖ್ಯಾನ ಮಾಡಿದರು. ಇವತ್ತು ನೀವು ಶಾಸಕರಿಗೆ ಏನು ಗೌರವವನ್ನು ಕೊಟ್ಟಿದ್ದೀರಿ? ನಾವು ವಿರೋಧಪಕ್ಷದಲ್ಲಿದ್ದರೂ ಜನರಿಂದ ಆಯ್ಕೆಯಾಗಿ ಬಂದಂತಹವರು. ತಾವು ನಮ್ಮನ್ನು ಬುಲ್ಡೋಜ್ ಮಾಡಿ ಇಲ್ಲಿ ಮುಗಿಸಬೇಕೆಂದು ಇದ್ದೀರಾ? ಮಾನ್ಯ ಕಾಗೋಡು ತಿಮ್ಮಪ್ಪನವರೆ, ತಾವು ಹೇಳಿ. Totally this has happened.

ಇದು ಒಬ್ಬನ ಪ್ರಶ್ನೆ ಎಂದು ಹೇಳುತ್ತಾ ಇಲ್ಲ, at least some gesture, ಆಗಲಿ ಯಾವುದೋ ಕೊಡೋಣ, ತಮಗೂ ಬೇಕಾದವರು ಇದ್ದಾರಲ್ಲಾ, ತಾವು ಜನರಿಂದ ಆಯ್ಕೆಯಾಗಿ ಬಂದಿರತಕ್ಕಂಥಾದ್ದು. ನಾನು ಹೇಳುವಂಥಾದ್ದು ಇದು ಏನು ಗೌರವ ತರುವಂಥಾದ್ದು ಅಲ್ಲ, ತಾವು ಅಂದುಕೊಂಡಿರಬಹುದು, ತಾವು ಸರ್ಕಾರ ನಡೆಸುತ್ತಿದ್ದೇವೆ, ಈ ಸದನದಲ್ಲಿ ನಮ್ಮದು ಎಲ್ಲಾ ನಡೆಯುತ್ತದೆ ಎಂದು, ಆದರೆ ಹೊರಗಿನ ಒಪೀನಿಯನ್ is very bad on you. ತಮ್ಮ ಬಗ್ಗೆ ಹೊರಗೆ ಏನು ಸುದ್ದಿ ಹೋಗುತ್ತಿದೆ ಎಂದು ನೋಡಿ. ನೀವು ನಮಗೆ 150 ಜನ ಶಾಸಕರ ಬಲವಿದೆ, ಏನು ಬೇಕಾದರೂ ಮಾಡಿಕೊಳ್ಳಬಹುದೆಂದು ತಿಳಿದಿರಬಹುದು. ಆದರೆ ಹೊರಗೆ ಏನು ಮೆಸೇಜ್ ಹೋಗುತ್ತಿದೆ ಎಂದರೆ ಇದು ಬಹಳ ಬ್ಯಾಡ್ ಆಗಿದೆ. ಅದನ್ನು ತಾವು ತಿಳಿದುಕೊಳ್ಳಬೇಕು. ಈ ಆರು ತಿಂಗಳುಗಳಲ್ಲಿ ಸರ್ಕಾರವನ್ನು ನಡೆಸಿದ್ದೀರಿ, ಇದರ ಬಗ್ಗೆ ಪಬ್ಲಿಕ್ ಒಪೀನಿಯನ್ ಏನಿದೆ ಎಂಬುದನ್ನು ತರಿಸಿಕೊಂಡು ನೋಡಿ, ನೀವು ಮೆಜಾರಿಟಿ ಇದೆ ಎಂದು ಕೋ-ಆಪರೇಟಿವ್ ಬಿಲ್ ಪಾಸ್ ಮಾಡಿಕೊಳ್ಳುತ್ತೀರಿ, ಪಂಚಾಯತ್ ಮಸೂದೆಯನ್ನು ಪಾಸ್ ಮಾಡಿಕೊಳ್ಳುತ್ತೀರಿ, ಅಧ್ಯಕ್ಷರು ಇದ್ದಾರೆ, ಮಾಡಿಕೊಡುತ್ತಾರೆಂದು ನಡೆದುಕೊಳ್ಳುವುದಾದರೆ ಇದು ತಮಗೆ ಗೌರವ ತರುವಂಥಾದ್ದು ಅಲ್ಲ, ಶೋಭೆ ತರುವಂಥಾದ್ದು ಅಲ್ಲ. ನಾವು ಇದನ್ನು ಪದೇ ಪದೇ ಹೇಳುವಂಥಾದ್ದು ಅಲ್ಲ. ಈಗ ಜಿಲ್ಲಾಧಿಕಾರಿಗಳ ಮುಖಾಂತರ ಮಾಡಿರುವಂತಹ ಯಾವುದೇ ರೆಕ್‌ಮೆಂಡೇಷನ್, ಸರ್ಕಾರದಿಂದ ಆದಂತಹ ಬದಲಾವಣೆಗಳು, ಇವತ್ತು ವಿರೋಧಪಕ್ಷದವರನ್ನು ನಿರ್ಲಕ್ಷಿಸಿರುವುದನ್ನು, ಆಡಳಿತ ಪಕ್ಷದಲ್ಲಿ ಯಾರು ವೀಕ್

ಇರುವಂತಹ ಶಾಸಕರು ಅನೇಕರು ನಮ್ಮ ಹತ್ತಿರ ಹೇಳುತ್ತಾರೆ. ಅವರು ಇದನ್ನು ನಿಮ್ಮ ಹತ್ತಿರ ಹೇಳುವುದಕ್ಕಾಗುವುದಿಲ್ಲ, ಇಲ್ಲೂ ಹೇಳುವುದಕ್ಕಾಗುವುದಿಲ್ಲ, ನಮ್ಮ ಹತ್ತಿರ ಬಂದು ಮಾನ್ಯ ಸಿಂಧ್ಯರವರು, ಮಾನ್ಯ ಭೈರೇಗೌಡರು, ನೀವು ಹೇಳುವುದನ್ನು ನಾವು ಕೇಳಲಿಲ್ಲ. ಈಗ ನಾವು ಆ ಕಷ್ಟವನ್ನು ಅನುಭವಿಸುತ್ತಿದ್ದೇವೆಂದು ಹೇಳುತ್ತಾರೆ. ಇವತ್ತು ನಿಮ್ಮ ಕಾರ್ಯಕರ್ತರೇ ನಿಮ್ಮನ್ನು ದ್ವೇಷಿಸುತ್ತಿದ್ದಾರೆ, ದೂಷಿಸುತ್ತಿದ್ದಾರೆ. ನಮಗೋಸ್ಕರ ಲೇಡಿಯನ್ನು ತಂದಿದ್ದಾರೋ, ನಮಗೋಸ್ಕರ ಜನರಲ್‌ನವರನ್ನು ತಂದಿದ್ದಾರೋ, ಬ್ಯಾಕ್‌ವರ್ಡ್‌ನವರನ್ನು ಹಾಕಿದರೋ ಎಂದು ಕೇಳುತ್ತಾರೆ.

ಒಬ್ಬ ಮಾನ್ಯ ಸದಸ್ಯರು : ಇದು ಮಹಿಳೆಯರ ಬಗ್ಗೆ ವಿರೋಧ ಮಾಡುವಂಥಾದ್ದು...

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಅಧ್ಯಕ್ಷರೆ, ಇದು ಮಹಿಳೆಯರ ಬಗ್ಗೆ ವಿರೋಧವೆಂದು ಅಲ್ಲ, ಮಹಿಳೆಯರಿಗಾಗಿ ಶೇ.33ರಷ್ಟು ಮೀಸಲಾತಿ ಇದೆ. ಅದನ್ನು ಅವರಿಗೆ ಕೊಡುವಂಥಾದ್ದರಲ್ಲಿ ನಮ್ಮ ವಿರೋಧವಿಲ್ಲ. ನಾನು ಹೇಳುವಂಥಾದ್ದು ಈ ಪ್ರಾತಿನಿಧ್ಯವನ್ನು ಬರೀ ಒಂದೇ ಕ್ಷೇತ್ರಕ್ಕೆ ಮಹಿಳೆಯರನ್ನು ಹಾಕುವಂಥಾದ್ದರ ಬಗ್ಗೆ ಪ್ರಶ್ನೆ ಮಾಡುತ್ತಿರುವಂಥಾದ್ದು. ಇಲ್ಲಿ ಬಹಳಷ್ಟು ಮೋಸವಾಗಿದೆ. ಇವತ್ತು ಮಾಡಿರುವಂತಹ ಜಿಲ್ಲಾ ಪಂಚಾಯತ್ ನೋಟಿಫಿಕೇಶನ್‌ನಲ್ಲಿ ಬಹಳಷ್ಟು ಅನ್ಯಾಯವಾಗಿದೆ, ಅದು ಅವೈಜ್ಞಾನಿಕವಾಗಿದೆ.

ಶ್ರೀ ಎಸ್.ಪಿ.ಮುದ್ದ ಹನುಮೇಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು 'ಮೋಸ' ಎನ್ನುವಂತಹ ಪದವನ್ನು ಬಳಸುವುದು ಅಷ್ಟು ಸೂಕ್ತವಲ್ಲವೆಂದು ನನಗೆ ಅನ್ನಿಸುತ್ತದೆ. ಅವರು ಅನ್ಯಾಯವಾಗಿದೆ ಎಂದು ಬೇಕಾದರೆ ಹೇಳಲಿ.

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಏನೇನು ಸುದ್ದಿ ಇದೆ, ಅದನ್ನು ಮಾನ್ಯ ಸಚಿವರು ತರಿಸಿಕೊಂಡು ಎಲ್ಲೆಲ್ಲಿ ಈ ರೀತಿಯಾಗಿ ಅನ್ಯಾಯವಾಗಿದೆ, ಎಲ್ಲೆಲ್ಲಿ ರಿಜರ್ವೇಶನ್ ಒಂದೇ ಕ್ಷೇತ್ರಕ್ಕೆ ಮಾಡಿದ್ದಾರೆ, ಈ ಜಿಲ್ಲಾಧಿಕಾರಿಗಳು ಮಾಡಿರುವಂಥಾದ್ದು ಸರಿಯಾಗಿಲ್ಲ. ಅದನ್ನು ತಾವು ಸರಿ ಮಾಡಬೇಕೆಂಬ ದೃಷ್ಟಿಯಿಂದ ಒಟ್ಟಾರೆ ತೆಗೆದುಕೊಂಡು ರಿವ್ಯೂ ಮಾಡಿ ಫೈನಲ್ ನೋಟಿಫಿಕೇಶನ್ ಅನ್ನು ಹೊರಗೆ ತರುವಂಥಾ ವ್ಯವಸ್ಥೆಯಾಗಬೇಕು, ಏಕೆಂದರೆ ಇದರಲ್ಲಿ ಬಹಳ ಅನ್ಯಾಯವಿದೆ, ನೋಟಿಫಿಕೇಶನ್ ಆಗಿರುವಂಥಾದ್ದು ಅನ್ಯಾಯವಾಗಿದೆ. ''ಒಂದು ಕಣ್ಣಿಗೆ ಬೆಣ್ಣೆ ಒಂದು ಕಣ್ಣಿಗೆ ಸುಣ್ಣ'' ಇಡುವಂತಹ ಕಾರ್ಯ ಈ ಸರ್ಕಾರದಿಂದ ಆಗಿದೆ. ಆ ಉದ್ದೇಶದಿಂದಲೇ ತರಾತುರಿಯಿಂದ ತಂದಂತಹ ಜಿಲ್ಲಾ ಪಂಚಾಯತ್ ರೋಸ್ಟರ್ ಸಿಸ್ಟಂ ಮತ್ತು ಮೀಸಲಾತಿಯಲ್ಲಿ ತಂದಂತಹ ವ್ಯವಸ್ಥೆಗೆ ಈ ಕಾರ್ಯ ಮಾಡಿದ್ದಾರೆ. ಮಾನ್ಯ ಸಚಿವರು ಚುನಾವಣೆ ಬಗ್ಗೆ ಗ್ರಾಮ ಪಂಚಾಯತ್ ಚುನಾವಣೆ ಮಾಡಿದ್ದೇವೆ, ತಾಲ್ಲೂಕು ಪಂಚಾಯತ್, ಜಿಲ್ಲಾ ಪಂಚಾಯತ್ ಚುನಾವಣೆಗಳನ್ನು ಮಾಡಿದ್ದೇವೆಂದು ಹೇಳಿದರು. ಮಾನ್ಯ ಮುಖ್ಯಮಂತ್ರಿಯವರು "We are committed to it."

ಎಂದು ಹೇಳಿದ್ದಾರೆ. ಇದನ್ನು ಸ್ವಾಗತ ಮಾಡುತ್ತೇನೆ. ಆದರೆ ಈ ರೀತಿಯಾಗಿ ಆಗಿರುವಂತಹ ಅನ್ಯಾಯವನ್ನು ಸರಿಪಡಿಸಬೇಕೆಂದು ನಾನು ಮಾನ್ಯ ಸಚಿವರನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಪಿ.ಜಿ.ಆರ್.(ಕನಕಪುರ): ಮಾನ್ಯ ಅಧ್ಯಕ್ಷರೆ, ಮೊದಲನೆಯದಾಗಿ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯತ್‌ಗಳಲ್ಲಿ ಸ್ಥಾನಗಳ ಮೀಸಲಾತಿ ವಿಷಯವನ್ನು ನಿಯಮ 69ರ ಅಡಿಯಲ್ಲಿ ಪ್ರಸ್ತಾಪ ಮಾಡಲಿಕ್ಕೆ ತಾವು ಅವಕಾಶ ಕಲ್ಪಿಸಿದ್ದಕ್ಕಾಗಿ ನಾನು ನಿಮಗೆ ಚಿರಋಣಿಯಾಗಿದ್ದೇನೆ. ಇವತ್ತು ಮಾನ್ಯ ಎಂ.ವೈ.ಘೋರ್ಪಡೆಯವರು ಗ್ರಾಮೀಣಾಭಿವೃದ್ಧಿ ಸಚಿವರಾಗಿ ತಮ್ಮ ವಾದವನ್ನು ನಮ್ಮ ಮುಂದೆ ಇಡುತ್ತಾರೆ, ನಾವು ಹೇಳುವಂತಹ ವಿಚಾರಗಳು ಅವರಿಗೆ ಹಿಡಿಸುತ್ತದೆ. ಏಕೆಂದರೆ ಅವರ ಮನಸ್ಸನ್ನು ನಾವು ಗೆದ್ದಿದ್ದೇವೆ, ಅದರಲ್ಲಿ ಸಂಶಯವಿಲ್ಲ. ಆದರೆ ನಮಗೆ ಬಂದಿರುವಂಥಾದ್ದು, ಆಡಳಿತ ಪಕ್ಷದಲ್ಲಿ ಕುಳಿತಿರುವಂತಹ ಶಾಸಕರ ಮನಸ್ಸನ್ನು ಗೆಲ್ಲಲಿಕ್ಕೆ, ಅವರ ಮನಸ್ಸನ್ನು ಬದಲಾಯಿಸುವುದಕ್ಕೆ, ಆಡಳಿತ ಪಕ್ಷದ ಮಂತ್ರಿಗಳು ಅವರ ಮನಸ್ಸನ್ನು ಬದಲಾವಣೆ ಮಾಡಿಕೊಳ್ಳುವಂಥಾದ್ದಕ್ಕೆ ಇವತ್ತಿಗೂ ಸಾಧ್ಯವಿದೆ. ಆದುದರಿಂದ ಒಂದೆರಡು ವಿಚಾರಗಳನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ಈ ವಿಕೇಂದ್ರೀಕರಣ ವಿಚಾರದಲ್ಲಿ ಇಡೀ ದೇಶಕ್ಕೆ ಕರ್ನಾಟಕ ರಾಜ್ಯ ಒಂದು ಮಾದರಿ ಎನ್ನುವುದನ್ನು ನಾವೆಲ್ಲರೂ ಸಹಿತ ಒಪ್ಪಲೇಬೇಕು. ಈಗ ಎಸ್.ಕೆ.ಡಿಯವರ ಕಾಲದಲ್ಲಿ ಮಾನ್ಯ ರಾಮಕೃಷ್ಣ ಹೆಗಡೆಯವರು, ಹಾಗೂ ಮಾನ್ಯ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದಂತಹ ಕಾಲದಲ್ಲಿ ತಾವು ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಇಡೀ ರಾಷ್ಟ್ರಕ್ಕೆ ಒಂದು ಮಾದರಿಯಾದಂತಹ ಗ್ರಾಮ ಪಂಚಾಯತ್ ವಿಚಾರವನ್ನು ತಂದಿರುವಂಥಾದ್ದು ತಮಗೂ ಸ್ವಾಭಾವಿಕವಾಗಿ ಜ್ಞಾಪಕದಲ್ಲಿರುತ್ತದೆ. ಇದು ಇವತ್ತಿಗೂ ಪ್ರಯತ್ನವಾಗುತ್ತಿದೆ, ಅದನ್ನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳಬೇಕಾಗುತ್ತದೆ. ಆದರೆ 1983ರಲ್ಲಿ ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದಂತಹ ಕಾಲದಲ್ಲಿ ನಮ್ಮ ಕರ್ನಾಟಕ ರಾಜ್ಯಕ್ಕೆ ಮಾದರಿಯಾದಂತಹ ಪಂಚಾಯತ್ ಕಾನೂನನ್ನು ತಂದಿರುವಂಥಾದ್ದು, ಇದನ್ನು ಎಲ್ಲರೂ ಹೆಮ್ಮೆಯಿಂದ ಹೇಳುವಂತಹ ವಿಚಾರವಾಗಿದೆ.

ಆವತ್ತು ನಜೀರ್ ಸಾಹೇಬರು ಬದುಕಿದ್ದಂಥ ಸಂದರ್ಭದಲ್ಲಿ, ನಾವು ಮಾಡಿದಂಥ ಈ ಪಂಚಾಯಿತಿಯ ಮೊದಲನೆಯ ಕಾನೂನಿನ ಸಂದರ್ಭದಲ್ಲಿ, ಆಡಳಿತಪಕ್ಷ ಮತ್ತು ವಿರೋಧಪಕ್ಷಗಳು ಹೀಗೆ ಇರಲಿಲ್ಲ. ಆವತ್ತು ಆಡಳಿತ ಪಕ್ಷಕ್ಕೂ, ವಿರೋಧ ಪಕ್ಷಕ್ಕೂ ಅಂತರವಿದ್ದದ್ದು ಕೇವಲ 8-10 ಸೀಟುಗಳು ಮಾತ್ರ. ವಿಧಾನಸಭೆಯಲ್ಲಿ ಸುಮಾರು 80-90 ಜನ ವಿರೋಧ ಪಕ್ಷದಲ್ಲಿದ್ದರು. ಆ ಸಂದರ್ಭದಲ್ಲಿ ನಾವು ಆ ಮಸೂದೆಯನ್ನು ತೆಗೆದುಕೊಂಡು ಬಂದೆವು. ಅದು ಆದ ನಂತರ, ಅದು ಸರಿಯಿದೆ ಎನ್ನುವ ದೃಷ್ಟಿಯನ್ನಿಟ್ಟುಕೊಂಡು ಆಗಿನ ಪ್ರಧಾನಿಗಳಾದಂಥ ಶ್ರೀ ರಾಜೀವ್ ಗಾಂಧಿಯವರು ಇಡೀ ದೇಶಕ್ಕೇ ಮಾದರಿಯಾಗಿರತಕ್ಕಂಥ ಒಂದು ಕಾನೂನು ತಂದಿದ್ದನ್ನು ನಾವೆಲ್ಲರೂ

ಒಪ್ಪಿಕೊಳ್ಳಬೇಕಾಗುತ್ತದೆ. ಹಿಂದಿನ ಬೇರೆ ಪ್ರಧಾನಿಗಳಿಗೆ ಸಮಯ, ಸನ್ನಿವೇಶಗಳಿಂದ ಅದು ಆಗದೇ ಇರಬಹುದು. ಆದರೆ ಶ್ರೀ ರಾಜೀವ್ ಗಾಂಧಿಯವರು ಸಂವಿಧಾನದಲ್ಲಿ ಅದನ್ನು ಸೇರಿಸಿ ಕಾರ್ಯಗತ ಮಾಡಿದುದನ್ನು ನಾವೆಲ್ಲರೂ ಸಹಿತ ಒಪ್ಪಿಕೊಳ್ಳಬೇಕಾಗುತ್ತದೆ. ಇದು ವಾಸ್ತವಾಂಶ. ಆದರೆ ಇವತ್ತು, ಅದು ಯಾವುದೇ ಸರ್ಕಾರವಿರಲಿ, ಆ ವ್ಯವಸ್ಥೆಯಲ್ಲಿ ಇರತಕ್ಕಂಥ ಭ್ರಷ್ಟಾಚಾರ ಅಥವಾ ಇರತಕ್ಕಂಥ ನ್ಯೂನತೆಗಳನ್ನು ಸರಪಡಿಸಲು ಪ್ರಯತ್ನ ಮಾಡಬೇಕೇ ವಿನಃ ಆ ವ್ಯವಸ್ಥೆಯನ್ನು, ಆ ಸಂಸ್ಥೆಯನ್ನು ಸಂಪೂರ್ಣವಾಗಿ ನಾಶ ಮಾಡಲು ಹೋಗಬಾರದು ಎನ್ನುವುದು ನಮ್ಮ ನಿಮ್ಮ ವಾದ. ನನಗೆ ಬಹಳ ಸಂತೋಷ. ನಮ್ಮ ಗ್ರಾಮೀಣಾಭಿವೃದ್ಧಿ ಮಂತ್ರಿಗಳ ಜೊತೆಯಲ್ಲಿ ಬಹಳ ವಿಚಾರವಾದಿಗಳಾದವರೂ ಈ ಸರ್ಕಾರದಲ್ಲಿದ್ದಾರೆ. ಅವರು ಮಾನ್ಯ ಕೆ.ಹೆಚ್.ರಂಗನಾಥ್‌ರವರು ಇರಬಹುದು, ಮಾನ್ಯ ಕಾಗೋಡು ತಿಮ್ಮಪ್ಪನವರು ಇರಬಹುದು ಅಥವಾ ಪ್ರೊಫಸರ್ ಬಿ.ಕೆ.ಚಂದ್ರಶೇಖರ್‌ರವರು ಇರಬಹುದು. ಈ ವಿಕೇಂದ್ರೀಕರಣದ ಬಗ್ಗೆ Prof.B.K.Chandrashekar, I want you to kindly participate in this debate. ಅವರು ಈ ಡಿಬೇಟ್‌ನಲ್ಲಿ ಪಾರ್ಟಿಸಿಪೇಟ್ ಮಾಡಬೇಕು ಎಂದು ನಾನು ಬಯಸುತ್ತೇನೆ. ಈ ಸದನದ ಹೊರಗಡೆ ತಾವು ಅನೇಕ ವಿಚಾರಗಳನ್ನು ಮಾತನಾಡಿದ್ದೀರಿ. ಹೊರಗೆ ತಾವು ಏನು ಹೇಳಿದ್ದೀರಿ, ಅದಕ್ಕೆ ಈ ಸದನಲ್ಲೂ ಬದ್ಧರಾಗಿ ನಿಲ್ಲುತ್ತೀರಿ ಎನ್ನುವ ವಿಚಾರಗಳನ್ನು ತಾವು ಹೇಳಬೇಕಾಗುತ್ತದೆ. ಕಾನೂನು ಇರಬಹುದು, ಒಂದು ವ್ಯವಸ್ಥೆಯನ್ನು ಬದಲಾವಣೆ ಮಾಡತಕ್ಕಂಥಾದ್ದು ಇದು, ಪರ್ಯಾಯವಾಗಿರತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡತಕ್ಕಂಥಾದ್ದು ಇದು. ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಮಧ್ಯೆ ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಇವತ್ತು ಇಡೀ ದೇಶದಲ್ಲೇ ಘರ್ಷಣೆ ನಡೆಯುತ್ತಿದೆ. ಕೇಂದ್ರ ಸರ್ಕಾರವನ್ನು ಎಲ್ಲ ರಾಜ್ಯ ಸರ್ಕಾರಗಳವರು ಅಟಾನಮಿಯನ್ನು ಏಕೆ ಕೇಳುತ್ತಿದ್ದಾರೆ, ಸಣ್ಣಪುಟ್ಟ ಪ್ರಾಂತ್ಯಗಳಿಗೂ ಸಹ ನಮಗೆ ರಾಜ್ಯಗಳ ಮಟ್ಟ ಬೇಕು ಎಂದು ಕೇಳಿದುದನ್ನು ಏಕೆ ನಾವು ಕೇಳುತ್ತಿದ್ದೇವೆ.

State-hood ಅನ್ನು ಡೆಲ್ಲಿಯವರು ಏಕೆ ತೆಗೆದುಕೊಂಡರು, ಗೋವಾದರು ಏಕೆ ತೆಗೆದುಕೊಂಡರು, ಪಾಂಡಿಚೆರಿಯವರು ಏಕೆ ತೆಗೆದುಕೊಂಡರು, ಅದೇ ರೀತಿಯಲ್ಲಿ ಒಂದು ಸಂಸ್ಥೆಯನ್ನು ಕಟ್ಟತಕ್ಕಂಥ ವಿಚಾರವಿದು. ಈ ವ್ಯವಸ್ಥೆಯನ್ನು ನಾವು ಸರಿಪಡಿಸಬೇಕಾಗುತ್ತದೆ. ಇವತ್ತು ರಾಜ್ಯ ಸರ್ಕಾರಕ್ಕೆ ಏನೇನು ಹಕ್ಕುಗಳು ಬೇಕು, ಕೇಂದ್ರ ಸರ್ಕಾರ ಯಾವ ಹಕ್ಕುಗಳನ್ನು ಕೊಟ್ಟಿಲ್ಲ, ಆ ಹಕ್ಕುಗಳನ್ನು ಕೊಡಬೇಕು ಎನ್ನುವ ಪ್ರತಿಪಾದನೆಯನ್ನು ಎಲ್ಲ ಕಡೆಗಳಲ್ಲೂ ಮಾಡಿಕೊಂಡು ಬಂದಿದ್ದಾರೆ. ಅದೇ ರೀತಿಯಲ್ಲಿ ರಾಜ್ಯ ಸರ್ಕಾರದವರು, ಅದು ಜಿಲ್ಲಾ ಮಟ್ಟಕ್ಕೆ ಇರಬಹುದು, ಬ್ಲಾಕ್ ಮಟ್ಟಕ್ಕೆ ಇರಬಹುದು ಅಥವಾ ಪಂಚಾಯಿತಿ ಮಟ್ಟಕ್ಕೆ ಇರಬಹುದು ಅದಕ್ಕೆ ಒಂದು ಹಣಕಾಸಿನ ವ್ಯವಸ್ಥೆಯನ್ನು ಮಾಡಬೇಕು ಇವತ್ತು ನಾವು ಪಂಚಾಯಿತಿಗಳನ್ನು ಮಾಡಿದ್ದೇವೆ. ಅಲ್ಲಿರತಕ್ಕಂಥ ಭ್ರಷ್ಟಚಾರ ಅಥವಾ ಅಲ್ಲಿರತಕ್ಕಂಥ ಹಣಕಾಸಿನ

ವ್ಯವಸ್ಥೆಯನ್ನು ಸರಿ ಮಾಡಲು ಕಾರ್ಯಕ್ರಮ ಹಾಕಿಕೊಳ್ಳದೇ ಇರುವ ವಿಚಾರವನ್ನು ಎಲ್ಲ ಗೌರವಾನ್ವಿತ ಸದಸ್ಯರು ಹೇಳಿದ್ದಾರೆ. ತಾವು ನಿನ್ನೆ ಕುಡಿಯುವ ನೀರಿನ ವಿಚಾರದಲ್ಲಿ ಉತ್ತರವನ್ನು ಕೊಟ್ಟಿದ್ದೀರಿ. ನನಗನ್ನಿಸುತ್ತದೆ, ಈ ಸದನದಲ್ಲಿ ಗಂಭೀರವಾಗಿರತಕ್ಕಂಥ ವಿಚಾರಗಳ ಚರ್ಚೆಗಳಿಗೆ ನೀವು ನಮಗೆ ಪರಿಹಾರವನ್ನು ಕೊಟ್ಟಿಲ್ಲ. ಒಂದು ಕ್ಷೇತ್ರಕ್ಕೆ 10 ಲಕ್ಷವೋ, 15 ಲಕ್ಷವೋ ದುಡ್ಡನ್ನು ಕೊಡದೇ ಇರಬಹುದು. ಆದರೆ ಇನ್ನು 10-15 ವರ್ಷಗಳ ನಂತರ ಏನು ಆಗಬಹುದು ಎಂದು ನೀವು ಹೇಳಿರತಕ್ಕಂಥ ವಿಚಾರಗಳು ಏನಿವೆ ಎನ್ನುವುದಕ್ಕೆ ಬಹಳ ಪರಿಣಾಮಕಾರಿಯಾದಂಥ ಅತ್ಯಂತ ಉತ್ತಮವಾದ ಉತ್ತರವನ್ನು ನಾನು ಹೇಳಲು ಬಯಸುತ್ತೇನೆ. ಅಷ್ಟೆಲ್ಲಾ ಮಾಡಿರತಕ್ಕವರಿಂದ ಈ ಒಂದು ವಿಕೇಂದ್ರೀಕರಣ ವ್ಯವಸ್ಥೆಗೆ ಅಪಚಾರವಾಗುವಂಥ ಕೆಲಸ ಏಕೆ ನಿಮ್ಮಿಂದ ಆಗಬೇಕು ಎನ್ನುವುದೇ ನಮಗೆ ಅರ್ಥ ಆಗದೇ ಇರತಕ್ಕಂಥಾದ್ದು. ನಾವು ವಿರೋಧ ಪಕ್ಷದವರು, ನಮ್ಮ ಕ್ಷೇತ್ರಗಳಲ್ಲಿ ಬಹಳ ಸುಲಭವಾಗಿ ಹೇಳಿಬಿಡುತ್ತೇವೆ, ನಮ್ಮದೇನೂ ನಡೆಯಲಿಲ್ಲಪ್ಪಾ, ಆಡಳಿತ ಪಕ್ಷದವರದ್ದು ನಡೆದಿದೆ, ನಾವೇನು ಮಾಡುವುದು ಎಂದು ಹೇಳಿ ನಾವು ಸುಮ್ಮನೆ ಇರಬಹುದು. ಆದರೆ ವ್ಯವಸ್ಥೆಗೆ ಏನಾಗುತ್ತದೆ ಎನ್ನುವುದನ್ನು ದಯವಿಟ್ಟು ತಾವು ವಿಚಾರ ಮಾಡಿ. ಇವತ್ತು ಅನೇಕರ ಮನಸ್ಸಿನಲ್ಲಿ, ನಾವೇ ಎಲ್ಲವನ್ನೂ ಸಹ ತೆಗೆದುಕೊಳ್ಳಬೇಕು ಎನ್ನವಂತಾಗಿದೆ. I am directly responsible for that ಎಂ.ಎಲ್.ಎ.ಗಳನ್ನು ಕೇಳುತ್ತಾರೆ, ಎಂ.ಎಲ್.ಎ. ಇದ್ದರೆ ಸರ್ಕಾರ, ಎಂ.ಎಲ್.ಎ ಈಸ್ ಆನ್ಸರಬಲ್ ಎನ್ನತಕ್ಕಂಥ ಭಾವನೆ ಇದೆ. .ಇವತ್ತು ನಾವು ವಿಕೇಂದ್ರೀಕರಣವನ್ನು ಏತಕ್ಕೋಸ್ಕರ ಮಾಡಿರುವುದು? ವಿಕೇಂದ್ರೀಕರಣ ಮಾಡಿರುವುದು ಏಕೆಂದರೆ, ಜನಗಳು ಇದರಲ್ಲಿ ಪಾರ್ಟಿಸಿಪೇಟ್ ಮಾಡಬೇಕು ಎಂದು ಒಂದು ಊರಿಗೆ ಒಂದು ಹೆಲ್ತ್ ಕಮಿಟಿ ಮಾಡಬೇಕು, ಸಾಯಿಲ್ ಕನ್ಸರ್ವೇಷನ್ ಕಮಿಟಿ ಮಾಡಬೇಕು, ವಾಟರ್ ಕನ್ಸರ್ವೇಷನ್ ಕಮಿಟಿ ಮಾಡಬೇಕು, ಫಾರೆಸ್ಟ್‌ಕನ್ಸರ್ವೇಷನ್ ಕಮಿಟಿ ಮಾಡಬೇಕು ಹೆಲ್ತ್ ಕಮಿಟಿ ಮಾಡಬೇಕು, ಇವನ್ನೆಲ್ಲ ಮಾಡಿ ಇಂಪ್ರೂವ್ ಮಾಡಬೇಕು ಎಂದು. ಗ್ರಾಮ ಸ್ವರಾಜ್ಯ ಎಂದರೆ ಅದೇ ಅಲ್ಲವೇ? ಅಂದರೆ ಜನಗಳು ಅದರಲ್ಲಿ ಭಾಗವಹಿಸಬೇಕು. ಇವತ್ತು ಜನಸಂಖ್ಯೆಯ ನಿಯಂತ್ರಣದ ಕೆಲಸ ಏಕೆ ಯಶಸ್ವಿಯಾಗಿ ಆಗಲಿಲ್ಲ? ಏಕೆಂದರೆ ಅದರಲ್ಲಿ ಜನಗಳು ಭಾಗವಹಿಸುತ್ತಿಲ್ಲ. ಅದೇ ರೀತಿಯಲ್ಲಿ, ನಮ್ಮ ಕಾಡುಗಳನ್ನು, ನಮ್ಮ ಮಣ್ಣನ್ನು, ನಮ್ಮ ನೀರನ್ನು ಸಂರಕ್ಷಣೆ ಮಾಡಲು ಆಗದೇ ಇರತಕ್ಕಂಥಾದ್ದು ಏಕೆಂದರೆ ಅದರಲ್ಲಿ ಜನಗಳು ಭಾಗವಹಿಸುವಂತೆ ಮಾಡಲು ನಮ್ಮ ಕೈಯ್ಯಲ್ಲಿ ಆಗಲಿಲ್ಲ. ಇವತ್ತು ಎಲ್ಲ ರಾಜಕೀಯ ಪಕ್ಷಗಳೂ ದಿವಾಳಿ ಎದ್ದಿರುವುದರಿಂದಾಗಿ ಈ ಕೆಲಸ ಮಾಡಲು ಆಗುತ್ತಿಲ್ಲ. ಈ ಮಧ್ಯದಲ್ಲಿ ಒಂದು ಸಂಸ್ಥೆಯನ್ನು ಕಟ್ಟಬೇಕು, ಒಂದು ಸಂಸ್ಥೆಯನ್ನು ಉಳಿಸಬೇಕು, ಪರ್ಯಾಯವಾದಂಥ ಒಂದು ವ್ಯವಸ್ಥೆಯನ್ನು ಕಟ್ಟಬೇಕು ಎಂದರೆ, ನೀವು ಹೇಳತಕ್ಕಂಥಾದ್ದು ಏನೆಂದರೆ ಇದರ ಬಗ್ಗೆ ಚರ್ಚೆಯಾಗತಕ್ಕಂಥ ಸಂದರ್ಭದಲ್ಲಿ ನೀವು ಇದರಲ್ಲಿ ಭಾಗವಹಿಸಲಿಲ್ಲ, ರಾಜ್ಯಪಾಲರ ಹತ್ತಿರ ಹೋಗಿದ್ದಿರಿ, ಗ್ರಾಮ ಪಂಚಾಯಿತಿ

ಚುನಾವಣೆಗಳನ್ನು ಮುಂದೂಡಿದಿರಿ ಎಂದು. ಸ್ವಾಮಿ, ನಾನು ಹೇಳುತ್ತೇನೆ, ನಾವು ಮಾಡಿರುವುದು ತಪ್ಪು, ಅದನ್ನೇ ನೀವು ಮುಂದುವರಿಸಿಕೊಂಡು ಹೋಗಲಿಲ್ಲ. ಅದರ ಬಗ್ಗೆ ನಾವು ಸಂತೋಷ ಪಟ್ಟಿದ್ದೇವೆ. ರಾಜಕೀಯ ಕಾರಣಕ್ಕೋಸ್ಕರ ಮುಂದೆ ಹಾಕಿದ್ದೇವೆ ಎಂದು ಹೇಳುವಂಥ ಪ್ರಾಮಾಣಿಕತೆಯನ್ನು ಮಾನ್ಯ ಎಸ್.ಎಸ್.ಪಾಟೀಲರು ಮೊನ್ನೆ ವ್ಯಕ್ತ ಮಾಡಿದರು. ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ನಾವು ತಪ್ಪಿದ್ದೇವೆ, ಎಡವಿದ್ದೇವೆ. ಮತ್ತೆ ನೀವು ಎಡವಬೇಕು ಎನ್ನತಕ್ಕಂಥಾದ್ದೇನೂ ಇಲ್ಲ. ಸರ್ಕಾರ ಪಾಠ ಕಲಿಯಬೇಕಾಗಿರುವುದು ಚರ್ಚೆಯಿಂದ. ಆದರೆ ಇವತ್ತು ನೀವು ಎಲ್ಲಿಗೆ ಹೊರಟಿದ್ದೀರಿ? ಚುನಾವಣೆ ನಡೆಸುವುದೇ ಒಂದು ದೊಡ್ಡ ಸಾಧನೆಯೇ? ಚುನಾವಣೆ ನಡೆಸುವುದು ಒಂದು ದೊಡ್ಡ ಸಾಧನೆಯೇನಲ್ಲ. ಅದೇ ನಮ್ಮ ಸಾಧನೆ, ನಾವು ಚುನಾವಣೆಗಳನ್ನು ನಡೆಸಿದ್ದೇವೆ ಎಂದು ಹೇಳಿಕೊಳ್ಳುವುದಾದಲ್ಲಿ ಅದರಲ್ಲಿ ನಮ್ಮದೇನೂ ತಕರಾರಿಲ್ಲ. ಆದನ್ನೇ, ನಮ್ಮ ಸಾಧನೆ ಎಂದು ಹೇಳಿಕೊಂಡು ತಿರುಗಾಡಿ. ಆದರೆ ಆಗಿರತಕ್ಕಂಥಾದ್ದು ಏನು? ಇದನ್ನು ತಾವು ವಿಚಾರ ಮಾಡಿ. ನಮ್ಮ ಸರ್ಕಾರ ಇದ್ದಾಗ ನಾವು ಮಾಡಿದೆವು ಎನ್ನುವ ಮಾತನ್ನು ನಾವು ಹೇಳಿದರೆ ಅದು ನಿಮಗೆ ಹಿಡಿಸುವುದಿಲ್ಲ. ವಸ್ತುಸ್ಥಿತಿ ಏನೆಂದರೆ, ಈ ರಾಜ್ಯದಲ್ಲಿ ನಿಜವಾಗಿ ಹಿಂದುಳಿದವರ ಕೈಗೆ ಅಧಿಕಾರವನ್ನು ಕೊಡತಕ್ಕಂಥ ಕೆಲಸ ಆಗಿದ್ದು ನಮ್ಮ ಕಾಲದಲ್ಲಿ. ಶೇ.95ರಷ್ಟು ಬ್ಯಾಕ್‌ವರ್ಡ್ ಕ್ಲಾಸ್‌ಗಳ ಕವರೇಜ್ ಆಗಿತ್ತು. ಕರ್ನಾಟಕದಲ್ಲಿರುವ ಒಕ್ಕಲಿಗರಿಗೆ, ಲಿಂಗಾಯಿತರಿಗೆ ನಾನು ಈ ಸಭೆಯ ಮೂಲಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಏಕೆ? ಅದಕ್ಕೆ ಕಾರಣವಿದೆ. ಬಿಹಾರದಲ್ಲಿ ಹಿಂದುಳಿದ ವರ್ಗದವರಿಗೆ ರಿಸರ್ವೇಷನ್ ಮಾಡಿದಂಥ ಸಂದರ್ಭದಲ್ಲಿ ಬೇರೆ ಜಾತಿಯವರು ಪ್ರತಿಭಟನೆ ಮಾಡಿದರು. ಗುಜರಾತಿನಲ್ಲಿ ಸರ್ಕಾರವನ್ನು ಕಿತ್ತು ಹಾಕಿದರು. ಆದರೆ ಕರ್ನಾಟಕದ ಒಕ್ಕಲಿಗರು, ಲಿಂಗಾಯಿತರು ಆ ಕೆಲಸವನ್ನು ಮಾಡಲು ಹೋಗಲಿಲ್ಲ. ಅವರು ನಮಗೆ ಸಹಕಾರವನ್ನು ಕೊಟ್ಟಿದ್ದಾರೆ. ಅದಕ್ಕೋಸ್ಕರ, ನಾವು ಇದ್ದಾಗ 'ಎ' ವರ್ಗವನ್ನು ಸೃಷ್ಟಿ ಮಾಡಿದೆವು. 'ಎ' ವರ್ಗವನ್ನು ಸೃಷ್ಟಿ ಮಾಡಿದ ಕಾರಣದಿಂದ ಮುಸಲ್ಮಾನರು, ಕುರುಬರು, ತಿಗಳರು, ಈಡಿಗರು, ಕುಂಬಾರರು, ಬೆಸ್ತರು, ಪರಿಶಿಷ್ಟ ಜಾತಿಯವರು, ಪರಿಶಿಷ್ಟ ವರ್ಗದವರು, ಯಾರಿಗೆ ಸಂವಿಧಾನದಲ್ಲಿ ಮೀಸಲಾತಿಯನ್ನು ಕೊಡಲು ಆಗಿರಲ್ಲಿ, ಯಾರು ಅಧಿಕಾರದಿಂದ ವಂಚಿತರಾಗಿದ್ದರು, ಅಂಥ ವರ್ಗಕ್ಕೆ ಸೇರಿದ 'ಎ' ವರ್ಗದ ಜನಗಳಿಗೆ ಮೀಸಲಾತಿಯನ್ನು ಕೊಡತಕ್ಕಂಥ ಕೆಲಸ ಆಯಿತು. ಇದು ನಮ್ಮ ಸರ್ಕಾರದ ಸಾಧನೆ ಎನ್ನುವುದನ್ನು ನೀವು ಒಪ್ಪಬೇಕು. ಏಕೆಂದರೆ, ನಮ್ಮ ಕಾಲದಲ್ಲಿ 95% of the population of KARNATAKA..............

ಶ್ರೀ ಎಂ.ವೈ.ಘೋರ್ಪಡೆ: ತಮ್ಮ ಕಾಲದಲ್ಲಿ ಒ.ಬಿ.ಸಿ.ಗೆ ರಿಸರ್ವೇಷನ್ ಕೊಟ್ಟಿರಲಿಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯ: ನೀವು ಹೇಳುವುದು ಸರಿಯಾಗಿದೆ, ನಾನು ಅದನ್ನು

ಒಪ್ಪಿಕೊಳ್ಳುತ್ತೇನೆ. ಆದರೆ 'ಎ' ವರ್ಗವನ್ನು ಯಾರು ಸೃಷ್ಟಿ ಮಾಡಿದ್ದು ಎಂದು ಜ್ಞಾಪಕ ಮಾಡಿಕೊಳ್ಳಿ. 1995ರಲ್ಲಿ ಮೊದಲ ಬಾರಿಗೆ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಪುರಸಭೆಗಳನ್ನು ಮಾಡಿದಾಗ 'ಎ' ವರ್ಗವನ್ನು ಸೃಷ್ಟಿ ಮಾಡಿದ್ದು ನಾವು. ಇಲ್ಲದೇ ಹೋಗಿದ್ದರೆ ಶೇ.95ರಷ್ಟು ಜನಸಂಖ್ಯೆಯನ್ನು ಬ್ಯಾಕ್‌ವರ್ಡ್ ಕ್ಲಾಸ್ ಎಂದು ಕವರ್ ಮಾಡಲು ಆಗುತ್ತಿರಲಿಲ್ಲ. ಆದರೆ ಇವತ್ತು ಹಾಗೆ ಇಲ್ಲ. It will take some time. it has to mature. ಒಂದು ಕಡೆ ನಿಲ್ಲತಕ್ಕ ನೀರು ಅಲ್ಲ ಅದು. ಅದನ್ನು ನಾವು ಮಾಡಿದೆವು. ಆದರೆ ಇವತ್ತು ನೀವು ಈ ಕಾನೂನನ್ನು ತಿದ್ದುಪಡಿ ಮಾಡಿದ್ದೀರಿ. ತಿದ್ದುಪಡಿ ಮಾಡತಕ್ಕಂಥ ಸಂದರ್ಭದಲ್ಲಿ, ಈ ಮನೆಯಲ್ಲಿ ಹೇಳಿದಂತೆ ನಿಮಗೆ ಶೌಚಾಲಯಗಳ ಅವಶ್ಯಕತೆ ಕಂಡುಬರುವುದಿಲ್ಲ. ಆ ಮನೆಗೆ ಹೋದಾಗ ನಿಮಗೆ ಅದರ ಅವಶ್ಯಕತೆ ಕಂಡುಬರುತ್ತದೆ. ಏಕೆ ಹೀಗೆ? ಆ ಮನೆಯಲ್ಲಿ ನಿಮಗೆ ಮೆಜಾರಿಟಿ ಇಲ್ಲವೆಂದೇ? ನಾವು ಹೇಳಿದ್ದು ನಿಮಗೆ ಹಿಡಿಸಲಿಲ್ಲವೇ? ಚುನಾವಣಾ ಆಯೋಗದಿಂದ ಏಕೆ ಇದನ್ನು ವಾಪಸ್ಸು ಪಡಿದಿರಿ? ಈ ಕಡೆ ಕುಳಿತಿರತಕ್ಕಂಥ ನಾಯಕರುಗಳ ಬಗ್ಗೆ ಮಾತನಾಡುತ್ತಾ ಮುಖ್ಯಮಂತ್ರಿಗಳು, ಯಾವ ನಾಲಿಗೆಯಿಂದ ನೀವು ಮಾತನಾಡುತ್ತಿದ್ದೀರಿ ಎಂದು ಹೇಳಿದರು. ಇವತ್ತು ನಾವು ನಿಮಗೆ ಏನು ಹೇಳಬೇಕು? ಚುನಾವಣಾ ಆಯೋಗಕ್ಕೆ ಅಧಿಕಾರ ಕೊಡಿ ಎಂದು ನೀವು ಇಲ್ಲಿ ಕುಳಿತುಕೊಂಡು ಭಾಷಣ ಮಾಡಿದ್ದಿರಿ. ಈಗ ನೀವು ಯಾವ ನಾಲಿಗೆಯಿಂದ ಅದನ್ನು ಇವತ್ತು ಹೇಳುತ್ತಿದ್ದೀರಿ? ಅದೇ ನಾಲಿಗೆ ಇದೆಯೇ ನಿಮಗೆ? ನಿಮ್ಮ ನಾಲಿಗೆ ಬದಲಾವಣೆ ಆಗಿಹೋಯಿತೇ ಮುಖ್ಯಮಂತ್ರಿಗಳೇ? ಇದು ಈಗ ಇರತಕ್ಕಂಥ ಪ್ರಶ್ನೆ. ಅದನ್ನು ಚುನಾವಣಾ ಆಯೋಗದಿಂದ ವಾಪಸ್ಸು ತೆಗೆದುಕೊಂಡಿರಿ. ಈಗ ಆಗಿರತಕ್ಕಂಥಾದ್ದು ಏನು? ಜಿಲ್ಲಾ ಮಂತ್ರಿಗಳಿಗೆ ರಾತ್ರಿಯ ಹೊತ್ತು ನಿದ್ರೆ ಇಲ್ಲ, ಶಾಸಕರುಗಳಿಗೆ ತೃಪ್ತಿ ಇಲ್ಲ. ನಿಮ್ಮ ಆಡಳಿತ ಪಕ್ಷ ಶಾಸಕರುಗಳಿಗೂ ಸಹ ತೃಪ್ತಿ ಇಲ್ಲ. ಕರ್ನಾಟಕ ರಾಜ್ಯ ಪತ್ರದಲ್ಲಿ ಕೋಲಾರ ಜಿಲ್ಲೆಯಲ್ಲಿ ಆಗಿರತಕ್ಕಂಥ ಮೀಸಲಾತಿಯನ್ನು ಶ್ರೀನಿವಾಸಗೌಡರು ಮತ್ತು ಬೈರೇಗೌಡರು ನಿಮ್ಮ ಕಣ್ಣ ಮುಂದೆ ಇಡುತ್ತಿದ್ದಾರೆ.

3.40 ಪಿ.ಎಂ.

ಜಿಲ್ಲಾ ಮಂತ್ರಿಗಳು ಶಾಸಕರನ್ನು ಕರೆಸಿ, ಅವರ ಮೂಲಕ ಮೀಸಲಾತಿಯನ್ನು ಮಾಡಿಸಿರತಕ್ಕಂಥದ್ದು ನಮಗೆಲ್ಲ ಗೊತ್ತಿದೆ. ಇದು ಆಗಬಾರದಾಗಿತ್ತು. ಯಾವ ಮಟ್ಟಕ್ಕೆ ಹೋಗಿದೆಯೆಂದರೆ ಇದು ಬಹಳ ಇಂಟರೆಸ್ಟಿಂಗ್ ಆಗಿದೆ. ''ಹಾವೇರಿ ಜಿಲ್ಲೆಯ ರಿಸರ್ವೇಷನ್: ಈ ಕೆಳಗೆ ಸಹಿ ಮಾಡಿರುವ ನಾವುಗಳು ಹಾವೇರಿ ಜಿಲ್ಲೆಯ ಎಲ್ಲಾ ಶಾಸಕರು, ಜಿಲ್ಲಾಧಿಕಾರಿಗಳು, ಹಾವೇರಿ ಜಿಲ್ಲೆ. ಜಿಲ್ಲಾ ಪಂಚಾಯತಿಗೆ ಸಂಬಂಧಿಸಿದಂತೆ ನಿಗದಿಪಡಿಸಲಾದ ಮೀಸಲಾತಿಯನ್ನು ಸರ್ವಾನುಮತದಿಂದ ನಾವೆಲ್ಲರೂ ಸಹಿತ ಒಪ್ಪಿದ್ದೇವೆ. ಸಹಿ ಹಾಕಿರುವವರು: ಮನೋಹರ್ ಹೆಚ್.ತಹಸೀಲ್ದಾರ್, ಉಪ ಸಭಾಪತಿ; ಶಿವಣ್ಣನವರ್ ಬಸವರಾಜ ನೀಲಪ್ಪ, ಶಾಸಕರು

ಹಾವೇರಿ (ಇವರು ಇತ್ತೀಚೆಗೆ ನಿಮ್ಮ ಪಾರ್ಟಿಗೆ ಸೇರಿದವರು), ಕೋಳಿವಾಡ್, ಶಾಸಕರು; ಬನ್ನಿಕೋಡ್, ಶಾಸಕರು; ರುದ್ರಪ್ಪ ಲಂಬಾಣಿ, ಶಾಸಕರು; ಖಾದ್ರಿ ಶಿಗ್ಗಾಂವ್, ಶಾಸಕರು; ಆಮೇಲೆ ಜಿಲ್ಲಾಧಿಕಾರಿಗಳಾದ ಮುಕ್ತಾಂಬ ಅವರು ನಾಚಿಕೆ ಇಲ್ಲದೆ ಸಹಿ ಹಾಕುತ್ತಾರೆ. ಇದಕ್ಕೆ ಅರ್ಥ ಏನು? ಜಿಲ್ಲಾಧಿಕಾರಿಗಳಿಗೆ ಮಾನಮರ್ಯಾದೆ ಬಿಟ್ಟು ಸಹಿ ಮಾಡುವಂಥದ್ದು ಏನಿತ್ತು? ನೀವು ಬರೀ ಪೊಲೀಸ್ ಠಾಣೆಗಳನ್ನಲ್ಲ, ಜಿಲ್ಲಾಧಿಕಾರಿಗಳ ಕಚೇರಿಯನ್ನು ಸಹ ಕಾಂಗ್ರೆಸೀಕರಣಗೊಳಿಸುವುದಕ್ಕೆ ಹೊರಟಿದ್ದೀರಿ. ಅಧಿಕಾರ ವಿಕೇಂದ್ರೀಕರಣ ಮಾಡುತ್ತೇವೆಂದು ಹೇಳಿ, ನೀವು ಅಧಿಕಾರದ ಕೇಂದ್ರೀಕರಣ ಮಾಡುವುದಕ್ಕೆ ಹೊರಟಿದ್ದೀರಿ. ನೀವು ಹೇಳಿದ ಕಡೆ 'ಎ' ವರ್ಗದ ಮೀಸಲಾತಿ, ನೀವು ಹೇಳಿದ ಕಡೆ 'ಬಿ' ವರ್ಗದ ಮೀಸಲಾತಿ ಕೊಡಬೇಕು. ನೀವು ಹೇಳಿದ ಹೆಣ್ಣುಮಕ್ಕಳು ಗೆಲ್ಲಬೇಕೇ? ಅದಕ್ಕೆ ಮೀಸಲಾತಿಯ ಕಾನೂನು ಏನೂ ಬೇಡವೇ? ಆಡಳಿತ ಪಕ್ಷದ ಶಾಸಕರಿಗೆ ಪ್ರಿವಿಲೇಜ್ ಇರಬೇಕು. ಮಾಡಲಿ, ಬೇಡ ಎಂದು ನಾನು ಹೇಳುವುದಿಲ್ಲ. ನಾವು ವಿರೋಧ ಪಕ್ಷದಲ್ಲಿ ಕುಳಿತುಕೊಂಡು ಆಡಳಿತ ಪಕ್ಷದ ರುಚಿಯನ್ನು ತೆಗೆದುಕೊಳ್ಳುವುದಕ್ಕೆ ತಯಾರಿಲ್ಲ. ವರ್ಗಾವಣೆ ಮಾಡಿಸುವುದಕ್ಕೆ ನಿಮ್ಮ ಹತ್ತಿರ ಬರುವುದಿಲ್ಲ, ಅಥವಾ ಯಾವುದೇ ಫೇವರ್ಸ್‌ಗೆ ನಿಮ್ಮ ಹತ್ತಿರ ಬರುವುದಿಲ್ಲ, ಕಾನೂನು ಪ್ರಕಾರವಾಗಿ ನೀವು ಆಡಳಿತ ನಡೆಸಿ, ನಾವು ಕೂಡ ನಡೆದುಕೊಳ್ಳುತ್ತೇವೆ ಎಂದು ಅಧಿವೇಶನ ಮೊದಲ ದಿವಸವೇ ನಾನು ಹೇಳಿದ್ದೇನೆ. ಆದರೆ ನಿಮ್ಮ ಸರ್ಕಾರ ಮಾಡುತ್ತಿರುವುದೇನು? ಜಿಲ್ಲಾಧಿಕಾರಿ ಕಚೇರಿಯನ್ನು ಪೊಲೀಸ್ ಠಾಣೆಗಳನ್ನು ಕಾಂಗ್ರೆಸ್ ಕಚೇರಿಯನ್ನಾಗಿ ಮಾಡಿದ್ದಾರೆಂದು ಶ್ರೀ ಸದಾನಂದಗೌಡರು ಹೇಳಿದರು. ಡಿ.ಸಿ. ಆಫೀಸ್‌ಗಳನ್ನು, ಕಾಂಗ್ರೆಸ್ ಪಾರ್ಟಿಯ ಅಧೀನ ಕಚೇರಿಗಳನ್ನಾಗಿ ಮಾಡುವುದಕ್ಕೆ ಹೊರಟಿದ್ದೀರಿ. ಇದು ನನಗೆ ಅರ್ಥವಾಗುತ್ತಿಲ್ಲ. ಈಗಲೂ ಸಹಿತ ಕಾಲ ಮಿಂಚಿಲ್ಲ. ಇದನ್ನು ಸರಿ ಪಡಿಸಬಹುದು. ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಅವರ ಆತ್ಮಸಾಕ್ಷಿಯಾಗಿ ಇದನ್ನು ಮಾಡಬಾರದು, ಚುನಾವಣೆ ಆಯೋಗಕ್ಕೆ ಅಧಿಕಾರ ಇರಬೇಕೆಂದು ಹೇಳಿದ್ದಾರೆ. ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರಿಗಾಗಲಿ, ಅಥವಾ ಮಾನ್ಯ ಮುಖ್ಯಮಂತ್ರಿಗಳಿಗಾಗಲಿ ವಸ್ತುಸ್ಥಿತಿಯನ್ನು ತಿಳಿದುಕೊಳ್ಳತಕ್ಕಂಥದ್ದು ಬಹಳ ಕಷ್ಟದಾಯಕವಾದ ಕೆಲಸವಾಗಿದೆ. ಏಕೆಂದರೆ ಕರ್ನಾಟಕದಲ್ಲಿ ಸುಮಾರು 900 ಜಿಲ್ಲಾಪರಿಷತ್ ಸೀಟುಗಳಿವೆ, 3700 ತಾಲ್ಲೂಕು ಪಂಚಾಯಿತಿ ಸೀಟುಗಳಿವೆ, 3700ರಲ್ಲಿ ಮೂರನೇ ಒಂದು ಭಾಗ ಎಂದರೆ ಸುಮಾರು ಒಂದು ಸಾವಿರ ಸೀಟುಗಳು ಹೆಣ್ಣು ಮಕ್ಕಳಿಗೆ ಕೊಡಬೇಕು. ಸುಮಾರು 27 ಪರ್ಸಂಟ್ ಸೀಟುಗಳನ್ನು 'ಎ' ವರ್ಗದವರಿಗೆ ಕೊಡಬೇಕು. ಕಳೆದ ಸಾರಿ ಎಸ್‌ಸಿ/ಎಸ್.ಟಿ.ಯವರಿಗೆ ಇದ್ದಂಥ ಮೀಸಲಾತಿ ಸೀಟನ್ನು ತೆಗೆದು ಜನರಲ್ ಅಥವಾ ಬೇರೆ ವರ್ಗದವರಿಗೆ ಕೊಡುವಂಥದ್ದು, ಕಳೆದ ಸಾರಿ ಬೇರೆ ವರ್ಗದವರಿಗೆ ಕೊಟ್ಟಿರುವುದು ಅದರ ರೊಟೇಷನ್ ಆಗಲೇ ಬೇಕಲ್ಲವೇ? ಆದರೆ ಇದು ಬಹುತೇಕ ಕಡೆಗಳಲ್ಲಿ ಆಗಲಿಲ್ಲ. ಏನು ಗೈಡ್‌ಲೈನ್ಸ್ ಕಳುಹಿಸಿದ್ದೀರಿ ಅದರಂತೆ ತಾವು ದಯವಿಟ್ಟು ಸ್ಕ್ರುಟಿನೈಸ್ ಮಾಡಿಸಿ. ಈ ಚುನಾವಣೆಗಳನ್ನು ಏನಾದರೂ ಮಾಡಿ

ಜೂನ್ 15ನೇ ತಾರೀಕಿನೊಳಗೆ ಮುಗಿಸಬೇಕೆಂದಿದ್ದೀರಿ, ಇದು ನಮಗೆ ಅರ್ಥವಾಗುತ್ತದೆ. ''ಹೌದು, ವಿಧಾನಸಭೆ ಚುನಾವಣೆ ಇದೆ, ನಾಳೆ ಏನಾದರೂ ಆಗಬಹುದು ಎನ್ನುವ ದೃಷ್ಟಿಯಿಂದ ನಾವು ಚುನಾವಣೆಯನ್ನು ಮುಂದಕ್ಕೆ ಹಾಕಿದೆವು. ಏಕೆಂದರೆ ನಾವೇನೂ ಸನ್ಯಾಸಿಗಳಲ್ಲ. ನಾವು ಮುಂದಕ್ಕೆ ಚುನಾವಣೆಯನ್ನು ಹಾಕಿದ್ದು ಸರಿ ಎಂದು ಹೇಳುವುದಿಲ್ಲ.'' ''ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿ ಮೀಸಲಾತಿ ಮತ್ತು ಅದರ ತಿದ್ದುಪಡಿಯನ್ನು ನೀವು 1998-99ರಲ್ಲಿ ಅಲ್ಲ, ನೀವು ಅಧಿಕಾರಕ್ಕೆ ಬಂದ 1995ರಲ್ಲಿಯೇ ಮಾಡಬೇಕು'' ಎಂದು ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಪಕ್ಷದ ಒಳಗಡೆ ಹೇಳಿ ಏಕೆ ಮಾಡಲಿಲ್ಲ ಎಂದು ಕೇಳಿದರು. ಇದನ್ನು ನಾವು ಒಪ್ಪಿಕೊಳ್ಳುತ್ತೇವೆ. ನಾವು ಚುನಾವಣೆ ಮಾಡದೆ ತಡ ಮಾಡಿದ್ದೇವೆ. ಅದೇ ತಪ್ಪನ್ನು ನೀವು ಮತ್ತೆ ಮಾಡಬೇಕೆಂದು ನಾವು ಬಯಸುವುದಿಲ್ಲ. ಇವರು ಮಾದರಿಯಾಗಿ ಹೇಗೆ ವಿಕೇಂದ್ರೀಕರಣ ಮಾಡುವುದಕ್ಕೆ ಹೊರಟಿದ್ದಾರೆ ಎನ್ನುವುದನ್ನು ದೇಶದ ಹೊರಗಡೆಯಿಂದ ಜನ ಬಂದು ನೋಡುತ್ತಿದ್ದಾರೆ. ನಾವು ಚುನಾವಣೆಯನ್ನು ಸಮಯಕ್ಕೆ ಸರಿಯಾಗಿ ಮಾಡಿಲ್ಲವೆಂದು ಅದನ್ನೇ ನೆಪ ಮಾಡಿಕೊಂಡು ಚುನಾವಣೆ ಮಾಡುತ್ತಿದ್ದೇವೆಂದು ಹೇಳಿ ನೀವು ಇವತ್ತು ಕೇವಲ ನಿಮ್ಮ ಪಕ್ಷದ ಕಾರ್ಯಕರ್ತರನ್ನು ಸಮಾಧಾನ ಮಾಡುವುದಕ್ಕೆ ಹೊರಟಿದ್ದೀರಿ. ನಿಮ್ಮ ಪಕ್ಷದ ಕಾರ್ಯಕರ್ತರನ್ನು ನೀವು ಸಮಾಧಾನ ಮಾಡುವುದಕ್ಕಾಗುವುದಿಲ್ಲ ಮತ್ತು ಹಿಂದುಳಿದ ವರ್ಗದವರ ಲೀಡರ್‌ಶಿಪ್‌ನ್ನು ಟೋಟಲ್ ಆಗಿ ಡೆಮಾಲಿಶ್ ಮಾಡತಕ್ಕಂಥದ್ದು ಆಗುತ್ತದೆ. ನಮ್ಮ ಸೊಸೈಟಿ ಯಾವ ತರಹದು ಎನ್ನುವುದು ನಿಮಗೆ ಗೊತ್ತಿದೆ. ಬಹುಶಃ ಬಸವಣ್ಣನವರ ಪ್ರಭಾವ ಅಥವಾ ಮತ್ತೊಬ್ಬರ ಪ್ರಭಾವ ಏನೋ ನಾವು ಇವತ್ತು ಪುಣ್ಯವಂತರಾಗಿದ್ದೇವೆ. ನಮ್ಮಲ್ಲಿ ಮೈಸೂರು ಮಹಾರಾಜರ ಕಾಲದಿಂದಲೂ ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗದವರಿಗೆ, ಹಿಂದುಳಿದ ವರ್ಗದವರಿಗೆ ಮಿಸಲಾತಿಯನ್ನು ಕೊಟ್ಟಂಥ ಸಂದರ್ಭದಲ್ಲಿ ಮುಂದುವರಿದ ಜನಾಂಗದವರು ಸಹಿಸಿಕೊಂಡು ಬಂದಿದ್ದಾರೆ. ಆದರೆ ಲೀಡರ್‌ಶಿಪ್‌ನ್ನು ಡೆಮಾಲಿಶ್ ಮಾಡತಕ್ಕಂಥ ಕೆಲಸ ಆಗುತ್ತದೆ. ಯಾರೋ ಒಬ್ಬ ಎಂ.ಎಲ್.ಎ. ಇರುತ್ತಾರೆ, ಅವರಿಗೆ ಒಬ್ಬ ಕಾಂಪಿಟೀಟರ್ ಇರುತ್ತಾನೆ, ಅವನಿಗೆ ಅಲ್ಲಿ ಅಧಿಕಾರ ಪಡೆಯುವುದಕ್ಕೆ ಬಿಡಬಾರದು, ಆದ್ದರಿಂದ ಅಲ್ಲಿ ಮಹಿಳೆಗೆ ಮೀಸಲಾತಿ ಎಂದು ಮಾಡಿಬಿಡಿ ಎಂಬುದಾಗಿ ಹೇಳುತ್ತಾರೆ. ಅವನು ತನ್ನ ಹೆಂಡತಿಯನ್ನು ಅಲ್ಲಿ ಅಭ್ಯರ್ಥಿಯಾಗಿ ನಿಲ್ಲಿಸುವುದಕ್ಕಾಗುವುದಿಲ್ಲ. ಇದು ಬಂದಿರತಕ್ಕಂಥ ತೊಂದರೆಯಾಗಿದೆ. ಆಡಳಿತ ಪಕ್ಷದ ಸದಸ್ಯರನ್ನು ಕರೆದು ಸೀಕ್ರೆಟ್ ಆಗಿ ಅವರ ಅಭಿಪ್ರಾಯವನ್ನು ಕೇಳಿದರೆ ಶೇಕಡ 90 ರಷ್ಟು ಶಾಸಕರಿಗೆ ಇದರ ಬಗ್ಗೆ ತೃಪ್ತಿ ಇಲ್ಲ ಎಂದು ಗೊತ್ತಾಗುತ್ತದೆ. ಏಕೆಂದರೆ ಅವರಿಗೆ ಉತ್ತರ ಕೊಡುವುದಕ್ಕಾಗುವುದಿಲ್ಲ. ಆದ್ದರಿಂದ ನಿಮ್ಮ ಹಕ್ಕನ್ನು ಚುನಾವಣಾ ಆಯೋಗಕ್ಕೆ ವಾಪಸ್ಸು ಕೊಡಿ. ಸರಿಯಾದ ಗೈಡ್‌ಲೈನ್ಸ್‌ನ್ನು ಹೊರಡಿಸಿ ಎಸ್‌ಸಿ:ಎಸ್‌ಟಿಯವರಿಗೆ ರಿಸರ್ವೇಶನ್ ಮಾಡಿಕೊಡಿ. ಅದಾದನಂತರ ಹೆಣ್ಣುಮಕ್ಕಳಿಗೆ ಮತ್ತು 'ಎ', 'ಬಿ' ವರ್ಗಕ್ಕೆ ಕರೆಕ್ಟ್ ಆದ ಗೈಡ್‌ಲೈನ್ಸ್‌ನ್ನು

ಹಾಕಿ ಕೊಡಿ, ಆಯೋಗದವರು ಕರೆಕ್ಟಾಗಿ ರೊಟೇಟ್ ಮಾಡುತ್ತಾರೆ. ಕಂಪ್ಯೂಟರ್‌ನಲ್ಲಿ 4 ಸಾವಿರ ಸೀಟುಗಳನ್ನು 10 ನಿಮಿಷದಲ್ಲಿ ಮಾಡಿಕೊಡುತ್ತಾರೆ. ಒಂದು ಪಕ್ಷ ಅವರಿಗೆ ಮಾಡಲಿಕ್ಕೆ ಆಗುವುದಿಲ್ಲವೆಂದು ಇಟ್ಟುಕೊಳ್ಳೋಣ. ನಿಮ್ಮ ಕೈಯಲ್ಲಿ ಈಗ ಮಾಡುವುದಕ್ಕೆ ಆಗದಿದ್ದರೆ ಕೊನೆಯ ಪಕ್ಷ ಬೇಸಿಕ್ ಆಗಿ ಜಿಲ್ಲಾವಾರು ರಿವ್ಯೂ ಮಾಡಿ. ಇದನ್ನು ನೀವು ಮತ್ತು ನಿಮ್ಮ ಕಾರ್ಯದರ್ಶಿಯವರು ಹೀಗೆ ಇಬ್ಬರೇ ಕುಳಿತುಕೊಂಡು ಮಾಡಿ. ಆಗ ನೀವು ಕೊಟ್ಟಿರತಕ್ಕಂಥ ಗೈಡ್‌ಲೈನ್ಸ್, ಅಲ್ಲಿರತಕ್ಕಂಥ ಸೀಟುಗಳನ್ನು ನೀವು ರೊಟೇಷನ್ ಮಾಡಿರತಕ್ಕಂಥ ಕ್ರಮ ನಿಮಗೇ ಗೊತ್ತಾಗುತ್ತದೆ. ನಿಜವಾಗಿ ಹಿಂದುಳಿದ ವರ್ಗದವರಿಗೆ ಅನುಕೂಲ ಮಾಡಿಕೊಡಬೇಕೆನ್ನುವ ನಿಮ್ಮ ಕಮಿಟ್‌ಮೆಂಟನ್ನು ನಾವು ಯಾರೂ ಪ್ರಶ್ನೆ ಮಾಡುತ್ತಿಲ್ಲ. ಆದರೆ ವ್ಯವಸ್ಥೆಯಲ್ಲಿ ಇದು ಸರಿಯಿಲ್ಲ. ಇದನ್ನು ಸರಿಮಾಡಲಿಕ್ಕೆ ಇವತ್ತು ಕೂಡ ಅವಕಾಶ ಇದೆ. ಇದರ ಬಗ್ಗೆ ಸಾಕಷ್ಟು ಜನ ಸದಸ್ಯರುಗಳು ಅವರವರ ತಾಲ್ಲೂಕು, ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಮಾತನಾಡುವವರು ಇರುವುದರಿಂದ ನಾನು ಇವತ್ತು ಅತ್ಯಂತ ವಿನಯದಿಂದ ಸರ್ಕಾರದವರಲ್ಲಿ ಆಗ್ರಹ ಮಾಡುತ್ತಿದ್ದೇನೆ. ಇದನ್ನು ಚುನಾವಣೆ ಆಯೋಗಕ್ಕೆ ಮತ್ತೆ ವಾಪಸ್ಸು ಕೊಡಿ, ಒಂದು ಪಕ್ಷ ಚುನಾವಣಾ ಆಯೋಗಕ್ಕೆ ನೀವು ಕೊಡಲಿಕ್ಕೆ ಆಗದೇ ಹೋದರೆ ಇದನ್ನು ರದ್ದು ಮಾಡಲಿಕ್ಕಾದರೂ ಯೋಚನೆ ಮಾಡಬೇಕು. ಇಲ್ಲಿ ನಮ್ಮನ್ಯಾರನ್ನೂ ಅದರಲ್ಲಿ ಇನ್‌ವಾಲ್ವ್ ಮಾಡಿಕೊಳ್ಳಲಿಕ್ಕೆ ಹೋಗಬೇಡಿ. ಆದರೆ, ನೀವು ಮಾಡುವುದಕ್ಕೆ ಹೊರಟಿರತಕ್ಕಂಥದ್ದು ವಿಕೇಂದ್ರೀಕರಣದ ವ್ಯವಸ್ಥೆಗೆ ಒಂದು ದೊಡ್ಡ ಅಪಚಾರ ಆಗಿದೆ ಎಂದು ಹೇಳಿ, ನಿಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ನಿನ್ನೆಯ ದಿವಸ ಇದೇ ವಿಷಯದ ಮೇಲೆ ಚರ್ಚೆ ಮಾಡುವುದಕ್ಕೆ ಗಮನಸೆಳೆಯುವ ಸೂಚನೆ ಮುಖಾಂತರ ಕೇಳಿಕೊಂಡಾಗ, ನಾಳೆ ಅವಕಾಶ ಮಾಡಿಕೊಡುತ್ತೇನೆಂದು ಹೇಳಿ, ಈ ದಿವಸ ಚರ್ಚೆಗೆ ಅವಕಾಶ ಕೊಟ್ಟಿದ್ದೀರಿ. ಅದಕ್ಕಾಗಿ ತಮಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಇದೇ ವಿಷಯಕ್ಕೆ ಸಂಬಂಧಪಟ್ಟ ಹಾಗೆ, ಹಿಂದೆ ಅಮೆಂಡ್‌ಮೆಂಟ್ ಬಿಲ್ ಬಂದಾಗ ಪ್ರತಿಪಕ್ಷದವರಾದ ನಾವೆಲ್ಲ, ಅದರಿಂದ ದುಷ್ಪರಿಣಾಮಗಳು ಏನಾಗುತ್ತವೆ ಎನ್ನುವುದನ್ನು ಸರ್ಕಾರದ ಗಮನಕ್ಕೆ ತಂದಿದ್ದೆವು. ಆದರೆ, ಅದಕ್ಕೆ ಸರ್ಕಾರ ಗಮನಕೊಡಲಿಲ್ಲ. ವಿಕೇಂದ್ರೀಕರಣದ ವ್ಯವಸ್ಥೆಯಲ್ಲಿ ಜಿಲ್ಲಾ ಪಂಚಾಯತ್, ತಾಲ್ಲೂಕು ಮತ್ತು ಗ್ರಾಮ ಪಂಚಾಯತ್, ಸಹಕಾರ ಸಂಸ್ಥೆಗಳ ನೆಲೆಗಟ್ಟಿಗೆ ಬಹಳಷ್ಟು ದೃಢತೆಯನ್ನು ಕೊಡಬೇಕು. ಅವುಗಳಿಗೆ ಸ್ವತಂತ್ರತೆಯನ್ನು ಕೊಡಬೇಕಾಗುತ್ತದೆ. ಎಲ್ಲವನ್ನೂ ನಾವು ರಾಜಕೀಯವಾಗಿ ನೋಡುವುದಕ್ಕೆ ಹೋದರೆ ಸಂಘಸಂಸ್ಥೆಗಳು ಬೆಳೆಯುವುದಿಲ್ಲ. ಅದರ ಮುಖಾಂತರ ಕರ್ನಾಟಕದ ಸಾಮಾಜಿಕ ಸ್ವಾಸ್ಥ್ಯವನ್ನು ಹಾಳು ಮಾಡಿದ ಹಾಗೆ ಆಗುತ್ತದೆ. ಯಾರು, ಯಾವ ಪಕ್ಷ ಆಡಳಿತಕ್ಕೆ ಬರುತ್ತದೆ ಅವರು ಎಲ್ಲವೂ ನಮ್ಮದೇ ಆಗಬೇಕೆಂದು, ಆ ರೀತಿಯ ಮನೋಭಾವ, ಮಾನಸಿಕತನ ಬೆಳೆಸಿಕೊಂಡರೆ ಬಹುಶಃ ರಾಜ್ಯದಲ್ಲಿ ಗಂಡಾಂತರಕಾರಿ ಪರಿಸ್ಥಿತಿ ನಿರ್ಮಾಣವಾಗಲಿಕ್ಕೆ

ಸಾಧ್ಯವಿರುತ್ತದೆ. ಈ ಪರಿಸ್ಥಿತಿಯಿಂದ ದುರುಪಯೋಗ ಪಡಿಸಿಕೊಳ್ಳಬಹುದು, ದುರ್ಲಾಭ ಆಗಬಹುದು, ಇದರಿಂದ ಎಲ್ಲರಿಗೂ ಹಾನಿಯಾಗುತ್ತದೆ. ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಚುನಾವಣೆ ಸಂದರ್ಭದಲ್ಲಿ, ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಸ್ಥಾನ ಮೀಸಲಾತಿ ಸಂದರ್ಭದಲ್ಲಿ ಲಾಟರಿ ಸಿಸ್ಟಮ್ ಮಾಡಿದರು. ಈ ರೀತಿಯಲ್ಲಿ ಮಾಡಿದ್ದಾಗ ಯಾರಿಗೂ ಒತ್ತಡ ಇರಲಿಲ್ಲ. ಆಗ ಒಳ್ಳೆಯ ವ್ಯವಸ್ಥೆ ಮಾಡಿದರೆಂದು ನಾವೆಲ್ಲರೂ ಮೆಚ್ಚುಗೆ ವ್ಯಕ್ತ ಮಾಡಿದೆವು. ಈಗ ಏನಾಗಿದೆ ಎಂದರೆ, ಕಾಂಗ್ರೆಸ್ ಪಕ್ಷದ ಶಾಸಕರು ಹೇಳಿದ ಹಾಗೆ ಆಗಬೇಕು, ಎನ್ನುವ ಒತ್ತಡ ಬಹಳವಾಗಿ ಬಂದಿರುವುದರಿಂದ ಇವೆಲ್ಲ ಪರಿಸ್ಥಿತಿ ಉದ್ಭವವಾಗುತ್ತದೆ. ಕೆಲವೊಂದು ಜಿಲ್ಲೆಗಳಲ್ಲಿ, ತಾಲ್ಲೂಕುಗಳಲ್ಲಿ ನಡೆಯುವಂಥ ವಿಚಾರವನ್ನು ನೋಡಿದಾಗ, ಬಹುಶಃ ಒತ್ತಡ ಜಾಸ್ತಿ ಇದೆಯೆಂದು ಕಂಡುಬರುತ್ತದೆ. ಸರ್ಕಾರದವರು ಚುನಾವಣಾ ಆಯೋಗದ ಅಧಿಕಾರವನ್ನು ಕಸಿದುಕೊಂಡಿದ್ದೀರಿ.

ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ನಾವು ಜಿಲ್ಲಾಧಿಕಾರಿಗಳಿಗೆ ಅಧಿಕಾರ ಕೊಟ್ಟಿದ್ದೇವೆ ಹಾಗೂ ಮಾರ್ಗಸೂಚಿಗಳನ್ನು ಕೊಟ್ಟಿರುವುದರಿಂದ ಅದರ ಪ್ರಕಾರ ಅವರೇ ಮಾಡುತ್ತಾರೆಂದರು. ಆದರೆ, ಇದು ಮಾರ್ಗಸೂಚಿಯ ಪ್ರಕಾರ ನಡೆದಿದೆಯೇ? ಚುನಾವಣಾ ಆಯೋಗದಿಂದ ಇದನ್ನು ನಾವು ವಾಪಸ್ ತೆಗೆದುಕೊಂಡಿದ್ದೇ ಮೊದಲ ತಪ್ಪು. ಜಿಲ್ಲಾಧಿಕಾರಿಗಳು ಈ ಬಗ್ಗೆ ಕೆಲವು ಪ್ರಸ್ತಾವನೆಗಳನ್ನು ತಮಗೆ ಕಳುಹಿಸಿದರು, ಅವರು ಕಳುಹಿಸಿರುವ ಪ್ರಸ್ತಾಪನೆಯನ್ನು ಅಂತಿಮಗೊಳಿಸಿದಿರೋ ಅಥವಾ ಪುನಃ ನಿಮ್ಮ ಮಂತ್ರಿಮಂಡಲದವರು ಸೇರಿಕೊಂಡು ಹೊಸ ಪಟ್ಟಿಮಾಡಿ ಬದಲಾವಣೆ ಮಾಡಿದಿರೋ? ಉದಾಹರಣೆಗೆ ಮೊನ್ನೆ ನಮ್ಮ ಒಬ್ಬ ಶಾಸಕರು ಹೇಳಿದಂತೆ, ಕೊಡಗು ಜಿಲ್ಲೆಯ ಜಿಲ್ಲಾಧಿಕಾರಿಗಳು ಕಳುಹಿಸಿದ ಪ್ರಸ್ತಾವನೆಗೂ ಹಾಗೂ ಆ ಪ್ರಸ್ತಾವನೆ ನಿಮ್ಮ ಇಲಾಖೆಗೂ ಬಂದ ಮೇಲೆ, ನೀವು ಮತ್ತು ಕಾರ್ಯದರ್ಶಿಗಳು ಕುಳಿತುಕೊಂಡು ಮಾಡಿರುವ ಪಟ್ಟಿಗೂ ಬದಲಾವಣೆ ಆಯಿತು. ಹೀಗಾದರೆ ಆ ಮಾರ್ಗಸೂಚಿಗೆ ಏನು ಬೆಲೆ ಇದೆ? ಮೊದಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ಕೊಡಬಾರದು, ಅಧಿಕಾರ ಕೊಟ್ಟ ಮೇಲೆ, ಏನು ಈಗಾಗಲೇ ಮಾರ್ಗಸೂಚಿ ಕೊಟ್ಟಿದ್ದೀರಿ ಅದರ ಪ್ರಕಾರ ಮಾಡಬೇಕಾಗಿತ್ತು, ಇದು ಯಾವುದೂ ಮಾಡಲಿಲ್ಲ. ಏಪ್ರಿಲ್ 6ರಲ್ಲಿ ತಾವು ಒಂದು ಮಾರ್ಗಸೂಚಿ ಏನು ಕಳುಹಿಸಿದ್ದೀರಿ ಅದರ ನಾಲ್ಕನೇ ಪ್ಯಾರಾವನ್ನು ನಾನೀಗ ಓದುತ್ತೇನೆ.

''ಜಿಲ್ಲಾ ಪಂಚಾಯಿತಿಗಳ ಮತಕ್ಷೇತ್ರಗಳ ಸೀಮಾ ನಿರ್ಣಯದೊಡನೆ ಎಲ್ಲಾ ಮತ ಕ್ಷೇತ್ರಗಳ ಮೀಸಲಾತಿ ಹಂಚಿಕೆ ಮಾಡಲು ಪ್ರಸ್ತಾವನೆಗಳನ್ನು ಕರ್ನಾಟಕ ಪಂಚಾಯತ್ ರಾಜ್, 1998ರ ಪ್ರಕಾರ ತಯಾರಿಸಿ ಸಲ್ಲಿಸತಕ್ಕದ್ದು. ಈ ನಿಯಮಗಳ ಪ್ರಕಾರ ಅನುಸೂಚಿತ ಪಂಗಡ ಅನುಸೂಚಿತ ಜಾತಿಗಳಿಗೆ ಮೀಸಲಿಡಬೇಕಾದ ಸ್ಥಾನಗಳನ್ನು ಹಿಂದಿನ ಅವಧಿಯಲ್ಲಿ ಆ ಅವಧಿಯವರೆವಿಗೆ ಮೀಸಲಾಗಿಟ್ಟಿದ್ದ ಸ್ಥಾನಗಳನ್ನು ಹೊರತು

ಪಡಿಸಿ,''

ಅಂದರೆ, ಹಿಂದಿನ ಸಾಲಿನಲ್ಲಿ ಇರುವ ರೊಟೇಷನ್ ಬಗ್ಗೆ ಅಲ್ಲಿ ಇದೆ. ಅಲ್ಲಿ ಡಿ.ಸಿ.ಯವರು ಕಳುಹಿಸಿದ ಪ್ರಸ್ತಾವನೆ ಇಲ್ಲಿಗೆ ಬಂದ ಮೇಲೆ ಇಲ್ಲಿನ ಒತ್ತಡಗಳಿಗೆ ಮಣಿದು ಅದು ಬದಲಾವಣೆಯಾಗಿದೆ. ಉದಾ:ಗೆ ಹೇಳುವುದಾದರೆ, ಒಂದು ಕಡೆ ಒ.ಬಿ.ಸಿ. ಇರಬಹುದು ಅಥವಾ ಎಸ್.ಸಿ.ಮೀಸಲು ಇರಬಹುದು, ಇದರಂತೆ ಹಾಗೂ ಮಾರ್ಗಸೂಚಿಯ ಪ್ರಕಾರ ಡಿ.ಸಿಯವರು ಪ್ರಸ್ತಾವನೆಯನ್ನು ಕಳುಹಿಸಿದ್ದರೂ ಇಲ್ಲಿ ಒತ್ತಡಗಳಿಗೆ ಮಣಿದು ಪುನಃ ಅದೇ ಮೀಸಲಾತಿ ಮುಂದುವರಿದರೆ ಹೇಗೆ? ಇದು ಕೆಲವು ಕ್ಷೇತ್ರಗಳಲ್ಲಿ ಆಗಿದೆ. ಇದು ಪುನಃ ಮುಂದುವರಿಯುವುದಾದರೆ ರೊಟೇಷನ್ ಪದ್ಧತಿ ಎಲ್ಲಿ ಹೋಯಿತು? ಇದು ತಪ್ಪಾಗಲಿಲ್ಲವೆ? ಬೇಕಾದರೆ ಎಲ್ಲಿ ತಪ್ಪಾಗಿದೆ ಎಂಬುದರ ಬಗ್ಗೆ ಉದಾಹರಣೆ ಸಹಿತ ನಾನು ಹೇಳುತ್ತೇನೆ ನೀವು ಅಲ್ಲಿ ಸರಿಪಡಿಸಿಕೊಡುತ್ತೀರಾ? ಎಲ್ಲಿ ಎಸ್.ಟಿ. ಜನಾಂಗ ಮಹಿಳೆಯರು ಹೆಚ್ಚು ಇದ್ದಾರೆ ಅದರ ಪ್ರಕಾರ ನೀವು ಮೀಸಲಾತಿ ಮಾಡಿಲ್ಲ. ಇದಕ್ಕೆ ಬೇಕಾದರೆ ಒಂದು ಉದಾಹರಣೆ ನಾನು ಇಲ್ಲಿ ಕೊಡಬಯಸುತ್ತೇನೆ. ತುರುವೇಕೆರೆ ತಾಲ್ಲೂಕಿನಲ್ಲಿ ಬೊಮ್ಮಸಂದ್ರದಲ್ಲಿ ಕಳೆದ ಬಾರಿ ಎಸ್.ಸಿ. ಜನಸಂಖ್ಯೆ ಜಾಸ್ತಿ ಇತ್ತು ಈ ಬಾರಿ ಇದನ್ನು ಬದಲಾಯಿಸಿದ್ದಾರೆ, ಇದು ಏನು ತೊಂದರೆಯಿಲ್ಲ ನಾವು ಎಲ್ಲರೂ ಒಪ್ಪುತ್ತೇವೆ. ಅದರಂತೆ, ಮಾಯಸಂದ್ರದಲ್ಲಿ 4,640 ಎಸ್.ಸಿ. ಜನಾಂಗ ಇದೆ ಅಲ್ಲಿ ಮೀಸಲಾತಿ ಇರಬೇಕಾಗಿತ್ತು ಆದರೆ ಈಗ ಅಲ್ಲಿ ಏನು ಮಾಡಿದ್ದಾರೆಂದರೆ ಅದನ್ನು ಜನರಲ್ ಆಗಿ ಇಟ್ಟಿದ್ದಾರೆ. ದಬ್ಬೆಗಟ್ಟದಲ್ಲಿ 3,076 ಎಸ್.ಸಿ.ಜನಾಂಗ ಇರುವುದನ್ನು ಅಲ್ಲಿ ಎಸ್.ಸಿ.(ಮಹಿಳೆ) ಎಂದು ರಿಸರ್ವ್ ಮಾಡಿದರು. ಇದು ಏಕೆ ಆಯಿತು? ನಿಮ್ಮ ಲೆಕ್ಕಾಚಾರ ಇಲ್ಲಿ ತಪ್ಪಾಗಲಿಲ್ಲವೆ? ಡಿ.ಸಿ.ಯವರು, ಎಸ್.ಸಿ.ಯವರು ಜಾಸ್ತಿ ಇರುವುದರಿಂದ ಅಲ್ಲಿ ಎಸ್.ಸಿ.ಗೆ ಕೊಡಬೇಕು ಎಂದು ಪ್ರಸ್ತಾವನೆ ನಿಮಗೆ ಕಳುಹಿಸಿದರೆ, ಇಲ್ಲಿಗೆ ಬಂದ ಮೇಲೆ ಅದು ಬದಲಾವಣೆಯಾಗಿದೆ. ಬಹುಶಃ ಇದೆಲ್ಲಾ ಏಕೆ ಈ ರೀತಿ ಆಗುತ್ತದೆಂದರೆ, ಒತ್ತಡಗಳಿಗೆ ಮಣಿದಿದ್ದೀರಿ ಎಂದು ಕಾಣಿಸುತ್ತದೆ. ತಾವು ಮಾರ್ಗಸೂಚಿಯನ್ವಯ ಮಾಡಬೇಕು ಎನ್ನುವ ಉದ್ದೇಶ ಇಟ್ಟುಕೊಂಡಿದ್ದೀರಿ ಆದರೂ ಒತ್ತಡಗಳಿಗೆ ಮಣಿದಿದ್ದೀರಿ. ಈಗ ತಾನೇ ಮಾನ್ಯ ಸಿಂಧ್ಯಾರವರು ಹಾವೇರಿ ಜಿಲ್ಲೆಯ ಬಗ್ಗೆ ಹೇಳಿದರು. ಅಲ್ಲಿ ಇವತ್ತು ಏನಾಗಿದೆ ಎಂದರೆ, ಇವತ್ತು ನಮ್ಮ ಉಪಾಧ್ಯಕ್ಷರು ಇರುವಂಥ ಕ್ಷೇತ್ರದಲ್ಲಿ ಏನಾಗಿದೆ ಎನ್ನುವ ಉದಾಹರಣೆ ಹೇಳುತ್ತೇನೆ. ಈ ಜಿಲ್ಲೆಯ ಎಲ್ಲಾ ಶಾಸಕರು ಕೂಡಿಕೊಂಡು ಒಂದು ಲೆಟರ್ ಕೊಟ್ಟರು, ಆದರೂ ಹಿರೇಕೆರೂರು ಮತ್ತು ಬ್ಯಾಡಗಿಗೆ ಯಾವುದೂ ಜನರಲ್ ಸ್ಥಾನ ಇಲ್ಲ. ಹಾನಗಲ್‌ಗೆ ಮಾತ್ರ ಮೂರು ಜನರಲ್ ಸ್ಥಾನ ಕೊಟ್ಟಿದ್ದಾರೆ. ಪ್ರತಿಯೊಂದು ತಾಲ್ಲೂಕಿಗೆ ಒಂದೊಂದು ಜನರಲ್ ಸ್ಥಾನ ಕೊಟ್ಟಿದ್ದರೆ ಎಂಟು ಜನರಲ್ ಸೀಟು ಬರುತ್ತಿತ್ತು ಆಗ ಏನೂ ತೊಂದರೆಯಾಗುತ್ತಿರಲಿಲ್ಲ. ಇದನ್ನು ನೋಡಿದರೆ ನಮಗೆ ಏನು ಅನ್ನಿಸುತ್ತದೆಂದರೆ,

ಇಲ್ಲಿ ರಾಜಕೀಯ ಹಸ್ತಕ್ಷೇಪ, ರಾಜಕೀಯ ಒತ್ತಡ ಪ್ರಾರಂಭವಾಗಿದೆ ಎಂದು ಕಾಣಿಸುತ್ತದೆ. ಹಾನಗಲ್‌ನಲ್ಲಿ ಮೂರು ಸ್ಥಾನಗಳು ಸಾಮಾನ್ಯ ವರ್ಗಕ್ಕೆ ಸಿಕ್ಕಿವೆ ಅಂದರೆ ಇವು ಹೇಗೆ ಸಿಕ್ಕವು? ಏಕೆ ಸಿಕ್ಕವು? ನಾವು ಇದನ್ನು ಪ್ರಶ್ನಿಸಬೇಕಾಗುತ್ತದೆ. ಇದರಿಂದಾಗಿ ನಮಗೆ ಮಾತ್ರ ತೊಂದರೆಯಾಗಿದೆ ಎಂದೇನೂ ಅಲ್ಲ, ನಿಮಗೂ ಕೂಡ ತೊಂದರೆಯಾಗಿದೆ. ರಾಯಚೂರು ಜಿಲ್ಲೆಯ ಒಂದು ಪತ್ರಿಕೆಯಲ್ಲಿ ''ಜಿಲ್ಲಾ ಪಂಚಾಯಿತಿ ಕ್ಷೇತ್ರಗಳ ಮೀಸಲು, ಶಾಸಕರ ಅಸಮಾಧಾನ'' ಎಂದು ಬಂದಿದೆ. ಅಲ್ಲಿರುವ ಕಾಂಗ್ರೆಸ್ಸಿನ ಶಾಸಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಅಲ್ಲಿರುವ ಡಿ.ಸಿ.ಯವರು ಒಂದು ಕ್ಷೇತ್ರಕ್ಕೆ ಮೀಸಲು ಮಾಡಿ ತಮ್ಮ ವರದಿಯನ್ನು ಇಲ್ಲಿಗೆ ಕಳುಹಿಸಿದ್ದರು, ಅದು ಬೆಂಗಳೂರಿಗೆ ಬಂದ ತಕ್ಷಣ ಬದಲಾವಣೆಯಾಯಿತು. ಅಲ್ಲಿನ ಪತ್ರಿಕೆಗಳಲ್ಲಿ ''ಜಿಲ್ಲಾ ಪಂಚಾಯಿತಿ ಕ್ಷೇತ್ರವಾರು ಮೀಸಲಾತಿ ಪಟ್ಟಿಯೂ ಆಡಳಿತಾರೂಢ ಕಾಂಗ್ರೆಸ್ಸಿನ ಕಾರ್ಯಕರ್ತರಲ್ಲಿ ಅತೃಪ್ತಿ ಹಾಗೂ ಅನುಮಾನಗಳಿಗೆ ಎಡೆ ಮಾಡಿ ಕೊಟ್ಟಿದೆ''

ಎಂದು ಬಂದಿದೆ. ಮೊದಲಾಗಿದ್ರೆ ಎಲ್ಲಾ ಅಧಿಕಾರ ಚುನಾವಣಾ ಆಯೋಗಕ್ಕೆ ಇತ್ತು ಏನಾದರೂ ಹೆಚ್ಚು ಕಡಿಮೆ ಆಗಿದ್ದರೆ ನಮಗೆ ಗೊತ್ತಿಲ್ಲವೆಂದು ಶಾಸಕರು ಜಾರಿಕೊಳ್ಳಬಹುದಾಗಿತ್ತು.

''ಪರಿಷ್ಕೃತ ಕಾನೂನಿನ ಪ್ರಕಾರ ಸರ್ಕಾರದ ಮಟ್ಟದಲ್ಲಿ ಮೀಸಲು ನಿಗದಿಯಾಗಿರುವುದರಿಂದ, ಕಾರಣ ಶಾಸಕರ ಗಮನಕ್ಕೆ ತಾರದೆ, ಅದು ಹೇಗೆ ಕ್ಷೇತ್ರವಾರು ಮೀಸಲು ನಿಗಧಿಯಾಯಿತು ಎಂದು ಅನೇಕ ಕಾರ್ಯಕರ್ತರು ಅಸಮಾಧಾನ ವ್ಯಕ್ತ ಮಾಡಿದ್ದಾರೆ.'' ಈ ರೀತಿ ಪತ್ರಿಕೆಯಲ್ಲಿ ಬಂದಿದೆ. ಇದು ಕೇವಲ ಈ ಕಡೆ ಮಾತ್ರ ಅಲ್ಲ ನಿಮ್ಮ ಕಡೆಗೂ ಕೂಡ ಪ್ರಾರಂಭವಾಗಿದೆ. ಇದು ಏನಾಗುತ್ತದೆಂದರೆ,ಒಂದು ತಾಲ್ಲೂಕಿನಲ್ಲಿ ಯಾರೋ ಒಬ್ಬರು ಪ್ರಭಾವಿ ಇದ್ದವರು ತಮಗೆ ಹೇಗೆ ಬೇಕೋ ಹಾಗೆ ಅನುಕೂಲಕ್ಕೆ ತಕ್ಕ ಹಾಗೆ ಮಾಡುವುದಕ್ಕೆ ಹೋಗುತ್ತಾರೆ, ಇದರಿಂದಾಗಿ ಮತ್ತೊಂದು ತಾಲ್ಲೂಕಿಗೆ ಪರಿಣಾಮ ಆಗುತ್ತದೆ. ಮೊದಲು ಏನಿತ್ತು ಎಂದರೆ ಜನಸಂಖ್ಯಾಧಾರದ ಎಸ್.ಸಿ. ಹಾಗೂ ಮಹಿಳೆಯರಿಗೆ ಸ್ಥಾನವನ್ನು ಫಿಕ್ಸ್ ಮಾಡುತ್ತಿದ್ದರು. ಒ.ಬಿ.ಸಿ ಇರುವುದನ್ನು ಲಾಗ್ ಪ್ರಕಾರ ಮಾಡಿದ್ದರು. ಈ ಪದ್ಧತಿ ಬಹಳ ಒಳ್ಳೆಯತನದಿಂದ ಕೂಡಿತ್ತು, ಇದರಿಂದಾಗಿ ಯಾರಿಗೂ ತಲೆನೋವು ಇರುತ್ತಿರಲಿಲ್ಲ, ಆದರೆ ಇವರೇನು ಹೊಸದು ಮಾಡುವುದಕ್ಕೆ ಹೋಗಿ ಈ ರೀತಿ ಅನಾಹುತಕ್ಕೆ ಈಡು ಮಾಡಿದ್ದಾರೆ. ಇವತ್ತು ನಾವು ಏನು ಸ್ಥಳೀಯ ಸಂಸ್ಥೆಗಳಿಂದ ವಿಕೇಂದ್ರಿಕರಣ ವ್ಯವಸ್ಥೆಯ ಬಗ್ಗೆ ಮಾತನಾಡುತ್ತೇವೆ, ಆದರೆ ಇಲ್ಲಿ ಮಾಡಿರುವ ಮೀಸಲಾತಿಯ ವ್ಯವಸ್ಥೆಯಿಂದ ಬಹಳ ಹಾಳು ಮಾಡುತ್ತಿದ್ದೀರಿ, ಇದು ಸರಿಯಲ್ಲ. ಆದ್ದರಿಂದ, ಇದನ್ನು ತಿದ್ದುಪಡಿ ಮಾಡಲಿಕ್ಕೆ ಅಥವಾ ನವೀಕರಣ ಮಾಡಲಿಕ್ಕೆ ಏನು ವ್ಯವಸ್ಥೆ ಮಾಡುತ್ತೀರಿ ಎನ್ನತಕ್ಕಂಥ ಪ್ರಶ್ನೆ ಉದ್ಭವಿಸುತ್ತದೆ. ಆದ್ದರಿಂದ, ಇದರ ಬಗ್ಗೆ ಪುನರ್ ಪರಿಶೀಲನೆ ಮಾಡಬೇಕೆಂದು

ಒತ್ತಾಯಿಸುತ್ತೇನೆ. ಇದರ ಬಗ್ಗೆ ಈಗಾಗಲೇ ಗೆಜೆಟ್ ಆಗಿದ್ದರೂ ಪರವಾಗಿಲ್ಲ, ಏಕೆಂದರೆ, ಕಾನೂನಿನ ಪ್ರಕಾರ ನೀವು ಮಾಡಿರುವ ಮಾರ್ಗಸೂಚಿಗೆ ಇವು ವಿರುದ್ಧವಾಗಿವೆ. ಈ ರೀತಿ ವಿರುದ್ಧವಾಗಿರುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ನಾವು ಇವತ್ತು ಕೇವಲ ಸಣ್ಣ ಪುಟ್ಟ ಉದಾಹರಣೆಗಳನ್ನು ಮಾತ್ರ ಇಲ್ಲಿ ಹೇಳುತ್ತಿದ್ದೇನೆ. ಇಂಥ ಉದಾಹರಣೆಗಳು ಪ್ರತಿಯೊಂದು ತಾಲ್ಲೂಕಿನಲ್ಲೂ ಕೂಡ ಇವೆ. ಆದ್ದರಿಂದ, ಇದನ್ನು ಪುನಃ ಮರುಪರಿಶೀಲನೆ ಮಾಡಬೇಕೆಂದು ನಾನು ಹೇಳುತ್ತೇನೆ. ಏಕೆಂದರೆ, ಇವತ್ತು ಇದರಿಂದಾಗಿ ಬಹಳ ದುಷ್ಪರಿಣಾಮಗಳು ಆಗುತ್ತವೆ. ಕೇವಲ ಎಲ್ಲವನ್ನೂ ಕಾಂಗ್ರೆಸ್‌ಮಯ ಮಾಡುವಂಥ ಪದ್ಧತಿಗೆ ನಾವು ಹೋಗುತ್ತಿರುವುದು ಸರಿಯಲ್ಲ. ಆದುದರಿಂದ, ಇದರ ಬಗ್ಗೆ ಹೆಚ್ಚಿನ ಚಿಂತನೆ ಮಾಡುವುದು ಅಗತ್ಯವಿದೆ. ಇದರ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ತಮ್ಮ ಆತ್ಮವನ್ನು ಮುಟ್ಟಿಕೊಂಡು ನೋಡಬೇಕಾಗುತ್ತದೆ. ಏಕೆಂದರೆ, ನೀವು ಬೇಕಾದರೆ ಎಲ್ಲಾ ಪಟ್ಟಿಯನ್ನು ತರಿಸಿಕೊಂಡು ನೋಡಿ ಎಷ್ಟು ವ್ಯತ್ಯಾಸ ಆಗಿದೆ ಎಂಬುದು ನಿಮಗೆ ತಿಳಿಯುತ್ತದೆ. ಡಿ.ಸಿ.ಯವರು ತಮಗೆ ಏನು ಪಟ್ಟಿ ಕೊಟ್ಟಿದ್ದಾರೆ ಕೊನೆಗೆ ಅದು ಗೆಜೆಟ್ ಆಗಿರುವ ಪಟ್ಟಿಯನ್ನು ತರಿಸಿಕೊಂಡು ನೋಡಿ ನಿಮಗೆ ಗೊತ್ತಾಗುತ್ತದೆ. ನಿಮ್ಮ ಆತ್ಮ ಶೋಧನೆ ಮಾಡಿಕೊಳ್ಳಿ, ಇಲ್ಲಿ ಏನು ತಪ್ಪಾಗಿದೆ ಎಂಬುದು ನಿಮಗೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ಇದನ್ನು ನೋಡುವುದಕ್ಕೆ ನಿಮಗೆ ಸ್ವಲ್ಪ ತ್ರಾಸ್ ಆದರೂ ಅಡ್ಡಿಯಿಲ್ಲ ಇದರ ಬಗ್ಗೆ ವೈಯಕ್ತಿಕವಾದ ಆಸಕ್ತಿ ತೆಗೆದುಕೊಂಡು ಆ ಪಟ್ಟಿ ನೋಡಿದರೆ ನಿಮಗೆ ಅಲ್ಲಿ ಏನು ನಡೆದಿದೆ ಎಂಬುದು ಗೊತ್ತಾಗುತ್ತದೆ. ಮಾನ್ಯ ಸಚಿವರು ಮೊದಲಿದ್ದ ಪದ್ಧತಿಯ ಪರವಾಗಿಯೇ ಇದ್ದರು, ಆದರೆ ಅವರ ಮೇಲೆ ಬಂದಂಥ ಒತ್ತಡ ಹಾಗೂ ಇನ್ನಿತರ ಹಿತಾಸಕ್ತಿಯ ಸಲುವಾಗಿ ಅವರ ಆತ್ಮಸಾಕ್ಷಿಗೆ ವಿರುದ್ಧವಾಗಿ ಈ ಕೆಲಸವನ್ನು ಮಾಡುವಂಥ ಪ್ರಸಂಗ ಬಂತು. ಆದ್ದರಿಂದ, ಮಾನ್ಯ ಸಚಿವರು ಆ ಪಟ್ಟಿಯನ್ನು ತರಿಸಿಕೊಂಡು ನೋಡಲಿ, ಅದರಲ್ಲಿ ಏನಾದರೂ ಹೆಚ್ಚು ಕಡಿಮೆಯಾದರೆ ಏನೂ ಅನಾಹುತವಾಗುವುದಿಲ್ಲ. ಆದ್ದರಿಂದ, ಸರ್ಕಾರ ಇದರ ಬಗ್ಗೆ ಗಮನಹರಿಸಿ, ತೀವ್ರಗತಿಯಿಂದ ಸರಿಪಡಿಸಬೇಕು ಎನ್ನುವ ಮಾತನ್ನು ಹೇಳಿ ಮತ್ತೊಮ್ಮೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಸೋಮಶೇಖರ್ (ಮಳವಳ್ಳಿ): ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ನಾವು ಮತ್ತು ವಿರೋಧಪಕ್ಷದವರು ಸಾಕಷ್ಟು ಚರ್ಚೆ ಮಾಡಿ ಸರ್ಕಾರದ ಕಿವಿಯನ್ನು ಎಷ್ಟು ಹಿಂಡಬೇಕೋ ಅಷ್ಟು ಹಿಂಡಿದ್ದೇವೆ. ಆದರೂ ಅವರು ಅದೇನು ಪ್ರತಿಷ್ಠೆ ಪ್ರಶ್ನೆ ಮಾಡಿಕೊಂಡು ಎರಡು ಮನೆಯಲ್ಲಿ ಇದನ್ನು ಬುಲ್ಡೋಜ್ ಮಾಡಿದರು. ಈ ರೀತಿ ಮಾಡುವುದರಿಂದ ಕೇವಲ ನಮಗಷ್ಟೇ ತೊಂದರೆಯಲ್ಲ ನಿಮಗೂ ಹಾಗೂ ನಿಮ್ಮ ಮಂತ್ರಿಗಳಿಗೂ ಕೂಡ ತೊಂದರೆಯಾಗುತ್ತದೆ, ಆದ್ದರಿಂದ, ಇದು ಸಮಂಜಸವಲ್ಲ. ಪ್ರಜಾಪ್ರಭುತ್ವದ ನೀತಿಗೆ ವಿರುದ್ಧವಾಗಿದೆಯೆಂದು ಹೇಳಿದರೂ ಕೂಡ ನೀವು ಇದನ್ನು ಮಾಡಿದಿರಿ. ಇವತ್ತು ಎಲ್ಲಾ ಕ್ಷೇತ್ರಗಳ ಮಾಹಿತಿಯನ್ನು ತರಿಸಿಕೊಂಡು

ನೋಡುವುದಾದರೆ, ನಮ್ಮ ಪಕ್ಷದವರಿಗೆ ಆಗಿರುವ ತೊಂದರೆ ಒಂದು ಕಡೆ ಇರಲಿ, ಆದರೆ ಯಾರು ಪ್ರಬಲರಾಗಿದ್ದಾರೆ ಅವರು ಮಾತ್ರ ತಮಗೆ ಯಾರು ಯಾವ ಸ್ಥಾನದಲ್ಲಿ ಬೇಕೋ ಅವರನ್ನು ಆ ಸ್ಥಾನದಲ್ಲಿ ಕೂಡಿಸುವುದರಲ್ಲಿ ಯಶಸ್ವಿಯಾಗಿದ್ದಾರೆ. ಉದಾಹರಣೆಗೆ ಗಂಡಸಿ ಕ್ಷೇತ್ರವನ್ನು ತೆಗೆದುಕೊಳ್ಳುವುದಾದರೆ, ಮಾನ್ಯ ಶಿವರಾಂರವರಿಗೆ ಕಳೆದ ಬಾರಿಗಿಂತ ಈ ಬಾರಿ ಜಾಸ್ತಿ ತೊಂದರೆಯಾಗಿದೆ. ನಮ್ಮ ಕಾಲದಲ್ಲಿ ಎಷ್ಟೋ ನ್ಯಾಯಬದ್ಧವಾಗಿ ಕೆಲಸ ಆಗುತ್ತಿದ್ದವು. ಅವರ ಕ್ಷೇತ್ರದಲ್ಲಿ 5 ಸ್ಥಾನದಲ್ಲಿ 4 ಸ್ಥಾನಗಳನ್ನು ಮಹಿಳೆಯರಿಗೆ ಮೀಸಲು ಮಾಡಿದ್ದಾರೆ. ಅವರ ಪಕ್ಷದವರೇ ಸೇರಿಕೊಂಡು ಇವರ ಶಕ್ತಿಯನ್ನು ಕಡಿಮೆ ಮಾಡಬೇಕು ಎನ್ನುವ ಉದ್ದೇಶದಿಂದ ಇದನ್ನು ಮಾಡಿದ್ದಾರೆ. ನಮ್ಮ ಕ್ಷೇತ್ರದಲ್ಲಿ ಬಿ.ಸಿ.ಎಂ.ಗೂ ಲೇಡಿ, ಎಸ್.ಸಿ.ಗೂ ಲೇಡಿ, ಎಲ್ಲಾ ಒಂದು ಕಡೆ ತಳ್ಳಿ ಹಾಕಿಬಿಟ್ಟಿದ್ದಾರೆ. ಇವತ್ತು ನಮ್ಮ ಪಕ್ಷದ ನಾಯಕರಾದ ಶ್ರೀಮಾನ್ ಸಿಂಧ್ಯಾರವರು ಹೇಳಿದ ಹಾಗೆ ಮೊದಲು ಸಣ್ಣ ಪುಟ್ಟ ಹಂತದಲ್ಲಿ ರಾಜಕೀಯ ನಡೆಯುತ್ತಿತ್ತು. ವಿಲೇಜ್ ಅಕೌಂಟೆಂಟ್‌ರವರ ಲೆವಲ್‌ನಲ್ಲಿ ಹಾಗೂ ಸಬ್‌ಇನ್ಸ್‌ಪೆಕ್ಟರ್‌ರವರ ಲೆವಲ್‌ನಲ್ಲಿ ಈ ರೀತಿ ನಡೆಯುತ್ತಿತ್ತು. ಈಗ ಒಬ್ಬ ಐ.ಎ.ಎಸ್. ಅಧಿಕಾರಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳಿಗೆ ಒಂದು ಪಕ್ಷದ ಲೇಬಲ್ ಅಂಟಿಸಿದರೆ ಇವತ್ತಿನ ಪ್ರಜಾಪ್ರಭುತ್ವ ಎಲ್ಲಿಯವರೆಗೆ ಹೋಗಿದೆ ಎನ್ನುವುದನ್ನು ಯೋಚನೆ ಮಾಡಬೇಕಾಗುತ್ತದೆ. ಬ್ಯೂರೋಕ್ರಸಿ ಇಂಡಿಪೆಂಡೆನ್ಸ್ ಎಂದೇನು ನಾವು ಕರೆಯುತ್ತೇವೆ, ನನಗೆ ಬಹಳ ನೋವಾಗುತ್ತದೆ. ತಮ್ಮ ಕೈಯ್ಯಲ್ಲಿ ಇಂಥ ಒಂದು ಕೆಲಸ ಆಗಿದೆಯೆಂದು ನಮಗೆ ಬಹಳ ನೋವಾಗುತ್ತದೆ. ಏಕೆಂದರೆ ನಿಮ್ಮ ಬಗ್ಗೆ ಪಕ್ಷರಹಿತವಾದಂಥ ಒಂದು ಗೌರವವನ್ನು ಇಟ್ಟುಕೊಂಡಿದ್ದೇವೆ ಹಾಗೆಯೆ ನೀವೊಬ್ಬರು ತತ್ವ ರಾಜಕಾರಣಿ ಎಂದು ಇಡೀ ರಾಜ್ಯದಲ್ಲಿಯೂ ನಿಮ್ಮ ಮೇಲೆ ಗೌರವ ಇದೆ. ಬಹುಶಃ ಇದನ್ನು ಮಂತ್ರಿಗಳು ಹಾಗೂ ಇವರ ಕಾರ್ಯದರ್ಶಿಯವರ ಮಟ್ಟದಲ್ಲಿಯೇ ಮಾಡಿದ್ದರೆ ಒಂದು ನೀತಿ ನಿಯಮದ ಅಡಿಯಲ್ಲಿ ಆಗುತ್ತಿತ್ತು. ಆದರೆ ಇವತ್ತು ಈ ರೀತಿಯಾಗಿಲ್ಲ. ಇವತ್ತು ನಮ್ಮ ಜಿಲ್ಲೆಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಒಂದು ನೀತಿಯನ್ನು ತೆಗೆದುಕೊಂಡಿದ್ದೀರಿ. ಪರಿಶಿಷ್ಟ ಜಾತಿಯವರಿಗೆ ಹೋದ ಸಾರಿ ಮೀಸಲಾತಿ ಇರುವುದನ್ನು ಬದಲಾವಣೆ ಮಾಡಬೇಕೆಂದು ಈ ಸಾರಿ ಬೇರೆ ಕೆಟಗರಿಯನ್ನು ತೆಗೆದುಕೊಳ್ಳಲಾಗಿದೆ. ಆದರೆ ಇದೇ ರೀತಿ ಎಲ್ಲಾ ಕ್ಷೇತ್ರದಲ್ಲಿಯೂ ಹೋದ ಸಲ ಯಾವ ಕೆಟಗರಿ ಇದೆಯೋ ಅದನ್ನು ಈ ಸಲ ಬದಲಾವಣೆ ಮಾಡಿದರೆ ಸರಿಯಾಗುತ್ತದೆ. ಆದರೆ ಇವತ್ತು ಏನಾಗಿದೆ ಎಂದರೆ ನಮ್ಮ ಜಿಲ್ಲೆಯಲ್ಲಿಯೆ ಮುಖ್ಯಮಂತ್ರಿಗಳ ಕ್ಷೇತ್ರದಲ್ಲಿ ಎರಡು ಹಾಗೆಯೇ ಉಳಿದುಕೊಂಡಿದೆ. ನಾಲ್ಕು ಜಿಲ್ಲಾ ಪರಿಷತ್ ಕ್ಷೇತ್ರಗಳು ಹೋದ ಸಲ ಜನರಲ್ ಆಗಿದ್ದು ಈ ಸಲವು ಅದೇ ರಿಪೀಟ್ ಆಗಿದೆ. ಈ ಕ್ಷೇತ್ರದವರು ಅದೃಷ್ಟಮಾಡಿದ್ದು, ಬೇರೆ ಕ್ಷೇತ್ರದವರು ಅನ್ಯಾಯ ಮಾಡಿದ್ದಾರೆಯೆ? ಈ ರೀತಿಯ ತಾರತಮ್ಯ ಎಲ್ಲಾ ಕಡೆಯಾಗಿದೆ. ಇವತ್ತಿನದಿವಸ ಪಕ್ಷದ ರಾಜಕಾರಣ ಈ ಮಟ್ಟಕ್ಕೆ ಹೋಗಬಾರದು. ಇವತ್ತು ನೀವು ಅಧಿಕಾರಕ್ಕೆ

ಬಂದಿದ್ದೀರಿ. ಆದ್ದರಿಂದ ಬೋರ್ಡ್‌ಗೆ ಮತ್ತು ಕಾರ್ಪೊರೇಷನ್‌ಗೆ ಅಥವಾ ಯಾವುದಾದರೂ ಸಮಿತಿಗೆ ನಿಮ್ಮ ಪಕ್ಷದವರನ್ನೆ ಅಧ್ಯಕ್ಷರನ್ನಾಗಿ ಮಾಡಿಕೊಳ್ಳಿ, ಇದಕ್ಕೆ ನಮ್ಮದೇ ಅಭ್ಯಂತರವಿಲ್ಲ. ಆದರೆ ಒಂದು ನೀತಿ ಅಥವಾ ಕಾನೂನು ಬಂದಾಗ ಇದಕ್ಕೆ ಪಕ್ಷವನ್ನು ಲೇಪ ಮಾಡುವುದಕ್ಕೆ ಹೋಗಬೇಡಿ. ಅಥವಾ ನೀತಿಗೆ ಪಕ್ಷವನ್ನು ಲೇಪ ಮಾಡುವುದಕ್ಕೆ ಹೋಗಬೇಡಿ. ಹಾಗೆಯೆ ನೀತಿಗೆ ಜಾತಿಯನ್ನು ಲೇಪ ಅಚ್ಚ ಬೇಡಿ. ಆದರೆ ಇದನ್ನು ನೀವು ಮಾಡಿ ಕಳಂಕವನ್ನು ತಂದು ಕೊಂಡಿದ್ದೀರಿ. ಆದ್ದರಿಂದ ನಾನೇನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಆದ್ದರಿಂದ ನೀವಿಬ್ಬರು ಕುಳಿತುಕೊಂಡು ಒಂದು ನೀತಿಯ ಆಧಾರದ ಮೇಲೆ ಗೈಡ್‌ಲೈನ್ಸ್ ಪ್ರಕಾರ ಒಂದು ಕಂಪ್ಯೂಟರ್ ಇಟ್ಟುಕೊಂಡು ತಾವುಗಳು ಒಂದು ತೀರ್ಮಾನ ಮಾಡಿ. ಮತ್ತೆ ಚುನಾವಣಾ ಆಯೋಗಕ್ಕೆ ಕೊಡತಕ್ಕಂಥದ್ದು ನಿಮ್ಮ ಪ್ರೆಸ್ಟೀಜ್ ಆಗಬಹುದು. ಈ ಸಂದರ್ಭದಲ್ಲಿ ಅದನ್ನು ನಾವು ಹೇಳುವುದಕ್ಕೆ ಹೋಗುವುದಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ತಾವು ಇಬ್ಬರೆ ಕುಳಿತುಕೊಂಡು ಕಂಪ್ಯೂಟರ್ ಮೂಲಕ ಒಂದು ನೀತಿಯ ಆಧಾರದ ಮೇಲೆ ಹೋದ ಸಾರಿ ಯಾವ ಕ್ಷೇತ್ರಕ್ಕೆ ಯಾವ ಕೆಟಗರಿ ಇತ್ತು ಅದನ್ನು ಬಿಟ್ಟು ಈ ಸಾರಿ ಬೇರೆ ಕೆಟಗರಿ ಮಾಡಬೇಕು. ಇದು ಎಲ್ಲಾ ಕ್ಷೇತ್ರದಲ್ಲಿ ಆಗುವಂತೆ ತಾವು ತೀರ್ಮಾನ ತೆಗೆದುಕೊಂಡರೆ ಬಹುಶಃ ಅನುಕೂಲ ಆಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ.

+ಶ್ರೀ ಕೆ.ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ): ಸನ್ಮಾನ್ಯ ಅಧ್ಯಕ್ಷರೇ, ಪ್ರಾಯಶಃ ಹಿಂದೆಂದು ಇಂಥ ಸಮಸ್ಯೆಗಳು ಉದ್ಭವವಾಗಿರಲಿಲ್ಲವೆಂದು ಕಾಣುತ್ತದೆ. ಹೊಸ ಹೊಸ ಸಮಸ್ಯೆಗಳನ್ನು ಅವರೇ ನಿರ್ಮಾಣ ಮಾಡಿಕೊಳ್ಳುತ್ತಿದ್ದಾರೆ. ಏಕೆಂದರೆ ಚುನಾವಣಾ ಆಯೋಗಕ್ಕೆ ಇರತಕ್ಕಂಥ ಅಧಿಕಾರವನ್ನು ಜಿಲ್ಲಾಧಿಕಾರಿಯವರಿಗೆ ಕೊಟ್ಟಿದ್ದಾರೆ. ಈಗಾಗಲೇ ಇದರ ಬಗ್ಗೆ ನಾವೆಲ್ಲಾ ವಿರೋಧ ಮಾಡಿದ್ದೇವೆ. ನಿಯಮದಲ್ಲಿ ಎಲ್ಲೆಲ್ಲಿ ಚುನಾವಣಾಯೋಗ ಎಂದು ಇದೆ ಇದನ್ನು ತೆಗೆದು ಆ ಜಾಗಕ್ಕೆ ಜಿಲ್ಲಾಧಿಕಾರಿಗಳೆಂದು ಸೇರಿಸಿದ್ದಾರೆ. ಇವತ್ತಿನದಿವಸ ಜಿಲ್ಲಾಧಿಕಾರಿಗಳು ಏನೊಂದು ಪಟ್ಟಿಯನ್ನು ಕಳುಹಿಸಿದ್ದಾರೆ ಅದನ್ನು ಇಲ್ಲಿ ಬಂದಮೇಲೆ ಬದಲಾವಣೆ ಮಾಡಿದ್ದಾರೆ. ಈ ರೀತಿ ಆಗಿರುವ ಬಗ್ಗೆ ನನ್ನ ಹತ್ತಿರ ಮಾಹಿತಿ ಇದೆ. ಇದನ್ನು ಬೇಕಾದರೆ ಒದಗಿಸಿಕೊಡುತ್ತೇನೆ. ಇವತ್ತಿನದಿವಸ ಉಡುಪಿ ಜಿಲ್ಲೆಯಲ್ಲಿ ಮಿಯಾರ್ ಎಂಬ ಜಿಲ್ಲಾ ಪಂಚಾಯತ್ ಕ್ಷೇತ್ರದಲ್ಲಿ ಪರಿಶಿಷ್ಟ ಅನುಸೂಚಿ ಜಾತಿಗೆ ಇದ್ದುದನ್ನು ಇಲ್ಲಿಗೆ ಬಂದಮೇಲೆ ಬದಲಾವಣೆ ಮಾಡಿದ್ದಾರೆ. ಇದನ್ನು ಕೆಮ್ಮಣ್ಣು ಕ್ಷೇತ್ರಕ್ಕೆ ಮಾಡಿ ಅಲ್ಲಿ ಮತ್ತೆ ಜನರಲ್ ಮಾಡಿದ್ದಾರೆ ಇದೇ ರೀತಿ ಎರಡು-ಮೂರು ಕಡೆ ಆಗಿದೆ. ಕಳೆದ ಬಾರಿ ಎಲ್ಲಿ ಅನುಸೂಚಿತ ಜಾತಿ ಎಂದು ಇತ್ತೋ ಅದನ್ನು ಹೊರತುಪಡಿಸಿ ಬೇರೆ ಎಲ್ಲಿ ಹೆಚ್ಚು ಜನಸಂಖ್ಯೆ ಇದೆ ಆ ಕ್ಷೇತ್ರವನ್ನು ಅನುಸೂಚಿತ ಜಾತಿಗೆ ಮೀಸಲು ಇಡಬೇಕೆಂದು ಗೈಡ್‌ಲೈನ್ಸ್‌ನಲ್ಲಿ ಕ್ಲಿಯರ್ ಆಗಿ ಹೇಳಲಾಗಿದೆ. ಆದರೆ ಆ ರೀತಿಯಾಗಿ ಆಗಿಲ್ಲ. ತಾವು ಕೊಟ್ಟ ಗೈಡ್‌ಲೈನ್ಸ್ ಪ್ರಕಾರ

ತಾವು ಎಲ್ಲೆಲ್ಲಿ ಬಿಟ್ಟಿದ್ದೀರಿ ಅದನ್ನೆಲ್ಲಾ ಜಿಲ್ಲಾಧಿಕಾರಿಗಳು ಮಾಡಿದ್ದಾರೆ. ಆದರೆ ಅವರು ಮಾಡಿದ್ದನ್ನು ಇಲ್ಲಿ ಬಂದ ಮೇಲೆ ಬದಲಾವಣೆಯಾಗಿದೆ. ಮಾನ್ಯ ಮಂತ್ರಿಗಳು ರೆಕಾರ್ಡ್‌ಗಳನ್ನು ತರಿಸಿ ನೋಡಿದರೆ ಗೊತ್ತಾಗುತ್ತದೆ. ಉಪಾಧ್ಯಕ್ಷರ ಸಹಿ ಇದ್ದರೂ ಕೂಡ ಹಾವೇರಿ ಜಿಲ್ಲೆಯಲ್ಲಿ ಬದಲಾವಣೆಯಾಗಿರುವುದನ್ನು ಮಾನ್ಯ ಸಿಂಧ್ಯಾರವರು ಉದಾಹರಣೆ ಸಮೇತ ಪ್ರಸ್ತಾಪ ಮಾಡಿದ್ದಾರೆ. ಇದೇ ರೀತಿ ಬೇರೆ ಬೇರೆ ಜಿಲ್ಲೆಗಳಲ್ಲಿಯೂ ಆಗಿದೆ ಎಂದು ನಮಗೆ ಮಾಹಿತಿ ಬಂದಿದೆ. ಆದ್ದರಿಂದ ನೀವು ಕಡತಗಳನ್ನು ತೆಗೆಸಿ ನೋಡಬೇಕು ಹಾಗೆಯೆ ಮಂತ್ರಿಗಳು ಮತ್ತು ಶಾಸಕರು ಸಹಿ ಹಾಕಿ ಕಳುಹಿಸಿಕೊಟ್ಟಿದ್ದರೆ ಇದನ್ನೆಲ್ಲಾ ಬದಲಾವಣೆ ಮಾಡುವುದಕ್ಕೆ ತಾವು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ ಇದನ್ನು ಜಿಲ್ಲಾ ಮಂತ್ರಿಗಳಾಗಲಿ ಅಥವಾ ಶಾಸಕರಾಗಲಿ ಮಾಡುವುದಕ್ಕೆ ಅಧಿಕಾರವಿಲ್ಲ. ಕೇವಲ ಜಿಲ್ಲಾಧಿಕಾರಿಯವರಗೆ ಮಾತ್ರ ಇದನ್ನು ಮಾಡುವುದಕ್ಕೆ ಅಧಿಕಾರ ಇದೆ. ಆದರೆ ಇಲ್ಲಿ ಏನಾಗಿದೆ ಎಂದರೆ, ಅಧಿಕಾರ ವಿಕೇಂದ್ರೀಕರಣ ಹೆಸರಿನಲ್ಲಿ ಮತ್ತೆ ಅಧಿಕಾರವನ್ನು ತಮ್ಮ ಹಿಡಿತದಲ್ಲಿಯೇ ಇಟ್ಟುಕೊಳ್ಳುತ್ತಿದ್ದಾರೆ. ಮಾನ್ಯ ಬಿ.ಕೆ.ಚಂದ್ರಶೇಖರವರ ಮೇಲೆ ನಮಗೆಲ್ಲಾ ಬಹಳ ಗೌರವ ಇದೆ. ಏಕೆಂದರೆ, ಹಿಂದೆ ನಾವೆಲ್ಲಾ ಒಂದೇ ಪಕ್ಷದಲ್ಲಿದ್ದೆವು. ದಿವಂಗತ ನಜೀರ್ ಸಾಬ್‌ರವರು ಹಿಂದೆ ಮೊದಲ ಬಾರಿಗೆ ಮಂಡಲ್ ಪಂಚಾಯಿತಿಯ ವ್ಯವಸ್ಥೆಯನ್ನು ತಂದಂಥ ಸಂದರ್ಭದಲ್ಲಿ ಮಾನ್ಯ ಬಿ.ಕೆ.ಚಂದ್ರಶೇಖರ್‌ರವರನ್ನು ಪ್ರತಿಯೊಂದು ಮಟ್ಟದಲ್ಲಿಯೂ ಕರೆದು ಮಾತನಾಡುತ್ತಿದ್ದರು. ಆದರೆ ಇವತ್ತಿನದಿವಸ ಇವರ ಮಾತನ್ನು ಕೇಳುತ್ತಿದ್ದಾರೆಯೇ ಅಥವಾ ಇಲ್ಲವೇ ಎಂಬುದರ ಬಗ್ಗೆ ನನಗೆ ಅನುಮಾನ ಬರುತ್ತಿದೆ. ಮಾನ್ಯ ಸಿಂಧ್ಯಾರವರು ಒಂದು ಮಾತನ್ನು ಈಗಾಗಲೇ ಹೇಳಿದರು. I beg to differ with him. ಅದು ಏನೆಂದರೆ,ನೀವು ಚುನಾವಣೆಯನ್ನು ಮಾಡಿದ್ದೀರಿ. ಆದರೆ ನಾವು ಮಾಡಲಿಲ್ಲವೆಂಬ ಮಾತನ್ನು ಹೇಳಿದರು. ಆದರೆ ಹಿಂದೆ ಇದ್ದಂಥ ಕಾಂಗ್ರೆಸ್ ಸರ್ಕಾರಕ್ಕೂ ಮತ್ತು ನಮ್ಮ ಸರ್ಕಾರಕ್ಕೂ ಹೋಲಿಕೆ ಮಾಡಿದಾಗ ಕೇವಲ ಪಂಚಾಯತಿ ಚುನಾವಣೆಯೊಂದನ್ನು ಬಿಟ್ಟರೆ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಹಾಗೂ ಕೋ-ಆಪರೇಟಿವ್, ಎಪಿಎಂಸಿ ಚುನಾವಣೆ ಮತ್ತು ಪುರಸಭೆ ಚುನಾವಣೆಗಳನ್ನು ನಮ್ಮ ಸರ್ಕಾರ ಇದ್ದಾಗಲೇ ಮಾಡಿದ್ದೇವೆ. ಆದ್ದರಿಂದ ನಮ್ಮ ಸರ್ಕಾರ ಇದ್ದಾಗ ಚುನಾವಣೆ ಮಾಡಲಿಲ್ಲ ಎಂದು ಹೇಳುವುದನ್ನು ನಾನು ಒಪ್ಪಿಕೊಳ್ಳುವುದಿಲ್ಲ. ಇದಕ್ಕೋಸ್ಕರ ಏನೊಂದು ತಿದ್ದುಪಡಿಯನ್ನು ತಂದಿದ್ದರು ಅದನ್ನು ಕಾನೂನು ಪ್ರಕಾರ ಪಾಸ್ ಮಾಡಿಕೊಳ್ಳಲಿಲ್ಲ. ಆದರೆ ಇದನ್ನು ಬುಲ್ಡೋಜ್ ಮಾಡಿ ಮಾಡಿಕೊಂಡಿದ್ದಾರೆ. ಒಂದು ತಿದ್ದುಪಡಿಗೆ ಮೇಲ್ಮನೆಯಲ್ಲಿ ಒಪ್ಪಿದರೆ ಇಲ್ಲಿ ಒಪ್ಪುವುದಿಲ್ಲ. ಈ ಸದನದಲ್ಲಿ ಮಹಾತ್ಮ ಗಾಂಧೀಜಿಯವರ ಫೋಟೋ ಇದೆ. ಅಂದು ಮೊದಲ ಬಾರಿಗೆ ಗ್ರಾಮ ರಾಜ್ಯದ ಕನಸನ್ನು ಕಂಡವರು ಮಹಾತ್ಮ ಗಾಂಧೀಜಿಯವರು. ಅವರು ಒಂದು ಮಾತನ್ನು ಹೇಳಿದ್ದಾರೆ, ಇದನ್ನು ಮೊನ್ನೆ ದಿವಸ ಈ ಮಾತನ್ನು ಹೇಳಿದ್ದೇನೆ. ಆದರೂ ಸಹ

ಇನ್ನೊಂದು ಸಾರಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಏನೆಂದರೆ, In matters of conscience, law of majority does not arise ಎಂದು ಹೇಳಿದ್ದಾರೆ. ಇಲ್ಲಿ ಮೆಜಾರಿಟಿ ಇದೆಯೆಂದು ಇಲ್ಲಿಂದ ಬಿಲ್ ಪಾಸ್ ಮಾಡಿಕೊಂಡು ಮೇಲ್ಮನೆಗೆ ಹೋಗುವುದು ಮತ್ತೆ ಅಲ್ಲಿ ಅವರ ಮೆಜಾರಿಟಿ ಇರುವುದರಿಂದ ಅವರು ಹೇಳಿದಂತೆ ಒಪ್ಪಿಕೊಳ್ಳತಕ್ಕಂಥದು ಇದು ಆಗಬಾರದು. ಈ ಸದನದಲ್ಲಿಯೂ ಸರಿಯಾಗಿ ಚರ್ಚೆಯಾಗಬೇಕು ಮತ್ತು ಇಲ್ಲಿ ಕೊಡತಕ್ಕಂಥ ಒಳ್ಳೆಯ ಸಲಹೆಗಳನ್ನು ಅವರು ಸಹ ಒಪ್ಪಿಕೊಳ್ಳಬೇಕಾಗುತ್ತದೆ. ಹಾಗೆಯೇ ಮೇಲ್ಮನೆಯಲ್ಲಿ ಪಾಸ್ ಮಾಡಿಕೊಂಡು ಬಂದು ಮತ್ತೆ ಇಲ್ಲಿ ಚರ್ಚೆ ಮಾಡುವುದು ಸೂಕ್ತವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗೇನು ತಪ್ಪುಗಳನ್ನು ಮಾಡಿದ್ದಾರೆ ಅದನ್ನು ತಕ್ಷಣವೇ ತಿದ್ದುಪಡಿ ಮಾಡಿಕೊಳ್ಳಬೇಕು. ಇದೇ ಒಂದು ತಪ್ಪುಗಳನ್ನು ಮುಂದುವರಿಸಿಕೊಂಡು ಚುನಾವಣೆಗೆ ಹೋಗಬಾರದೆಂದು ತಮ್ಮ ಮುಖೇನ ಮಾನ್ಯ ಘೋರ್ಪಡೆಯವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ.

+ಶ್ರೀ ರೇವುನಾಯ್ಕ ಬೆಳಮಗಿ (ಕಮಲಾಪುರ): ಸನ್ಮಾನ್ಯ ಅಧ್ಯಕ್ಷರೆ, ಗುಲ್ಬರ್ಗ ಜಿಲ್ಲೆಯಲ್ಲಿ ನನ್ನ ಕ್ಷೇತ್ರವಾದ ಕಮಲಾಪುರದಲ್ಲಿ ಜಿಲ್ಲಾ ಪಂಚಾಯತಿ ಸೀಟುಗಳು ಐದು ಇವೆ. ಇದರಲ್ಲಿ ಮೊದಲನೇ ಸಲ ಒಂದೇ ಒಂದು ಮೀಸಲಾತಿ ಕ್ಷೇತ್ರ ಇತ್ತು. ಆದರೆ ಸಾರಿ ಸರ್ಕಾರ ಮಾಡಿರತಕ್ಕಂಥ ಒಂದು ನೀತಿಯಿಂದ ನನಗೇನು ಅರ್ಥವಾಗದಂತಾಗಿದೆ. ಏಕೆಂದರೆ, ನನ್ನ ಕ್ಷೇತ್ರದಲ್ಲಿ ಎಂಎಲ್ಎ ಮೀಸಲು ಕ್ಷೇತ್ರವಾಗಿದೆ ಹಾಗೆಯೆ ಎಂಪಿ ಚುನಾವಣೆಗೆ ಬೀದರ್ ಮೀಸಲು ಕ್ಷೇತ್ರಕ್ಕೆ ನನ್ನ ಕ್ಷೇತ್ರ ಸೇರಿದೆ. ಆದರೆ ಈಗ ಜಿಲ್ಲಾ ಪಂಚಾಯತಿ ಚುನಾವಣೆಗೆ ಮೂರು ಮೀಸಲು ಕ್ಷೇತ್ರವನ್ನು ಮಾಡಿದ್ದಾರೆ. ಜಿಲ್ಲಾ ಪಂಚಾಯತಿಯ ಐದು ಸೀಟ್‌ನಲ್ಲೆರಡು ಸೀಟ್‌ನ್ನು ಮೀಸಲಾತಿ ಮಾಡಲಿ ಆದರೆ ಮೂರನ್ನು ಮೀಸಲಾತಿ ಮಾಡಿರುವುದರಿಂದ ನಾವು ಜನರಿಗೆ ಯಾವರೀತಿ ಉತ್ತರ ಕೊಡಬೇಕು? ಇಲ್ಲೆಲ್ಲಾ ಜನರು ಏನೆಂದು ಪ್ರಚಾರ ಮಾಡಿದ್ದಾರೆಂದರೆ, ಎಂಎಲ್ಎ ಹೇಳಿರುವುದರಿಂದ ಈ ರೀತಿಯಾಗಿದೆ ಎಂದು ಇವತ್ತಿನದಿವಸ ಇಲ್ಲಿಗೆ ನನ್ನನ್ನು ನೋಡಲು ತುಂಬಾ ಜನರು ಬಂದಿದ್ದಾರೆ. ಜಿಲ್ಲಾ ಪಂಚಾಯತಿಯಲ್ಲಿ ಮೀಸಲಾತಿ ಒಂದಿರುವುದು ಎರಡಾಗಲಿ ಪರವಾಗಿಲ್ಲ. ಆದರೆ ಮೂರು ಮೀಸಲಾತಿ ಕ್ಷೇತ್ರ ಏಕೆ ಆಯಿತೆಂದುನನಗೆ ಪ್ರಶ್ನೆ ಕೇಳುತ್ತಿದ್ದಾರೆ. ನಾನು ಅವರಿಗೆ ಏನೆಂದು ಉತ್ತರ ಕೊಡಲಿ? ಆದ್ದರಿಂದ ಇದನ್ನು ಸರಿಪಡಿಸಬೇಕೆಂದು ಬಹಳ ನೊಂದ ಮನಸ್ಸಿನಿಂದ ಸರ್ಕಾರದವರಲ್ಲಿ ವಿನಂತಿಮಾಡಿಕೊಳ್ಳಬೇಕಾಗಿದೆ. ಒಂದು ವೇಳೆ ನೀವು ಸರಿಪಡಿಸದಿದ್ದರೆ ನಾನು ಇಲ್ಲಿಯೆ ಸತ್ಯಾಗ್ರಹ ಕುಳಿತುಕೊಳ್ಳಬೇಕಾಗಿದೆ. ಐದು ಜಿಲ್ಲಾಪಂಚಾಯತ್ ಕ್ಷೇತ್ರದಲ್ಲಿ ಮೂರು ಮೀಸಲಾತಿ ಕ್ಷೇತ್ರ ಮಾಡಿದರೆ ನಾವೇನು ಮಾಡಬೇಕು. ಆದ್ದರಿಂದ ಮಾನ್ಯ ಅಧ್ಯಕ್ಷರು ನಮ್ಮ ರಕ್ಷಣೆಗೆ ಬರಬೇಕು. ಇವತ್ತಿನದಿವಸ ನಮ್ಮ ಕ್ಷೇತ್ರಕ್ಕೆ ಹೋಗಿ ಜನರಿಗೆ ಯಾವರೀತಿ ಮುಖ ತೋರಿಸಬೇಕೆಂಬುದನ್ನು ನೀವೆ ಹೇಳಿ? ಮಾನ್ಯ ಘೋರ್ಪಡೆ ಸಾಹೇಬರು ಒಳ್ಳೆಯ ನಾಯಕರಾಗಿದ್ದು, ಸಚಿವರೂ

ಕೂಡ ಆಗಿದ್ದೀರಿ. ನನ್ನ ಕ್ಷೇತ್ರದ ಜಿಲ್ಲಾ ಪಂಚಾಯತಿ 5 ಕ್ಷೇತ್ರದಲ್ಲಿ ಮೂರು ಮೀಸಲು ಕ್ಷೇತ್ರವಾಗಿದೆ ಇದು ನಿಮ್ಮ ಗಮನಕ್ಕೆ ಬಂದಿದೆಯೋ ಅಥವಾ ಇಲ್ಲವೋ ನನಗಂತೂ ಗೊತ್ತಿಲ್ಲ. ಆದ್ದರಿಂದ ಹೋದ ಸಾರಿ ಒಂದು ಮೀಸಲು ಕ್ಷೇತ್ರ ಇತ್ತು, ಈ ಸಾರಿ ಎರಡು ಮೀಸಲು ಕ್ಷೇತ್ರ ಮಾಡಿ ಪರವಾಗಿಲ್ಲ. ಆದರೆ 5ರಲ್ಲಿ 3 ಮೀಸಲು ಕ್ಷೇತ್ರ ಮಾಡಿದರೆ ನನ್ನ ಕ್ಷೇತ್ರಕ್ಕೆ ಹೋಗಿ ಜನರನ್ನು ಯಾವರೀತಿ ಫೇಸ್ ಮಾಡುವುದು? ಆದ್ದರಿಂದ ಇದನ್ನು ಸರಿಪಡಿಸಬೇಕೆಂದು ತಮ್ಮ ಮುಖೇನ ಸರ್ಕಾರದಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

+ಶ್ರೀ ಬಿ.ಬಿ.ಶಿವಪ್ಪ (ಸಕಲೇಶಪುರ): ಸನ್ಮಾನ್ಯ ಅಧ್ಯಕ್ಷರೆ, ನಾನು ಹೆಚ್ಚಿಗೆ ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ. ಈಗೇನು ಪಟ್ಟಿ ಮಾಡಿದ್ದಾರೆ ಅದು ಸರಿಯಿಲ್ಲ ಮತ್ತು ಸರ್ಕಾರ ಏನು ಗೈಡ್‌ಲೈನ್ಸ್ ಮಾಡಿದೆ ಅದರ ಪ್ರಕಾರ ಆಗುತ್ತಿಲ್ಲ. ಇವತ್ತು ಬೆಳಿಗ್ಗೆ ನಮ್ಮ ಜಿಲ್ಲಾ ಉಸ್ತುವಾರಿ ಮಂತ್ರಿಗಳ ಜೊತೆ ಈ ವಿಷಯದ ಬಗ್ಗೆ ಮಾತನಾಡಿದ್ದೇನೆ. ನನ್ನ ಕ್ಷೇತ್ರದಲ್ಲಿ ಕಳೆದ ಸಾರಿ ಜನರಲ್ ಇತ್ತು, ಈ ಸಾರಿಯೂ ಸಹ ಜನರಲ್ ಇದೆ. ಈಗಾಗಲೇ ಮಾನ್ಯ ಸದಸ್ಯರೆಲ್ಲರೂ ಹೇಳಿದ ಪ್ರಕಾರ ಇದು ರೋಸ್ಟರ್ ಪದ್ಧತಿ ಪ್ರಕಾರ ಬದಲಾವಣೆ ಆಗಬೇಕು. ಆದರೆ ಬದಲಾವಣೆಯಾಗಿಲ್ಲ, ಇದು ಅನೇಕ ಕಡೆ ಈ ರೀತಿಯಾಗಿದೆ. ಆದರೆ ನಾನು ಇದಕ್ಕೆ ಜಾಸ್ತಿ ಪ್ರವೇಶ ಮಾಡದೇ ಇರುವುದರಿಂದ ಅಷ್ಟಾಗಿ ಇದರ ಬಗ್ಗೆ ಗಮನ ಹರಿಸಿಲ್ಲ. ಯಾವುದೇ ಸಂದರ್ಭದಲ್ಲಿ ಈ ವಿಷಯದ ಬಗ್ಗೆ ಡಿ.ಸಿ.ಯವರು ನಮ್ಮನ್ನು ಕರೆದು ಕೇಳಿರುವಂಥ ವಿಚಾರ ನನ್ನ ಗಮನಕ್ಕೆ ಬಂದಿಲ್ಲ, ಹಾಗೆಯೇ ನನಗಂತೂ ಇದೂವರೆಗೂ ಕರೆದಿಲ್ಲ. ಈ ಪಟ್ಟಿ ಮಾಡತಕ್ಕಂಥ ಸಂದರ್ಭದಲ್ಲಿ ಆಯಾಯ ಕ್ಷೇತ್ರದ ಶಾಸಕರನ್ನು ಕರೆದು ಚರ್ಚೆ ಮಾಡಿ ಒಂದು ರೀತಿಯ ಅಂತಿಮ ತೀರ್ಮಾನಕ್ಕೆ ಬರುವುದಕ್ಕೆ ಸಾಧ್ಯವಿತ್ತಲ್ಲವೇ? ಆದರೆ ಇದು ಆಗಲಿಲ್ಲ. ಕಳೆದಸಾರಿ ಇದ್ದಂಥದನ್ನು ನೀವು ಬದಲಾವಣೆ ಮಾಡುವುದಕ್ಕೆ ಗೈಡ್‌ಲೈನ್ಸ್ ಕೊಟ್ಟಿದ್ದೀರೊ ಅಥವಾ ಇಲ್ಲವೊ? ಒಂದು ವೇಳೆ ಕೊಟ್ಟಿದ್ದರೆ ಏಕೆ ಬದಲಾವಣೆಯಾಗಲಿಲ್ಲ? ಬದಲಾವಣೆ ಆಗದೇ ಇದ್ದರೆ ಮತ್ತೆ ಬದಲಾವಣೆ ಮಾಡಲು ಮಾನ್ಯ ಮಂತ್ರಿಗಳು ಒಪ್ಪಿಕೊಳ್ಳಬೇಕಾಗುತ್ತದೆ. ಆದ್ದರಿಂದ ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

4.10 ಪಿ.ಎಂ.

+ಶ್ರೀ ಕೆ.ಬಿ.ಮಲ್ಲಿಕಾರ್ಜುನ (ಬೀರೂರು): ಸನ್ಮಾನ್ಯ ಅಧ್ಯಕ್ಷರೆ, ಚಿಕ್ಕಮಗಳೂರು ಜಿಲ್ಲೆಗೆ ಸೀಮಿತವಾಗಿ ಮೀಸಲಾತಿ ಯಾವ ರೀತಿಯಾಗಿ ಆಗಿದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಜಿಲ್ಲಾ ಪಂಚಾಯಿತಿಯ 30 ಕ್ಷೇತ್ರಗಳು ಚಿಕ್ಕಮಂಗಳೂರು ಜಿಲ್ಲೆಯಲ್ಲಿ ಇರುತ್ತವೆ. ಕಡೂರು ತಾಲ್ಲೂಕಿನಲ್ಲಿ 8 ಕ್ಷೇತ್ರಗಳು ಇದ್ದು, ಅದರಲ್ಲಿ ಮಹಿಳೆಯರಿಗೆ 5 ಕ್ಷೇತ್ರಗಳನ್ನು ಮೀಸಲಾತಿ ಮಾಡಿದ್ದಾರೆ. ಕೊಪ್ಪದಲ್ಲಿ ಮೂರು

ಕ್ಷೇತ್ರಗಳು ಇವೆ, ಅದರಲ್ಲಿ ಯಾವುದೂ ರಿಸರ್ವೇಶನ್ ಆಗಿರುವುದಿಲ್ಲ. ನರಸಿಂಹರಾಜ ಕ್ಷೇತ್ರದಲ್ಲಿ ಎರಡು ಇದೆ, ಅದರಲ್ಲಿ ಒಂದು ರಿಜರ್ವೇಶನ್ ಆಗಿರುವುದಿಲ್ಲ. ದಿನಾಂಕ: 14-4-2000ದಂದು ಚಿಕ್ಕಮಂಗಳೂರು ಐಬಿಯಲ್ಲಿ ಒಂದು ಸಭೆ ಆಯಿತು, ಅಲ್ಲಿ ಮಾಡಿರುವ ಪಟ್ಟಿಗೂ ಇಲ್ಲಿ ಆಗಿರುವ ನೋಟಿಫಿಕೇಶನಗೂ ವ್ಯತ್ಯಾಸ ಇದೆ. ಅಲ್ಲಿ ಆಗಿರತಕ್ಕಂಥದ್ದು ಇಲ್ಲಿ ಆಗಲಿಲ್ಲ. ಜಿಲ್ಲಾ ಸಚಿವರ ಕಛೇರಿಯಲ್ಲಿ ಒಂದು ಸಭೆ ಆಯಿತು. ಎಂತಹ ವಿಪರ್ಯಾಸವೆಂದರೆ, ಆಡಳಿತಪಕ್ಷದ ಶಾಸಕರು ಹೊರಗೆ ಹೋಗಿ ನಮಗೆ ಪ್ರಿವಿಲೇಜ್ ನೋಟೀಸ್ ಕೊಡತಕ್ಕಂಥ ಪರಿಸ್ಥಿತಿಯಾಯಿತು. ಆಡಳಿತ ಪಕ್ಷದ ಶಾಸಕರನ್ನು ಹೊರಗೆ ಕಳುಹಿಸಿ ಮಾಡತಕ್ಕಂಥದ್ದಾಯಿತು. ಇಲ್ಲಿ ಎರಡು ಆಗಬೇಕಾಗುತ್ತದೆ. ಇದು ಆಗಿರತಕ್ಕಂಥದ್ದನ್ನು ಸರಿಪಡಿಸಿಕೊಡಬೇಕು, ಜಿಲ್ಲಾಧಿಕಾರಿಗಳಿಗೆ ಕೊಟ್ಟಿರುವ ಅಧಿಕಾರವನ್ನು ತೆಗೆದು ಸರ್ಕಾರವೆಂದು ಮಾಡಿಕೊಳ್ಳಲಿ. ಇದರ ಬಗ್ಗೆ ಏನೇನು ಸರ್ಕ್ಯೂಲರ್ ಇಶ್ಯು ಮಾಡಿದ್ದಾರೆ ಅದೆಲ್ಲವನ್ನು ವಾಪಸ್ಸು ತೆಗೆದುಕೊಳ್ಳಲಿ. ನಮಗೆ ಇಷ್ಟ ಬಂದಂತೆ ಮಾಡಿಕೊಳ್ಳುತ್ತೇವೆ. ನಮಗೆ ಯಾರು ಪ್ರಶ್ನೆ ಮಾಡಬೇಡಿ ಎಂದು ಅವರು ಹೇಳಲಿ, ನಾವು ಅದಕ್ಕೂ ಒಪ್ಪುತ್ತೇವೆ. ಇಲ್ಲವಾದರೆ ಅವರು ನಾಮಿನೇಟ್ ಮಾಡಿಬಿಡಲಿ. ಇಲ್ಲವಾದರೆ ನ್ಯಾಯಬದ್ಧವಾಗಿ ರಿಸರ್ವೇಶನ್ ಮಾಡಿಕೊಡಲಿ. ಎಷ್ಟು ರಿಪೀಟ್ ಆಗಿವೆ, ಕಡೂರಿನಲ್ಲಿ 5 ಕ್ಷೇತ್ರಗಳಿದ್ದರೆ 4ನ್ನು ರಿಜರ್ವೇಶನ್ ಮಾಡಿಬಿಟ್ಟಿದ್ದಾರೆ. ತಮ್ಮ ಕಛೇರಿಗೆ ಕರೆಸಿ, ಜಿಲ್ಲಾಧಿಕಾರಿಗಳು ಏನು ಪಟ್ಟಿ ಕೊಟ್ಟಿದ್ದಾರೆ. ಅದರಲ್ಲಿ ಸರ್ಕಾರ ಏನು ಬದಲಾವಣೆ ಮಾಡಿತು, ನಿಮ್ಮ ಕಛೇರಿಯಲ್ಲಿ ಅದನ್ನು ಪರಿಶೀಲನೆ ಮಾಡಬೇಕು. ಆಗ ತಮಗೆ ಎಷ್ಟು ಅನ್ಯಾಯವಾಗಿದೆ ಎಂದು ಗೊತ್ತಾಗುತ್ತದೆ. ತಾವು ಚಿಕ್ಕಮಂಗಳೂರು ಜಿಲ್ಲೆಯ ಪಟ್ಟಿಯನ್ನು ತರಿಸಿ, ನಿಮ್ಮ ಕಛೇರಿಗೆ ಆರ್‌ಡಿಪಿಆರ್ ಸಚಿವರನ್ನು, ಆರ್‌ಡಿಪಿಆರ್ ಕಾರ್ಯದಶಿಯವರನ್ನು ಹಾಗೂ ಸಂಬಂಧಪಟ್ಟ ಸಚಿವರನ್ನು ಕರೆಸಿ ಜಿಲ್ಲಾಧಿಕಾರಿಗಳು ಏನು ಪಟ್ಟಿ ಮಾಡಿದ್ದಾರೆ, ಇವರು ಏನು ಬದಲಾವಣೆ ಮಾಡಿದ್ದಾರೆ, ನೊಟಿಫಿಕೇಶನ್ ಏನಾಗಿದೆ, ಪುನಃ ನೋಟಿಫಿಕೇಶನ್ ಏನಾಗುವುದಕ್ಕೆ ಪ್ರಯತ್ನ ನಡೆಯುತ್ತಿದೆ, ಇದೆಲ್ಲವನ್ನು ತಾವು ಪರಿಶೀಲನೆ ಮಾಡಬೇಕು. ತಾವು ಸರಿಯಾಗಿದೆ ಎಂದು ಹೇಳಿದರೆ, ಇದರ ಬಗ್ಗೆ ನಾವು ಯಾರೂ ಮಾತನಾಡುವುದಿಲ್ಲ. ಇಲ್ಲಿ ಮಾನ್ಯ ಘೋರ್ಪಡೆಯವರು ಎದ್ದು ನಿಂತು ಆ ಗಾಂಧೀಜಿಯವರ ಫೋಟೋ ನೋಡಿ ಎಲ್ಲಾ ಸರಿಯಾಗಿ ಮಾಡಲಾಗಿದೆ ಎಂದು ಹೇಳಿಬಿಡಲಿ. ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಬೇಕು. ಒಂದು ಸರಸ್ವತಿಪುರ ಕ್ಷೇತ್ರದಲ್ಲಿ ತಿಲಕ್‌ಗೌಡರ ಎಂದು ಒಂದು ಕಮ್ಯುನಿಟಿ ಇದೆ. ಅವರಿಗೆ ಇಲ್ಲಿಯವರೆಗೆ ಒಂದು ರಿಸರ್ವೇಶನ್ ಸಿಕ್ಕಿರುವುದಿಲ್ಲ, ಅದಕ್ಕಾಗಿ ಅವರ ಸಲುವಾಗಿ ಒಂದು ರಿಸರ್ವೇಶನ್ ಮಾಡಿಕೊಡಿ ಎಂದು ಕೇಳಿದ್ದೇನೆ. ನಮ್ಮ ಜನಾಂಗದವರ ಸಲುವಾಗಿ ನಾನು ಕೇಳಿರುವುದಿಲ್ಲ. ಅವರಿಗೆ ಇವತ್ತು ಆ ರಿಸರ್ವೇಶನ್ ಮಾಡಿ ಕೊಡುವುದಕ್ಕಾಗಿಲ್ಲ. ಅಲ್ಲಿ 500 ಜನ ಬಿಸಿಎಂದವರು ಇಲ್ಲ, ಅಲ್ಲಿ ಬಿಸಿಎಂ ಮಾಡಿದ್ದಾರೆ. ಎಲ್ಲಿ ಬಿಸಿಎಂ ದವರು ಜಾಸ್ತಿ ಇದ್ದಾರೆ, ಅಲ್ಲಿ ಇವರಿಂದ ಬಿಸಿಎಂ

ಮಾಡುವುದಕ್ಕಾಗಿರುವುದಿಲ್ಲ. ಇದರ ಬಗ್ಗೆ ಬಹಳ ಚರ್ಚೆ ಮಾಡುವುದರಿಂದ ಲಾಭವಾಗುತ್ತದೆ ಎನ್ನುವ ಭಾವನೆ ಕೂಡ ನಮಗೆ ಇಲ್ಲ. ಇದರ ಬಗ್ಗೆ ತಮ್ಮ ಕಛೇರಿಯಲ್ಲಿ ತೀರ್ಮಾನವಾಗಲಿ, ಅಥವಾ ಮಾನ್ಯ ಘೋರ್ಪಡೆಯವರು ಎದ್ದು ನಿಂತು ಗಾಂಧೀಜಿಯವರ ಫೋಟೋ ನೋಡಿ ನಾನು ಸರಿ ಮಾಡಿದ್ದೇನೆಂದು ಹೇಳಲಿ ನಾವು ಎಲ್ಲದಕ್ಕೂ ವಿಥಡ್ರಾ ಮಾಡಿಕೊಳ್ಳುತ್ತೇವೆ. ನಮಗೆ ಹೇಗೆ ಬೇಕು ಹಾಗೆ ಮಾಡಿಕೊಳ್ಳುತ್ತೇವೆಂದಾದರೂ ಅವರು ಹೇಳಲಿ. ಜಿಲ್ಲಾಧಿಕಾರಿಗಳು ಬೇಡ, ನಾನೇ ಸರ್ಕಾರ, ಸರ್ಕಾರ ಏನು ಹೇಳುತ್ತದೆ ಅದನ್ನು ನಾವು ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಅವರು ಹೇಳಲಿ ಅದಕ್ಕೂ ನಾವು ಒಪ್ಪುತ್ತೇವೆ.

+ಶ್ರೀ ಗುಂಡಪ್ಪ ವಕೀಲ(ಔರಾದ್): ಮಾನ್ಯ ಅಧ್ಯಕ್ಷರೆ, ಇದೇ ತಿಂಗಳು 20ನೇ ತಾರೀಖಿನ ದಿವಸ ಇದೇ ಸದನದಲ್ಲಿ ಇನ್ನೂ ನೋಟಿಫಿಕೇಶನ್ ಆಗಿರಲಿಲ್ಲ. ಜಿಲ್ಲಾಧಿಕಾರಿಗಳು ರೆಕ್ಮೆಂಡ್ ಮಾಡಿ ಕಳುಹಿಸಿದ್ದಾರೆ, ಅದರಲ್ಲಿ ತಪ್ಪಾಗಿದೆ, ನಿಮ್ಮ ಗೈಡ್‌ಲೈನ್ಸ್ ಪ್ರಕಾರ ಇರುವುದಿಲ್ಲ ನೋಡಿ ಎಂದು ನಾನು ಹೇಳಿದೆ. ಇದನ್ನು ಸಪೋರ್ಟ್ ಮಾಡಿ ವಿರೋಧಪಕ್ಷದ ನಾಯಕರುಗಳು ಮಾತನಾಡಿದ್ದಾರೆ. ಇದೇ ಸದನದಲ್ಲಿ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ನಾನು ನೋಡುತ್ತೇನೆ., ಅದನ್ನು ಸರಿಪಡಿಸುತ್ತೇನೆಂದು ಕೂಡ ಹೇಳಿದ್ದಾರೆ. ಆದರೆ ಅದನ್ನು ವೆರಿಫೈ ಮಾಡಲಿಲ್ಲ, ನಮ್ಮನ್ನು ಕರೆಸಲಿಲ್ಲ, ಅದನ್ನು ಏನು ಮಾಡದೇ ಈಗ ನೋಟಿಫಿಕೇಶನ್ ಮಾಡಿದ್ದಾರೆ. ಇದರ ಅರ್ಥ ಏನು? ವಿರೋಧಪಕ್ಷದ ನಾಯಕರನ್ನು ಹಿಯಾಳಿಸಬೇಕೆಂದೋ ಅಥವಾ ಅವರ ಮೇಲೆ ದೌರ್ಜನ್ಯ ಮಾಡಬೇಕೋ, ಇನ್ಸಲ್ಟ್ ಮಾಡಬೇಕು ಸಾರ್ವಜನಿಕರಲ್ಲಿ ಎಂದು ಇದೆಯೋ ಹೇಗೆ, ಏನು ನಿಮ್ಮ ಉದ್ದೇಶ? ನಾವು ಶಾಸಕರಲ್ಲವೇ, ಜನ ನಮಗೆ ಓಟು ಹಾಕಿಲ್ಲವೇ? ನಮಗೆ ಅಧಿಕಾರ ಇಲ್ಲವೇ? ಇದರ ಬಗ್ಗೆ ಸ್ವಲ್ಪ ಸದನದಲ್ಲಿ ಚರ್ಚೆ ನಡೆಯಬೇಕು. ನಮಗೆ ಅವಮಾನ ಮಾಡುವುದಾದರೆ ನೀವು ಪಬ್ಲಿಕ್‌ನಲ್ಲಿ ಹೇಳಿಬಿಡಿ, ನಾವು ಯಾರನ್ನು ಕೇಳುವುದಿಲ್ಲವೆಂದು ಹೇಳಬೇಕು. ಗೈಡ್‌ಲೈನ್ಸ್ ಏಕೆ ಬೇಕು? ಜಿಲ್ಲಾಧಿಕಾರಿಗಳು ಏತಕ್ಕೆ ಬೇಕು? ಅವರು ಸ್ಟ್ಯಾಂಪ್ ಹೊಡೆಯುವುದಕ್ಕೆ ಬೇಕಾ? 10 ಪರ್ಸೆಂಟ್ 'ಎ' ಗ್ರೂಪ್‌ನವರು ಇಲ್ಲ, ಅಲ್ಲಿ ಬಿ ಪರ್ಸೆಂಟ್‌ದವರು 85 ಇದ್ದಾರೆ, ಅಲ್ಲಿ ಅನ್ಯಾಯವಾಗಿದೆ ಅಡ್ವಾನ್ಸ್ ಆಗಿ ಇಲ್ಲಿ ಸದನದಲ್ಲಿ ಚರ್ಚೆಯಾಗಿದೆ, ಈ ಚರ್ಚೆಗೂ ಕಿಮ್ಮತ್ತಿಲ್ಲವೆಂದರೆ ಅಲ್ಲಿ ಏನು ನಡೆಯುತ್ತಿದೆ? ಇದನ್ನು ತಾವು ಇಂಟರ್‌ಫಿಯರ್ ಮಾಡಬೇಕು. ಇದು ಸಾಮಾನ್ಯ ವಾದ ಮಾತಲ್ಲ, ಸಂವಿಧಾನಾತ್ಮಕವಾದ ಒಂದು ಸಂಕಟ ಸದನದ ಮೇಲೆ ಬಂದಿದೆ. It is a crisis which has arisen in respect of the rights and liabilities of members. That is not an ordinary question. This House should think over it and the Hon'ble Speaker has to take care of it and take serious note of it. Therefore my appeal to the

Government is that they have to verify and they have to re-think upon this matter.

ಅದರ ಸಲುವಾಗಿ ನಾನು ಮತ್ತೊಂದು ಸಲ ಅಪೀಲ್ ಮಾಡುತ್ತೇನೆ. ಇದನ್ನು ಸರಿಪಡಿಸುವಂಥ ಒಂದು ವ್ಯವಸ್ಥೆಯನ್ನು ಮಾಡಬೇಕು.

+ಶ್ರೀ ಅಪ್ಪಚ್ಚು ರಂಜನ್ ಎಂ.ಪಿ(ಸೋಮವಾರಪೇಟೆ): ಮಾನ್ಯ ಅಧ್ಯಕ್ಷರೆ, ನಾನು ನೇರವಾಗಿ ಪಾಯಿಂಟ್‌ಗೆ ಬರುತ್ತೇನೆ ಸೋಮವಾರಪೇಟೆ ತಾಲ್ಲೂಕಿನಲ್ಲಿ ಸುಮಾರು 10 ಜಿಲ್ಲಾ ಪಂಚಾಯಿತಿ ಸೀಟುಗಳು ಇವೆ. ಅದರಲ್ಲಿ 8 ಸೀಟುಗಳನ್ನು ರಿಸರ್ವೇಶನ್ ಮಾಡಿದ್ದಾರೆ, 4 ಬಿಎಂಸಿ ಎ ಗ್ರೂಪ್‌ಗೆ ಕೊಟ್ಟಿದ್ದಾರೆ, ಎಲ್ಲಿ ಬಿಸಿಎಂ ಎ ಜನಾಂಗ ಇಲ್ಲವೋ ಅಲ್ಲಿ ಬಿಸಿಎಂ ಎ ಮಾಡಿದ್ದಾರೆ. ಎಲ್ಲಿ ಬಿಸಿಎಂ ಎ ಜನಾಂಗ ಇದ್ದಾರೆ, ಅಲ್ಲಿ ಬಿಸಿಎಂ ಬಿ ಗ್ರೂಪ್‌ಗೆ ಮಾಡಿದ್ದಾರೆ. ಕಳೆದ ಸಾರಿ ನಮ್ಮ ಜಿಲ್ಲಾ ಮಂತ್ರಿಗಳು, ಕೊಡಗಿನ ಎಲ್ಲ ಮಂತ್ರಿಗಳು, ಶಾಸಕರು ಜಿಲ್ಲಾಧಿಕಾರಿಗಳು ಮಾಡಿರುವ ಪಟ್ಟಿಯನ್ನು ನೋಡಿದ್ದೇವೆ. ಅವರು ಏನು ಮಾಡಿದ್ದಾರೆಂದರೆ, ನಮ್ಮದು ಮಲೆನಾಡು ಪ್ರದೇಶವಾಗಿರುವುದರಿಂದ ಹೆಚ್ಚಿನ ಸ್ಥಳದಲ್ಲಿ ನಡೆಯುವುದಕ್ಕೆ ಆಗುವುದಿಲ್ಲವೆನ್ನುವ ದೃಷ್ಟಿಯಿಂದ ಮಹಿಳೆಯರ ಮೀಸಲಾತಿ ಬೇಡ ಎಂದು ಬದಲಾವಣೆ ಮಾಡಿದ್ದು ಕೂಡ ಇದೆ. ಜಿಲ್ಲಾಧಿಕಾರಿಗಳು ಮಾಡಿ ಕಳುಹಿಸಿರುವ ಪಟ್ಟಿಯನ್ನು ಜಿಲ್ಲಾ ಮಂತ್ರಿಗಳು ಹಾಗೂ ಎಲ್ಲಾ ಮಂತ್ರಿಗಳು ಅದನ್ನು ಒಪ್ಪಿದ್ದಾರೆ. ಆದರೆ ಇಲ್ಲಿ ಬಂದಾಗ ಅದು ಬದಲಾವಣೆಯಾಗಿದೆ. 16 ಕಿಮಿ. ನಡೆದು ಅಲ್ಲಿಗೆ ಮಹಿಳೆಯರಿಗೆ ಹೋಗುವುದಕ್ಕಾಗುತ್ತದೆಯೇ? ನಾನು ಮಂತ್ರಿಗಳ ಹೆಸರು ಹೇಳುವುದಿಲ್ಲ. ಮಹಿಳಾ ಮಂತ್ರಿಗಳಾದ ಒಬ್ಬರು ಜಿಗಣೆಗೆ ಹೋದಾಗ ಅಲ್ಲಿ ಜಿಗಣೆ ಕಚ್ಚಿ ತೊಂದರೆಯಾಗಿದ್ದು ಇದೆ. ಅಂತಹ ಸ್ಥಳದಲ್ಲಿ ಈ ರೀತಿಯಾಗಿ ಮಾಡಿದರೆ ನಾವು ಯಾವ ರೀತಿಯಾಗಿ ಕೆಲಸ ಮಾಡುವುದು? ಜಿಲ್ಲಾಧಿಕಾರಿಗಳು ಸ್ಥಳವನ್ನು ಪರಿಶೀಲನೆ ಮಾಡಿ, ಅಲ್ಲಿಯ ಜನಸಂಖ್ಯೆಯ ಆಧಾರದ ಮೇಲೆ ಮಾಡಿ ಕಳುಹಿಸಿಕೊಟ್ಟಿದ್ದಾರೆ, ಅದನ್ನು ಅಪ್ರೂವಲ್ ಮಾಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

+ಶ್ರೀ ಎಸ್.ಎಸ್.ಪಾಟೀಲ (ಮುಂಡರಗಿ): ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ಕೊಟ್ಟಿದ್ದರು, ಬಹುಶಃ ಅದನ್ನು ಏತಕ್ಕೆ ಇಲ್ಲಿಗೆ ತರಿಸಿದರು ಗೊತ್ತಾಗಲಿಲ್ಲ, ಅದಕ್ಕೆ ಅವರು ಉತ್ತರವನ್ನು ಕೊಡಬೇಕು. ಅದನ್ನು ಅಲ್ಲಿಯೇ ಪ್ರಕಟಮಾಡಬೇಕಾಗಿತ್ತು, ಅದನ್ನು ಇಲ್ಲಿಗೆ ಏಕೆ ತರಿಸಿದ್ದು ಹೇಳಬೇಕಾಗುತ್ತದೆ. ಅವರು ಕಳುಹಿಸಿರುವ ಲಿಸ್ಟ್‌ನ್ನು ನಾನು ನೋಡಿದೆ. ರಿಸರ್ವೇಶನ್ ಮಾಡುವುದಕ್ಕೆ ಹೆಣ್ಣು-ಗಂಡು ಎಲ್ಲ ರೀತಿಯ ಜನಸಂಖ್ಯೆ ನಮಗೆ ಸಿಗುತ್ತದೆ. 'ಹುಲಕೋಟೆ' ಎಂದು ನಮ್ಮಲ್ಲಿ ಒಂದು ಕ್ಷೇತ್ರವಿದೆ. 18220 ಗಂಡು ಜನಸಂಖ್ಯೆ, 17219 ಹೆಣ್ಣುಮಕ್ಕಳ ಜನಸಂಖ್ಯೆ ಇದೆ; ನೀವು ಮಾರ್ಗ ಸೂಚಿಯನ್ನು ಕಳುಹಿಸಿಕೊಟ್ಟರೆ

ಲಿಸ್ಟ್‌ನ್ನು ಜಿಲ್ಲಾಧಿಕಾರಿಗಳು ಹಚ್ಚುತ್ತಾರೆ. ಗದಗ ಜಿಲ್ಲೆಯಲ್ಲಿ ಚಿಕ್ಕನರಗುಂದ ಜಿಲ್ಲಾ ಪಂಚಾಯಿತಿ ಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆ ಅಂದರೆ, 2060 ಜನ ಎಸ್‌ಟಿ ಯವರು ಇದ್ದಾರೆ. ಇಲ್ಲಿಗೆ ಬರಬೇಕಾದ ಎಸ್‌ಟಿ ಗ್ರೂಪ್, ಇದನ್ನು ಬೆಳ್ಳಟ್ಟಿಗೆ ಮಾಡಿದ್ದಾರೆ. 2060 ಇರುವಂತಹದ್ದು ಇದು ಹೋದಸಲ ಕೂಡ ಎಸ್‌ಟಿ ಇರಲಿಲ್ಲ, ಈ ಸಲ ಅದು ಆಗಬೇಕಾಗಿತ್ತು. ನಾನು ಅಂಕಿಸಂಖ್ಯೆಗಳನ್ನು ಹೇಳುತ್ತೇನೆ, ಮಾಡುವುದು ಬಿಡುವುದು ಅದು ಬೇರೆ. ಇಡೀ ಗದಗ ಜಿಲ್ಲೆಗೆ 5 ಮಹಿಳಾ ಮೀಸಲಾತಿಯನ್ನು ಮಾಡಿದ್ದಾರೆ. ನನ್ನ ಕ್ಷೇತ್ರದಲ್ಲಿ 3 ಬರುತ್ತವೆ. ನರಗುಂದಕ್ಕೆರಡು ಹಾಕಿದ್ದಾರೆ. ನರಗುಂದ ಹಾಗೂ ಮುಂಡರಗಿಗೆ ಎರಡು ಮಹಿಳಾ ಕ್ಷೇತ್ರಗಳು ಮಾತ್ರ ಇರಬೇಕು. ಬೇರೆ ಕ್ಷೇತ್ರದಲ್ಲಿ ಎಸ್‌ಸಿಯವರು ಇರುತ್ತಾರೆ ಅಲ್ಲಿ ಮಾಡಬಾರದಾ, ಅವರು ಆಗಬಾರದಾ, ಎಲ್ಲಿ ಎಸ್‌ಸಿ ಇರುತ್ತದೆ ಅಲ್ಲಿಯೇ ಇಟ್ಟು ಬಿಡುವುದು, ಈ ರೀತಿಯಾಗಿ ಇವರು ಮಾಡಿದ್ದಾರೆ. ಬೇರೆ ಕ್ಷೇತ್ರದಲ್ಲಿ ಇರುವ ಎಸ್‌ಸಿಗಳು ಅವರು ಎಸ್‌ಸಿಗಳಲ್ಲವೇ? ಅವರು ಆಗಬಾರದೆ? ಎಲ್ಲಿ ಎಸ್‌ಸಿ ಇರುತ್ತೋ ಅಲ್ಲಿಯೇ ಮೀಸಲಾತಿಯನ್ನು ಇಡುವುದು, ಈ ರೀತಿಯಾಗಿ ಮಾಡಿದ್ದಾರೆ. ಆದ್ದರಿಂದ ಮಾನ್ಯ ಮಂತ್ರಿಗಳು ಪ್ರಾಮಾಣಿಕವಾಗಿ ಇದನ್ನು ಬದಲಾವಣೆ ಮಾಡಬೇಕು. ನೀವು ಡಿ.ಸಿ.ಯವರಿಗೆ ಏನು ಮಾರ್ಗಸೂಚಿಗಳನ್ನು ಕಳುಹಿಸಿರುತ್ತೀರೋ ಅದರ ಪ್ರಕಾರ ಅವರು ಮಾಡಬೇಕು. ಆಗ ನಿಮ್ಮನ್ನು ಯಾರು ಕೇಳುವುದಿಲ್ಲ ಆ ದಿನ ನೀವು ಗಾಂಧಿ ಭಾವಚಿತ್ರದ ಮುಂದೆ ನಿಂತು ಮಾರ್ಗಸೂಚಿಗಳನ್ನು ಕಳುಹಿಸುತ್ತೇವೆಂದು ಹೇಳಿದಿರಿ, ಅದರಂತೆ ಡಿ.ಸಿ.ಯವರು ಕಾರ್ಯ ಪ್ರವೃತ್ತರಾಗುತ್ತಾರೆಂದು ಹೇಳಿದಿರಿ. ಈ ಮಾತನ್ನು ನೀವು ಹೇಳಿದರೋ ಇಲ್ಲವೋ ಎನ್ನತಕ್ಕಂಥದನ್ನು ಈಗ ನೀವು ಹೇಳಬೇಕು. ನೀವು ಮಾರ್ಗಸೂಚಿಯನ್ನು ಡಿ.ಸಿ.ಯವರಿಗೆ ಕಳುಹಿಸಿ ಅದರಂತೆ ಅವರು ಮೀಸಲಾತಿಯನ್ನು ನಿಗಧಿಪಡಿಸಬೇಕು. ಇಷ್ಟೇ ನನ್ನ ಮನವಿ.

+ಶ್ರೀ ಕೆ.ಶ್ರೀನಿವಾಸಗೌಡ (ಕೋಲಾರ): ಮಾನ್ಯ ಅಧ್ಯಕ್ಷರೆ, ನನಗೆ ಹಿಂದನದು ಜ್ಞಾಪಕಕ್ಕೆ ಬರುತ್ತದೆ. ಶ್ರೀ ಭರೂವ್‌ರವರು ಕಾಂಗ್ರೆಸ್ ಅಧ್ಯಕ್ಷರಾಗಿದ್ದಾಗ ''ಇಂದಿರಾ ಇಂಡಿಯಾ, ಇಂಡಿಯಾ ಇಂದಿರಾ'' ಎಂದು ಹೇಳುತ್ತಿದ್ದರು. ಈಗ ನಾನು ನೋಡಿದಾಗ ''ಕೃಷ್ಣ ಕರ್ನಾಟಕ, ಕರ್ನಾಟಕ ಕೃಷ್ಣ'' ಆದ ಹಾಗೆ ಕಾಣಿಸುತ್ತದೆ. ಇವತ್ತು ಆ ಪರಿಸ್ಥಿತಿಯನ್ನು ಏಕೆ ಒಬ್ಬ ವ್ಯಕ್ತಿಗೆ ಸೀಮಿತ ಮಾಡುತ್ತಿದ್ದೀರಿ ಎಂದು ಹೇಳಿದರೆ ತಪ್ಪಾಗಲಾರದು. ಇವತ್ತು ನೀವು ಮಾಡಿದಂತಹ ಲಿಸ್ಟ್‌ನ ಪ್ರಕಾರ ನನ್ನ ತಾಲ್ಲೂಕಿನಲ್ಲಿ 5 ಜನಕ್ಕೆ 3 ಮೀಸಲಾತಿ ಇದೆ. ಅದರಲ್ಲಿ 3 ಎಸ್‌ಸಿಗಳನ್ನೆ ಮಾಡಿದ್ದಾರೆ. ಇದನ್ನು ನಾವು ಕೇಳಿದರೆ ಅವರು ಜಿಲ್ಲಾಧಿಕಾರಿಗಳು ಮಾಡಿದ್ದು ಎಂದು ಹೇಳುತ್ತಾರೆ. ಅದಕ್ಕಾಗಿ ನಾವು ಜಿಲ್ಲಾಧಿಕಾರಿಗಳಿಗೆ ಈ ಮೀಸಲಾತಿಯನ್ನು ಇಲ್ಲಿ ಅನೌನ್ಸ್ ಮಾಡಿ ಎಂದು ಕೇಳಿದೆವು. ಅದನ್ನು ನೇರವಾಗಿ ಇಲ್ಲಿಗೆ ತಂದು ಇಲ್ಲಿ ಅದನ್ನು ಅನೌನ್ಸ್ ಮಾಡಿದ್ದಾರೆ. ಇದು ತಮ್ಮ ಗಮನಕ್ಕೂ ಕೂಡ ಬಂದಿದೆ. ಇವತ್ತು 3 ತಾಲ್ಲೂಕುಗಳಲ್ಲಿ ಎಸ್‌ಸಿಗಳಿಗೆ ರಿಸರ್ವೇಶನ್ ಇಲ್ಲ.

(ಗೊಂದಲ)

ಅವರು ಈ ಮನೆಯ ಹಿರಿಯ ಸದಸ್ಯರಾಗಿದ್ದಾರೆ, ಅದರಲ್ಲೂ ಅವರು ಸಚಿವರಾಗಿದ್ದಾರೆ ಇಂತಹ ಸಚಿವರ ಕೈಯಲ್ಲಿ ಈ ರೀತಿ ತಪ್ಪನ್ನು ಮಾಡಿಸಿದ್ದಾರೆ. ನನಗೆ ಹಿಂದೆ ಇದ್ದ ಶ್ರೀ ಕೆ.ಹೆಚ್.ಪಾಟಿಲ್‌ರವರು ಜ್ಞಾಪಕಕ್ಕೆ ಬರುತ್ತಾರೆ, ಅವರು ನಾಮಿನೇಷನ್ ಮಾಡುವಾಗ ಪ್ರೈಮರಿ ಸೊಸೈಟಿಯಲ್ಲೂ ಕೂಡ ನಾಮಿನೇಷನ್‌ನ್ನು ಮಾಡಿದ್ದರು. ಅವರು ನನ್ನ ಹತ್ತಿರ ಒಂದು ಮಾತನ್ನುಹೇಳಿದರು ''ನನ್ನ ಜೀವನದಲ್ಲಿ ಇಂತಹ ಒಂದು ಕೆಟ್ಟ ಗಳಿಗೆ ಬರಬಾರದಾಗಿತ್ತು ಶ್ರೀನಿವಾಸಗೌಡರೆ '' ಎಂದು ಹೇಳಿದ್ದರು. ಇವತ್ತು ಅದೇ ಕೆಟ್ಟ ಗಳಿಗೆಯು ಮಾನ್ಯ ಘೋರ್ಪಡೆಯವರಿಗೆ ಬಂದಿದೆ, ಈಗಲೂ ಕೂಡ ಕಾಲ ಮಿಂಚಿಹೋಗಿಲ್ಲ. ಇದನ್ನು ರದ್ದುಪಡಿಸಿ ನೀವು ಜಿಲ್ಲೆಗಳಿಗೆ ಕೊಟ್ಟು ಜಿಲ್ಲಾಧಿಕಾರಿಗಳಿಂದ ಇದನ್ನು ಅನೌನ್ಸ್ ಮಾಡಿಸಿದರೆ ನಿಜವಾಗಲೂ ಕೂಡ ಯಾರು ಶಾಶ್ವತವಾಗಿ ಉಳಿಯುವುದಿಲ್ಲ. ಆದರೆ ನೀವು ಮಾಡಿದಂತಹ ಕಾರ್ಯವೂ ಸರಿಯಾಗಿರುವುದಿಲ್ಲ. ನಾವು ನಜೀರ್‌ಸಾಬ್‌ರವರನ್ನು ಜ್ಞಾಪಿಸಿಕೊಳ್ಳುತ್ತೇವೆ, ಅಂತಹ ಕೆಲಸವನ್ನು ತಾವು ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

+ಶ್ರೀ ಎಸ್.ಪಿ.ಮುದ್ದಹನುಮೇಗೌಡ(ಕುಣಿಗಲ್): ಮಾನ್ಯ ಅಧ್ಯಕ್ಷರೆ, ನಿಯಮ-69 ರ ಅಡಿಯಲ್ಲಿ ಈಗಾಗಲೇ ಸಾಕಷ್ಟು ಈ ವಿಷಯದ ಬಗ್ಗೆ ವಿರೋಧಪಕ್ಷದ ನಾಯಕರುಗಳು ಚರ್ಚೆ ಮಾಡಿದ್ದಾರೆ. ಈಗ ಅವರ ಕೂಗು ಏನಿದೆ ಎಂದರೆ, ಈ ಒಂದು ಮೀಸಲಾತಿಯನ್ನು ನಿಗಧಿಪಡಿಸುವಲ್ಲಿ ಸರ್ಕಾರ ಆಡಳಿತ ಪಕ್ಷದ ಶಾಸಕರುಗಳ ಜೊತೆ ಶಾಮೀಲಾಗಿ ಮೀಸಲಾತಿ ಮಾಡಿದೆ ಎಂದು ಆರೋಪವನ್ನು ಮಾಡುತ್ತಿದ್ದಾರೆ. ಈಗ ಸರ್ಕಾರವು ಗೈಡ್‌ಲೈನ್ಸ್‌ನ್ನು ಇಶ್ಯೂ ಮಾಡಿ ಮೀಸಲಾತಿಯನ್ನು ನಿಗಧಿಪಡಿಸುತ್ತಿದೆ. ಅವರು ಆ ಗೈಡ್‌ಲೈನ್ಸ್‌ನಲ್ಲಿ ಎಲ್ಲಿ ವಯಾಲೇಟ್ ಆಗಿದೆ ಎಂದು ತೋರಿಸಲಿ.

(ಗೊಂದಲ)

ಅಧ್ಯಕ್ಷರು: ನೀವು ಮಾತನಾಡುವಾಗ ಆಡಳಿತಪಕ್ಷದವರು ಸುಮ್ಮನಿದ್ದರು. ಮಾತನಾಡುವವರಿಗೆ ತೊಂದರೆಯನ್ನು ಕೊಡಬೇಡಿ. ಅವರು ಮಾತನಾಡಲಿ.

ಶ್ರೀ ಎಸ್.ಪಿ.ಮುದ್ದಹನುಮೇಗೌಡ: ಈಗ ಮೀಸಲಾತಿಗಳ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವು ಏನೆಂದರೆ, ಮೀಸಲಾತಿಯು ಸರ್ಕಾರ ಕೊಟ್ಟಿರತಕ್ಕಂತಹ ಒಂದು ಗೈಡ್‌ಲೈನ್ಸ್ ಮೇಲೆ ಆಗಿದೆ ಎಂಬುದು ನಮ್ಮ ವಾದವಾಗಿದೆ. ಒಂದು ಪಕ್ಷ ಆ ಮೀಸಲಾತಿಯು ಸರ್ಕಾರದ ಮಾರ್ಗಸೂಚಿಯನ್ನು ಮೀರಿ ಉಲ್ಲಂಘನೆ ಮಾಡಿ ಆಗಿದೆ ಎಂದು ಯಾವುದಾದರೂ ಒಂದು ನಿರ್ದಿಷ್ಟವಾದ ಪ್ರಕರಣವಿದ್ದರೆ ದಯಮಾಡಿ ತನ್ನಿ, ಅದನ್ನು ಬಿಟ್ಟು ಸುಮ್ಮನೆ ಏನು ಹೇಳುತ್ತೀರಿ. ನನ್ನ ಕ್ಷೇತ್ರದಲ್ಲಿ ಒಂದೇ ಒಂದು ಜನರಲ್ ಇರುವುದು, ಸುಮ್ಮನಿದ್ದರೆ ಮೀಸಲಾತಿ, ಜನತೆಗೆ ಮೀಸಲಾತಿಯು ಶಾಸಕರ ಪರವಾಗಿ,

ಆಡಳಿತ ಪಕ್ಷದ ಶಾಸಕರು ಹೇಳಿದ ಹಾಗೆ ಆಗಿದೆ ಎಂಬ ವಾದವನ್ನು ಸುಮ್ಮನೆ ನೀವು ಕೊಡುವುದರ ಬದಲು, ನೀವು ನಿರ್ದಿಷ್ಟವಾದ ಪ್ರಕರಣದಲ್ಲಿ ಮೀಸಲಾತಿ ಮಾರ್ಗಸೂಚಿ ವಯಾಲೇಟ್ ಆಗಿದೆ ಎಂದು ಹೇಳಿದೆ ಸರಿಯಾಗುತ್ತದೆ. ಈಗ ಏನು ಭಾಷಣವನ್ನು ಮಾಡುವುದರಿಂದ ಇದರೊಳಗೆ ಏನೋ ನಡೆದುಹೋಗಿದೆ, ಇವರು ಹೇಳಿದ ಹಾಗೆ ಮಾಡಿದ್ದಾರೆ, ಇವರು ತಪ್ಪನ್ನು ನಮ್ಮ ಮೇಲೆ ಹಾಕಬೇಕೆನ್ನುವ ಅಪಪ್ರಚಾರವನ್ನು ಮಾಡುತ್ತಾರೆಯೇ ವಿನಃ ಇವರ ವಾದದಲ್ಲಿ ಯಾವುದೇ ಹುರುಳಿಲ್ಲ ಎಂದು ನಮ್ಮ ಸ್ಪಷ್ಟ ನಿಲುವು ಆಗಿದೆ.

ಶ್ರೀ ಆರ್.ನಾರಾಯಣ: ಮಾನ್ಯ ಅಧ್ಯಕ್ಷರೆ, They have failed to establish violation of guidelines. ಎಲ್ಲಿದೆ ಎನ್ನತಕ್ಕಂತದನ್ನು ಒಬ್ಬರು ಹೇಳಲಿಲ್ಲ. ನನಗೆ ಗೊತ್ತಿರುವ ಪ್ರಕಾರ ಎಸ್‌ಸಿ ಮತ್ತು ಎಸ್‌ಟಿ, ಇದರ ಬಗ್ಗೆ ನಾವು ಚರ್ಚೆ ಮಾಡಿದ್ದೇವೆ, ಒಂದೇ ಒಂದು ಕಡೆ ಅವರು ಎಸ್‌ಸಿ ಮತ್ತು ಎಸ್‌ಟಿ ಗೈಡ್‌ಲೈನ್ಸ್‌ನ್ನು ಈ ರೀತಿ ಮಾಡಿದ್ದಾರೆ ಎಂದು ಒಂದು ಉದಾಹರಣೆಯನ್ನು ಅವರು ಕೊಡಲಿ. ಎಸ್‌ಸಿ ಮತ್ತು ಎಸ್‌ಟಿ ಮೀಸಲಾತಿಯನ್ನು ನನಗೆ ಗೊತ್ತಿರುವ ಪ್ರಕಾರ ನಾಮಿನೇಷನ್ ಆಧಾರದ ಮೇಲೆಯೇ ಆಗಿದೆ ತಪ್ಪಾಗಿದ್ದರೆ ಅವರು ಒಂದೇ ಒಂದು ಉದಾಹರಣೆಯನ್ನು ಕೊಡಲಿ.

ಶ್ರೀ ಸಿ.ಬೈರೇಗೌಡ: ಮಾನ್ಯ ಅಧ್ಯಕ್ಷರೆ, ಪಾಯಿಂಟ್ ಆಫ್ ಆರ್ಡರ್.

ಅಧ್ಯಕ್ಷರು: ಮಾನ್ಯ ನಾರಾಯಣರವರೆ, ಮಾನ್ಯ ಬೈರೇಗೌಡರು ಪಾಯಿಂಟ್ ಆಫ್ ಆರ್ಡರನ್ನು ರೈಸ್ ಮಾಡಿದ್ದಾರೆ ತಾವು ಮಾತನಾಡುವುದನ್ನು ನಿಲ್ಲಿಸಿ.

(ಗೊಂದಲ)

ಸದ್ಯಕ್ಕೆ ಈ ಬಗ್ಗೆ ಚರ್ಚೆಯನ್ನು ಇಲ್ಲೀ ಕ್ಲೋಸ್ ಮಾಡಬೇಕಾಗುತ್ತದೆ. ಮಾನ್ಯ ಬೈರೇಗೌಡರೇ ತಾವು ಮಾತನಾಡಿ.

ಶ್ರೀ ಸಿ.ಬೈರೇಗೌಡ (ವೇಮಗಲ್): ಮಾನ್ಯ ಅಧ್ಯಕ್ಷರೆ, ರೂಲ್ 69 ಪ್ರಕಾರ ರೂಲ್-71

"71 - There shall be no formal motion before the House nor voting. The member who has given notice may make a short statement and the Minister shall reply shortly. Any member who has previously intimated to the Speaker may be permitted to take part in the discussion."

ಈಗ ಎನಾಗಿದೆ ಎಂದರೆ, ತಾವು ಸಾರಾಸಗಟಾಗಿ ತಾವು ರುಜು ಹಾಕಿರುವವರಿಗೂ, ಹಾಕದೆ ಇರುವವರಿಗೂ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತಿದ್ದೀರಿ. ಈ ರೂಲ್ 71ರ: ಪ್ರಕಾರ ಹಾಗೆ ಅವಕಾಶವಿಲ್ಲ, ಆದ್ದರಿಂದ ದಯವಿಟ್ಟು ತಾವು ಉಳಿದವರಿಗೆ ಅವಕಾಶವನ್ನು ಕೊಡದೆ, ಯಾರು ಸಹಿಯನ್ನು ಮಾಡಿರುತ್ತಾರೋ ಅವರಿಗೆ ಅವಕಾಶವನ್ನು ಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

(ಗೊಂದಲ)

ಅಧ್ಯಕ್ಷರು: ಸಾಮಾನ್ಯವಾಗಿ ಎಲ್ಲಾ ಕಡೆಯವರಿಗೂ ಮಾತನಾಡಲು ಸಮಯಾವಕಾಶವನ್ನು ಕೊಡುತ್ತಿದ್ದೇವೆ. ಅದೇ ರೀತಿ ಈಗ ಕೊಟ್ಟುಕೊಂಡು ಬಂದಿದ್ದೇವೆ. If you point out, then please go through Rule 72. Next rule 72.

"72. The Speaker may, if he thinks fit, prescribe a time limit for the speeches.

So, I am going to fix the time. I want to take sense of the House.

ಯಾರು ರುಜು ಹಾಕಿದ್ದಾರೋ ಅವರಿಗೆ ಟೈಮ್ ಲಿಮಿಟ್‌ನ್ನು ಫಿಕ್ಸ್ ಮಾಡೋಣ. I want to take the sense of the House.

ಇನ್ನು ಎಷ್ಟು ಹೊತ್ತು ಇದರ ಬಗ್ಗೆ ಡಿಸ್‌ಕಸ್ ಮಾಡೋಣ ಹೇಳಿ. ಇಲ್ಲಿ ಒಂದು ತಾಸು ಅಂತ ಇಲ್ಲ.

The Chair can fix the timings. I want to take the sense of the House.

ಇನ್ನರ್ಧ ಗಂಟೆ ಇದರ ಬಗ್ಗೆ ಚರ್ಚೆಯನ್ನು ಮುಂದುವರಿಸೋಣವೇ? I want to take the sense of the House. I will go according to the sense of the house.

ಈಗಾಗಲೇ ಇದರ ಬಗ್ಗೆ ಒಂದುಕಾಲು ಗಂಟೆಯವರೆಗೆ ಚರ್ಚೆ ಮಾಡಿದ್ದಾರೆ.

ಶ್ರೀ ಬಿ.ಎನ್.ಬಚ್ಚೇಗೌಡ: ತಮಗೆ ಇದನ್ನು ನಿರ್ಧರಿಸುವ ಅಧಿಕಾರವಿದೆ. ತಾವು ಇದರ ಬಗ್ಗೆ ತೀರ್ಮಾನ ಮಾಡಬೇಕು. ಆ ರೀತಿ ನಾವು ನಡೆದುಕೊಳ್ಳುತ್ತೇವೆ.

ಅಧ್ಯಕ್ಷರು: ನನಗೆ ಅಧಿಕಾರವಿದೆ, **I want to take the sense of the House AFterwards I can take the decision, not before that.** ಈಗ ಇಲ್ಲಿ ರುಜು ಮಾಡಿರುವವರ ಪೈಕಿ ಶ್ರೀ ಭೈರೇಗೌಡರು, ಶ್ರೀ ಕೌಜಲಗಿ, ಶ್ರೀ ಕಟ್ಟಿಮನಿ 3 ಜನರು ಬಾಕಿ ಇದ್ದಾರೆ, ಉಳಿದವರೆಲ್ಲರೂ ಈಗಾಗಲೇ ಮಾತನಾಡಿದ್ದಾರೆ. 3 ಜನರಿಗೆ 5-5 ನಿಮಿಷಗಳ ಕಾಲ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ.

ಶ್ರೀ ಕೆ.ಬಿ.ಕೋಳಿವಾಡ್: ಮಾನ್ಯ ಅಧ್ಯಕ್ಷರೇ, ಬೇರೆ ಸಂದರ್ಭಗಳಲ್ಲೂ ಸಹಿತ ಬೇರೆಯವರಿಗೆ ಮಾತನಾಡುವುದಕ್ಕೆ ತಾವು ಅನುಮತಿಯನ್ನು ಕೊಟ್ಟಿದ್ದೀರಿ. ಇದು ರಾಜ್ಯಕ್ಕೆ ಸಂಬಂಧಪಟ್ಟ ಒಂದು ಪ್ರಶ್ನೆಯಿರುವುದರಿಂದ ಎಲ್ಲರಿಗೂ ತಾವು ಅನುಮತಿಯನ್ನು ಕೊಡಬೇಕು. ಇದು ಬಹಳ ಮಹತ್ವದ ವಿಷಯವಿದೆ. ಇದು ನಿಯಮ 69 ಇದ್ದರೂ ಕೂಡ ಅನೇಕ ಸಂದರ್ಭಗಳಲ್ಲಿ ಸಿಗ್ನೇಟರ್ಸ್ ಅಲ್ಲದಿದ್ದರೂ ಪರ್ಮಿಷನ್ ಕೊಟ್ಟ ಉದಾಹರಣೆಗಳು ನಮ್ಮ ಸದನದಲ್ಲಿದೆ. ಇದು ಮಹತ್ವ ವಿಷಯವಾಗಿರುವುದರಿಂದ ಎಲ್ಲರಿಗೂ ಅವರವರ ಅಭಿಪ್ರಾಯಗಳನ್ನು ಹೇಳುವುದಕ್ಕೆ ತಾವು ಅವಕಾಶ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೇ, ನಾವುಗಳ ಸಹಾ ಸಹಿ ಹಾಕಿ ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ. ಒಟ್ಟಿಗೆ ತೆಗೆದುಕೊಳ್ಳುತ್ತೇವೆಂದು ತಾವು ಹೇಳಿದ್ದರಿಂದ ನಾವು ಪ್ರತ್ಯೇಕ ನಿಲುವಳಿ ಸೂಚನೆಯನ್ನು ಕಳುಹಿಸಲಿಲ್ಲ. ಆವತ್ತಿನಿಂದಲೂ ನಾವು ನಿಲುವಳಿ ಸೂಚನೆ ಬಗ್ಗೆ ಕೇಳುತ್ತಲೇ ಇದ್ದೇವೆ. ಯಾರು ಸಹಿ ಹಾಕಿದ್ದಾರೋ ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡುವುದರ ಜೊತೆಯಲ್ಲಿ ನಮಗೂ ಕೊಟ್ಟು ಮತ್ತು ಸಮಯವನ್ನು ನಿಗದಿ ಮಾಡಿ ಅವರವರ ಭಾವನೆಗಳನ್ನು ಒಂದೊಂದು ನಿಮಿಷ ಎರಡು ನಿಮಿಷವಾದರೂ ಹೇಳುವುದಕ್ಕೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು: ಒಂದೊಂದು ನಿಮಿಷ, ಎರಡು ನಿಮಿಷದಲ್ಲಿ ನಿಲ್ಲಿಸುವುದೇ ಇಲ್ಲ. ಹೇಳಿದ್ದನ್ನೇ ಹೇಳುತ್ತಾರೆ. ರಿಪೀಟ್ ಮಾಡುತ್ತಾರೆ. ಇನ್ ಜನರಲ್ ವ್ಯತ್ಯಾಸವಾಗಿದೆ. ಸರಿಪಡಿಸಿ ಎಂದರೆ ಸಾಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅವರು ಮಾಡಿರುವ ಅಧ್ವಾನಕ್ಕೆ ನಾವು ಹೇಳುವುದು ಬಹಳ ಕಡಿಮೆಯಾಗಿದೆ.

ಅಧ್ಯಕ್ಷರು: ಆಯಿತು, 5 ಗಂಟೆಗೆ ಇದು ಚರ್ಚೆ ಮುಗಿಯಬೇಕು. ಆ ನಂತರ ಹತ್ತು ನಿಮಿಷ ಮಾನ್ಯ ಮಂತ್ರಿಗಳಿಂದ ಉತ್ತರ ಅಷ್ಟೆ. ಅಲ್ಲಿಗೆ ಈ ವಿಷಯ ಮುಗಿಯಿತು.

ಶ್ರೀ ಕೆ.ಬಿ.ಕೋಳಿವಾಡ್: ಮಾನ್ಯ ಅಧ್ಯಕ್ಷರೇ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳ ರಿಸರ್ವೇಷನ್ ವಿಷಯದಲ್ಲಿ ನಡೆದ ಚರ್ಚೆಯಲ್ಲಿ ಸನ್ಮಾನ್ಯ ಹಿರಿಯ ಸದಸ್ಯರಾದ ಸಿಂಧ್ಯಾರವರು ಏನೊ ನಮ್ಮ ಹಾವೇರಿ ಜಿಲ್ಲೆಯ ಬಗ್ಗೆ ರೆಫರೆನ್ಸ್ ತೆಗೆದುಕೊಂಡರು ಎಂದು ನಾನು ಸ್ವಲ್ಪ ತಡವಾಗಿ ಬಂದು ಕೇಳಿದೆ. ಹಾವೇರಿ ಜಿಲ್ಲೆಯಲ್ಲಿ ನಾವು ಶಾಸಕರುಗಳು ಅಭಿಪ್ರಾಯ ಕೊಟ್ಟಂತೆ ಒಂದೂ ಆಗಿಲ್ಲ. ಆದ್ದರಿಂದ ಶಾಸಕರ ಅಭಿಪ್ರಾಯವನ್ನು ತೆಗೆದುಕೊಂಡು ಇವರು ಹೀಗೆ ಮಾಡಿದ್ದಾರೆ, ಹಾವೇರಿ ಜಿಲ್ಲೆ ಇದು ಕಾಂಗ್ರೆಸ್‌ನ ಒಂದು ಜಿಲ್ಲಾಧಿಕಾರಿಗಳ ಕಛೇರಿಯಂತೆ ಆಗಿದೆ ಎಂದು ಏನೊಂದು ಆಪಾದನೆಯನ್ನು ಮಾಡಿದ್ದಾರೆ, ಇದು ನಿಜವಾಗಲೂ ಸತ್ಯಕ್ಕೆ ದೂರವಾದ ವಿಷಯ. ನಮ್ಮ ಕ್ಷೇತ್ರಗಳಲ್ಲೂ ಸಹಿತ ಅನೇಕ ತಪ್ಪುಗಳಾಗಿವೆ, ಇಲ್ಲ ಎಂದು ಹೇಳುವುದಿಲ್ಲ ಉದಾಹರಣೆಗೆ ನಿಮಗೆ ಹೇಳಬೇಕೆಂದರೆ, ಹಿರೇಕೆರೂರ್ ತಾಲ್ಲೂಕಿನಲ್ಲಿ ಒಂದೂ ಜನರಲ್ ಆಗಿಲ್ಲ. ಆಮೇಲೆ ಶಿಗ್ಗಾಂವ್‌ನಲ್ಲಿ ಮೂರಕ್ಕೆ ಮೂರು ಜನರಲ್ ಆಗಿವೆ. ಇದು ನಮ್ಮನ್ನು ಕೇಳಿ ಮಾಡಿದ್ದರೆ ಈ ರೀತಿಯಾಗುತ್ತಿರಲಿಲ್ಲ. ನಮ್ಮನ್ನು ಕೇಳಿ ಮಾಡಿದ್ದಾರೆ ಎನ್ನುವ ಮಾತನ್ನು ತಾವೇನು ಹೇಳಿದ್ದೀರಿ, ಅದು ಮಾತ್ರ ಸತ್ಯಕ್ಕೆ ದೂರವಾದುದು. ನಮಗೂ ಸಹಿತ ನಮ್ಮ ನಮ್ಮ ಕ್ಷೇತ್ರದಲ್ಲಿ ಬಹಳ ತೊಂದರೆಯಾಗಿದೆ ಎನ್ನುವ ಮನವಿಯನ್ನು ಈಗಾಗಲೇ ನಾವು ಮಾನ್ಯ ಮುಖ್ಯಮಂತ್ರಿಗಳಿಗೆ ಸಲ್ಲಿಸುತ್ತಿದ್ದೇವೆ. ನಿನ್ನೆಯೂ ಸಲ್ಲಿಸಿದ್ದೇವೆ. ಇವತ್ತೂ ಸಲ್ಲಿಸುತ್ತಿದ್ದೇವೆ. ಇವರು ಗೈಡ್‌ಲೈನ್ಸ್‌ಗಳನ್ನೂ ಸಹಿತ ಬದಲಾವಣೆ ಮಾಡಬೇಕಾಗುತ್ತದೆ. ನನ್ನ ಅಭಿಪ್ರಾಯದ ಪ್ರಕಾರ ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ, ಇದನ್ನು ಜನಸಂಖ್ಯೆಯ ಆಧಾರದಮೇಲೆ ಏನು ಕೊಟ್ಟಿದ್ದೀರಿ, ಅದರಲ್ಲಿ ಇಷ್ಟೆಲ್ಲಾ ಅನಾಹುತಗಳಾಗುತ್ತಿವೆ. ಒಂದೇ ಗೈಡ್‌ಲೈನ್ಸ್ ಸಾಕು. ಏನೆಂದರೆ ಈ ಸಾರಿ ಇದ್ದ ರಿಸರ್ವೇಷನ್‌ಗಳು ಮತ್ತೊಂದು ಚುನಾವಣೆಗಳು ಬಂದಾಗ ಅವುಗಳು ಇರಬಾರದು. ಇದೊಂದಿದ್ದರೆ ಸಾಕು. ಯಾರಿಗೂ ಯಾವ ಶಾಸಕರಿಗೂ ಮನಸ್ಸಿಗೆ ನೋವಾಗುವುದಿಲ್ಲ. ಅದನ್ನು ಬಿಟ್ಟು ಎಸ್‌ಟಿ ಜನಸಂಖ್ಯೆ ಎಷ್ಟು, ಎ ಮತ್ತು ಬಿ ಜನಸಂಖ್ಯೆ ಇಲ್ಲವೇ ಇಲ್ಲ ಇವರ ಕಡೆಗೆ, ಈ ರೀತಿ ಜನಸಂಖ್ಯೆ ಆಧಾರದ ಮೇಲೆ ಏನು ತೆಗೆದುಕೊಂಡಿದ್ದೀರಿ, ಇದು ತಪ್ಪು ಎನ್ನುವ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಒಂದೇ ಗೈಡ್‌ಲೈನ್ಸ್‌ನ್ನು ತಾವು ಕೊಡಿ. ಈ ಸಾರಿ ಇದ್ದ ರಿಸರ್ವೇಷನ್ ಕ್ಯಾಟಗರಿಗಳು ಏನಿವೆ, ಅವು ಪುನಃ ಮುಂದಿನ ಚುನಾವಣೆಗಳಿಗೆ ಇರಬಾರದು ಎಂದು ಮಾಡಿ. ಇದನ್ನು ನಾನು ಎಲ್ಲಾ ಶಾಸಕರ ಪರವಾಗಿ ಒತ್ತಾಯ ಮಾಡುತ್ತಿದ್ದೇವೆ. ಪುನಃ ಅದನ್ನು ತಾವು ರೆವ್ಯೂ ಮಾಡಬೇಕು. ಬದಲಾವಣೆ ಮಾಡುವ ಪೈಕಿ ಹೇಳುವವರಲ್ಲಿ ನಾನೂ ಒಬ್ಬನು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಪ್ರಭಾಕರ ಬಂಗೇರ: ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 31 ಸ್ಥಾನಗಳಿವೆ. 31 ಸ್ಥಾನಗಳ ಪೈಕಿ 12 ಸ್ಥಾನಗಳನ್ನು ಮಹಿಳೆಯರಿಗಾಗಿ ಇರಿಸಿದ್ದಾರೆ.

ಮತ್ತು ಎಸ್‌ಸಿ/ಎಸ್‌ಟಿಗೆ 4 ಸ್ಥಾನವನ್ನು ಇರಿಸಿದ್ದಾರೆ. ಅದರಲ್ಲಿ ಮಹಿಳೆಯರಿಗೆ ಇರಿಸಿದ ಸ್ಥಾನದಲ್ಲಿ ಬೆಳ್ತಂಗಡಿ ತಾಲ್ಲೂಕಿಗೆ 4 ಸ್ಥಾನ. ಜಿಲ್ಲಾ ಪಂಚಾಯತ್‌ನಲ್ಲಿರುವುದು 6 ಸ್ಥಾನ. 6 ಸ್ಥಾನಗಳ ಪೈಕಿ 4 ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಟ್ಟಿದ್ದಾರೆ. ಇದು ಸರಿಯಾದ ತೀರ್ಮಾನವಲ್ಲ. ನಾವು ಸದನದಲ್ಲಿ ಕೇಳಿದಾಗ ಸನ್ಮಾನ್ಯ ಸಚಿವರು ಹೇಳಿದರು, ಜಿಲ್ಲಾಧಿಕಾರಿಗಳು ನಾವು ಕೊಟ್ಟ ಗೈಡ್‌ಲೈನ್ಸ್ ಪ್ರಕಾರ ಮಾಡುತ್ತಾರೆಂದು ಹೇಳಿದರು. ಗೈಡ್‌ಲೈನ್ಸ್ ಪ್ರಕಾರ ಯಾವುದ್ಯಾವುದು ಮೀಸಲಾತಿ ಎಂದು ಕೊಟ್ಟಿದ್ದರು, ಆದರೆ ಇಲ್ಲಿ ಬರುವಾಗ ಅದು ಬದಲಾವಣೆಯಾಗಿದೆ. ಹಿಂದುಳಿದ (ಎ) ವರ್ಗದ ಮಹಿಳೆಯರಿಗೆ 2 ಸ್ಥಾನ, ಮತ್ತು ಸಾಮಾನ್ಯ ಮಹಿಳೆಗೆ ಎರಡು ಸ್ಥಾನ ಹಾಗಾಗಿ ನಮ್ಮ ಕ್ಷೇತ್ರದಲ್ಲಿ ಕೂಡ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತೊಂದರೆಯಾಗಿದೆ. ಎಸ್‌ಸಿ/ಎಸ್‌ಟಿ ಗೆ ಎಷ್ಟು ರಿಸರ್ವೇಷನ್ಸ್ ಇದೆ, 18 ಕ್ಕಿಂತ ಕಡಿಮೆ ಇದ್ದಹಾಗೆ ಕಾಣುತ್ತದೆ. 31 ಸ್ಥಾನಗಳ ಪೈಕಿ 4 ಸ್ಥಾನಗಳನ್ನು ಮಾತ್ರ ರಿಸರ್ವ್ ಆಗಿ ಇಟ್ಟಿದ್ದಾರೆ. ಅಲ್ಲಿ ಕೂಡ ಹಿಂದುಳಿದ ವರ್ಗದವರಿಗೆ 31ಸ್ಥಾನಗಳ ಪೈಕಿ 4 ಸ್ಥಾನಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಕೂಡ ಎಷ್ಟು ಸ್ಥಾನಗಳನ್ನು ಮೀಸಲಿಡಲು ಆಗುತ್ತದೆ? ಅದನ್ನು ಕೂಡ ನಾವು ಯೋಚನೆ ಮಾಡಬೇಕು. ರಿಸರ್ವೇಷನ್‌ನಿಂದಾಗಿ ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಕೂಡ ತೊಂದರೆಯಾಗಿದೆ. ಮಾನ್ಯ ಸಚಿವರು ಅದನ್ನು ಪುನರ್ ಪರಿಶೀಲನೆ ಮಾಡಿ ಸರಿಯಾದ ರೀತಿಯಲ್ಲಿ ಗೈಡ್‌ಲೈನ್ಸ್ ಪ್ರಕಾರ ತಾವು ಮಾಡಬೇಕೆನ್ನುವ ಮನವಿಯನ್ನು ಮಾಡುತ್ತೇನೆ.

+ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೇ, ಇಷ್ಟೊಂದು ಮಹತ್ವದ ವಿಚಾರ ಅಧಿಕಾರ ವಿಕೇಂದ್ರೀಕರಣದ ವ್ಯವಸ್ಥೆಯದು. ಯಾವುದಾದರೂ ಒಂದು ಸೂತ್ರದ ಆಧಾರದ ಮೇಲೆ ಮಾಡಿದ್ದೀವಿ ಎಂದು ಸರ್ಕಾರ ಸಮರ್ಥನೆ ಮಾಡುವ ಶಕ್ತಿಯನ್ನು ಹೊಂದಿಲ್ಲ. ಇಡೀ ರಾಜ್ಯದ ಜನ ನೋಟಿಫಿಕೇಷನ್ ಬಂದ ನಂತರ ಗೊಂದಲದಲ್ಲಿ ಮುಳುಗಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ: ಒಟ್ಟು ಜಿಲ್ಲೆ ಎಣಿಸಿದರೆ ಒಂದು ಘಟಕ. ಇಲ್ಲೇ ಘಟಕದಲ್ಲಿ ಎಷ್ಟು ಮಹಿಳೆಯರಿಗೆ, ಮತ್ತು ಎಷ್ಟು ಹರಿಜನ ಗಿರಿಜನರಿಗೆ ಇದೆಲ್ಲಾ ಇದೆ. ಇಲ್ಲಿ ಗೈಡ್‌ಲೈನ್ಸ್ ಇದೆ. ನೀವು ನಿಮ್ಮ ಜಿಲ್ಲೆಯ ಬಗ್ಗೆ ಹೇಳುವಾಗ ಜಿಲ್ಲೆಗೆ ಒಟ್ಟಾರೆ ಸ್ಥಾನಗಳು ಇಷ್ಟು, ಈ ಒಟ್ಟಾರೆ ಸ್ಥಾನಗಳಲ್ಲಿ ನಾವು ಕೊಡುವಾಗ ಒಂದೇ ತಾಲ್ಲೂಕಿಗೆ ಒಂದೇ ಗುಂಪಿನ ಸ್ಥಾನಕ್ಕೆ ಕೊಟ್ಟಂಥ ಪ್ರಕರಣ ಯಾವುದಾದರೂ ಇದ್ದರೆ ಅದನ್ನು ಹೇಳಿದರೆ ನಮಗೂ ಅನುಕೂಲವಾಗುತ್ತದೆ.

ಶ್ರೀ ಅರಗ ಜ್ಞಾನೇಂದ್ರ: ನೀವು ಜನಸಂಖ್ಯೆ ಆಧಾರದ ಮೇಲಾದರೂ ಮಾಡಬೇಕು. ಬಿ ಎಲ್ಲಿದೆ (ಎ) ಎಲ್ಲಿದೆ, ಎಲ್ಲಿ ಯಾವುದು ಜಾಸ್ತಿ ಇದೆ ಎನ್ನುವುದು ಏನೂ ಇಲ್ಲ. ಯಾವುದೇ ಸೂತ್ರವನ್ನು ತಾವು ಕೈಯಲ್ಲಿಟ್ಟುಕೊಳ್ಳದೆ ಇದನ್ನು ಮಾಡಿದ್ದೀರಿ. ನಿಮ್ಮ

ಆಡಳಿತ ಪಕ್ಷದ ಶಾಸಕರು ಬಹಳಷ್ಟು ಜನ ತೊಂದರೆ ಪಟ್ಟಿದ್ದಾರೆ. ಕೆಲವರು ಬಾಯಿ ಬಿಡುವ ಸ್ಥಿತಿಯಲ್ಲಿಲ್ಲ. ನಮ್ಮ ಸರ್ಕಾರಕ್ಕೆ ಇರಿಸುಮುರಿಸಾಗುತ್ತದೆ ಎಂದು ಹೇಳಿ ಯಾರೂ ಬಾಯಿಬಿಡುತ್ತಿಲ್ಲ. ಈಗ ತಾಲ್ಲೂಕಿಗೆ ಒಂದು ಎಸ್‌ಟಿ ಮಾಡಿದ್ದೀರಾ? ಅದನ್ನೂ ಮಾಡಲಿಲ್ಲ. ಈಗ ಕೆಲವು ತಾಲ್ಲೂಕುಗಳಿಗೆ ಎಸ್‌ಟಿ ಇಲ್ಲವೇ ಇಲ್ಲ. ಕೆಲವು ತಾಲ್ಲೂಕುಗಳಿಗೆ ಎಸ್‌ಟಿಯನ್ನು ಹಾಕಿದ್ದೀರಿ.

(ಗೊಂದಲ)

ನನ್ನ ಕ್ಷೇತ್ರಕ್ಕೆ ಎಸ್‌ಟಿ ಬರುವ ಹಾಗೆ ಇರಲಿಲ್ಲ. ಅಲ್ಲಿ ಎಸ್‌ಟಿ ಯನ್ನು ಹಾಕಿದರು. ಹೊಸನಗರದಲ್ಲಿ ಎಸ್‌ಟಿ ಪಾಪ್ಯುಲೇಷನ್ ಎಲ್ಲಿ ಜಾಸ್ತಿ ಇದೆ, ಒಂದು ಎಸ್‌ಟಿ ಯನ್ನೂ ನೀವು ಇಡಲಿಲ್ಲ.

ಅದನ್ನು ತೆಗಯಿರಿ ಸ್ವಾಮಿ.

ಶ್ರೀ ಕಾಗೋಡು ತಿಮ್ಮಪ್ಪ: ಒಟ್ಟಾರೆ ಜಿಲ್ಲೆ ಅಥವಾ ಘಟಕ. ಎಸ್‌ಸಿಗಳ ಒಟ್ಟು 7 ಸೀಟುಗಳಿವೆ. ಆ ಜಿಲ್ಲೆಯೊಳಗೆ ಯಾವ ಯಾವ ಕ್ಷೇತ್ರದಲ್ಲಿ ಆರ್ಡರ್ ಪ್ರಕಾರ ತಾವು ತೋರಿಸಿ. ಅವರು ಎಲ್ಲಿಗೆ ಬರುತ್ತಾರೆ ಎಂದು ಹೇಳಿ.

ಶ್ರೀ ಅರಗ ಜ್ಞಾನೇಂದ್ರ: ಎಲ್ಲಿ ಎಸ್‌ಟಿ ಪಾಪ್ಯುಲೇಷನ್ ಜಾಸ್ತಿ ಇದೆಯೋ ಅಲ್ಲಿ ಬರಬೇಕಾಗಿತ್ತು. ತೀರ್ಥಹಳ್ಳಿಗೆ ಹಾಕಿದ್ದಾರೆ. ಹೊಸನಗರಕ್ಕೆ ಒಂದನ್ನೂ ನೀವು ಹಾಕಿಲ್ಲ, ಏಕೆ ಹಾಕಿಲ್ಲವೆಂದು ಹೇಳಿ. ಎಸ್‌ಟಿ ಪಾಪ್ಯುಲೇಷನ್ ಅಲ್ಲಿದೆ. ಆದರೂ ಹಾಕಿಲ್ಲ.

(ಗೊಂದಲ)

ಅಧ್ಯಕ್ಷರು: ನೀವು ಬೇಗ ಮುಗಿಸಿ. ತಾವು ಅಧ್ಯಕ್ಷರ ಕಡೆಗೆ ನೋಡಿ ಮಾತನಾಡಿ.

ಶ್ರೀ ಅರಗ ಜ್ಞಾನೇಂದ್ರ: ನಮ್ಮ ಜಿಲ್ಲೆಯಲ್ಲೂ ಕೂಡ ಅನ್ಯಾಯ ಮಾಡಿ ಹಾಕಿದ್ದಾರೆ. ಇವರಿಗೆ ಎಲ್ಲಿ ವಿರೋಧಪಕ್ಷಗಳು ಗೆಲ್ಲುತ್ತವೆ ಎಂದು ಹೇಳಿ ಇವರಿಗೆ ಕನಸು ಬಿದ್ದೀತೇನು? ಅಲ್ಲಿಂದ ಜಿಲ್ಲಾಧಿಕಾರಿಗಳಿಂದ ಬಂದ ಪಟ್ಟಿಯನ್ನಾದರೂ ಪ್ರಕಟಮಾಡಿ ಹೋಗಲಿ. ಇಲ್ಲೀ ಏನು ನೀವು ಹೇಳಿದ್ದು? ಜಿಲ್ಲಾಧಿಕಾರಿಯವರಿಗೆ ಕೊಡುತ್ತೇವೆ, ಜಿಲ್ಲಾಧಿಕಾರಿಯಿಂದ ಏನೇನು ಬಂದಿದೆ, ಅದನ್ನು ಪ್ರಕಟ ಮಾಡಿ ಅದನ್ನು ಟೇಬಲ್ ಮುಂದೆ ಇಡಿ. ನೋಡೋಣ.

4.40 ಪಿ.ಎಂ.

ಇದು ನಾವು ತೊಗಲಕ್ ದರ್ಬಾರ್ ಮಾಡುತ್ತೇವೆ, ನಾವು ಹೇಗೆ ಬೇಕಾದರೂ ಮಾಡುತ್ತೇವೆ ಎಂದು ಹೇಳಿದರೆ ನಮ್ಮದೇನಿಲ್ಲ, ನೀವು ಮಾಡಿಕೊಳ್ಳಿ. ನಾವು ಜನರಿಗೆ

ಹೋಗಿ ಹೇಳುತ್ತೇವೆ. ನಿಮ್ಮನ್ನು ಹಂಟ್ ಮಾಡುವುದಕ್ಕೆ ಹೊರಟಿದ್ದಾರೆ. ನಿಮ್ಮ ಪಕ್ಷದವರೇ ಇಂತಹ ಅನ್ಯಾಯ ಮಾಡಿದ್ದಾರೆ ಎಂದು ಕೇಳುತ್ತಿದ್ದಾರೆ. ಇಂತಹ ಒಂದು ಪರಿಸ್ಥಿತಿ ಇದೆ. ಇದು ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಅವರು ಹೇಳಿದ್ದೇ ಒಂದು. ಹೇಳಿದಂತೆ ನಡೆದುಕೊಂಡಿಲ್ಲ. ಇಲ್ಲಿ ಹೇಳಿದರು ನಾವು ಶಾಸಕರನ್ನು ಕೇಳಿ ಮಾಡುತ್ತೇವೆ ಎಂದು. ಶಾಸಕರನ್ನು ಕೇಳುತ್ತಾರೆ ಎಂದು ಹೇಳಿ ಮಾಧ್ಯಮಗಳಲ್ಲಿಸಂದೇಶ ಹೋಯಿತು. ಶಾಸಕರನ್ನು ಇವರು ಕ್ಯಾರೇ ಅಂತ ಹೇಳಿ ಮಾತನಾಡಿಸಲಿಲ್ಲ. ಗೈಡ್‌ಲೈನ್ಸ್ ಏನಾದರೂ ಕೊಟ್ಟಿದ್ದರೆ ಅದರ ಪ್ರಕಾರ ಆಗುತ್ತದೆ. ಚುನಾವಣಾ ಕಮಿಷನ್‌ಗೆ ಇತ್ತು, ಅವರು ಅದರ ಪ್ರಕಾರ ಮಾಡಿಕೊಂಡು ಹೋಗುತ್ತಿದ್ದರು. ಚೇರ್ಮನ್ ಲಾಟರಿ ಎತ್ತುವುದು ಇತ್ತು. ಅದು ನಮಗೂ ತಲೆನೋವಿಲ್ಲ, ನಿಮಗೂ ತಲೆನೋವಿಲ್ಲ. ಏನು ಮಾಡುವುದಕ್ಕಾಗುತ್ತದೆ, ನಮ್ಮ ದುರಾದೃಷ್ಟ ಎಂದು ಹೇಳಿ ಎಲ್ಲರೂ ಸುಮ್ಮನಾಗುತ್ತಿದ್ದರು. ಇವತ್ತು ಹಾಗೆ ಇಲ್ಲ. ಯಾವ ತರಹ ದರ್ಬಾರು ಮಾಡುತ್ತಿದ್ದೀರಿ ನೀವು? ಅಧಿಕಾರ ವಿಕೇಂದ್ರೀಕರಣವನ್ನು ಯಶಸ್ವಿಯಾಗಿ ಹೇಗೆ ಮಾಡುತ್ತೀರಿ? ನಿಮಗೆ ಏನಾದರೂ ಕಳಕಳಿ ಇದೆಯಾ? ನೀವು ಇದನ್ನು ಪರಿಪೂರ್ಣ ಮಾಡುವುದಕ್ಕೆ ಹೊರಟಿದ್ದೀರಾ? ನೀವು ಇದು ಪೂರ್ತಿ ಕಾಂಗ್ರೆಸ್‌ಮಯ ಮಾಡಬೇಕೆಂದು ಇದ್ದೀರಿ. ಕಾಂಗ್ರೆಸ್ಸೂ ಅಲ್ಲಿ ಇಲ್ಲ. ಕಾಂಗ್ರೆಸ್ಸಿನಲ್ಲಿ ನಾವು ಹೇಳಿದವರು ಬರಬೇಕು ಎಂದು ನಿಮ್ಮ ನಿಮ್ಮ ವಿಂಗ್‌ಗಳಲ್ಲೇ ಜಗಳ.....

(ಗೊಂದಲ)

ಅಧ್ಯಕ್ಷರು: ನೀವು ಮುಕ್ತಾಯ ಮಾಡಿ.

ಶ್ರೀ ಅರಗ ಜ್ಞಾನೇಂದ್ರ : ಇದನ್ನು ವಾಪಸ್ಸು ತೆಗೆದುಕೊಳ್ಳಬೇಕು.

ಅಧ್ಯಕ್ಷರು: ಭೈರೇಗೌಡರೇ, ನೀವು ಸಿಗ್ನೇಟರಿ. ಮಾತನಾಡಬೇಕು ಅಂದಿರಲ್ಲ? ಇನ್ನಿಬ್ಬರೇ ಮಾತನಾಡಲಿಕ್ಕೆ ಇರುವುದು. ನೀವಿಲ್ಲವೆಂದರೆ ಶಿವರಾಮು ಅವರು ಮಾತನಾಡುತ್ತಾರೆ.

+ಶ್ರೀ ಬಿ.ಶಿವರಾಮು(ಗಂಡಸಿ): ಮಾನ್ಯ ಅಧ್ಯಕ್ಷರೇ, ಕೆಲವೊಂದು ನ್ಯೂನತೆಗಳು ಈ ಮೀಸಲಾತಿಯಲ್ಲಿ ಆಗಿದೆ ಎನ್ನತಕ್ಕದ್ದನ್ನು ನಾನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತಿದ್ದೇನೆ. ಈಗ ಹಿಂದೆ ಜಿಲ್ಲೆಯನ್ನು ಒಂದು ಕ್ಷೇತ್ರವಾಗಿ ಇಟ್ಟುಕೊಂಡು ಎಸ್‌ಸಿ:ಎಸ್‌ಟಿ ಮೀಸಲಾತಿಯನ್ನು ನಿಗದಿ ಮಾಡತಕ್ಕಂಥ ವ್ಯವಸ್ಥೆ ಬಂದಿತು. ಅದು ಒಂದುಭಾಗಕ್ಕೇ ಹೋಯಿತು ಎನ್ನುವ ದೃಷ್ಟಿಯಿಂದ ಕನಿಷ್ಠ ಒಂದು ಕ್ಷೇತ್ರ, ಒಂದು ತಾಲ್ಲೂಕಿಗೆ ಬರಲೇಬೇಕು ಎನ್ನತಕ್ಕದ್ದನ್ನು ಬದಲಾವಣೆ ಮಾಡಿಕೊಂಡು ಸುತ್ತೋಲೆಗಳ ಮೂಲಕ ಸರಿಪಡಿಸಿಕೊಂಡು ಬಂದರು. ನಾವೂ ಒಪ್ಪಿಕೊಂಡೆವು. ಇದೇರೀತಿ ಮಹಿಳೆಯರಿಗೆ ಮೀಸಲಾತಿ ಎನ್ನತಕ್ಕಥಾದ್ದು ಸುತ್ತೋಲೆಯಲ್ಲಿ ಇದ್ದಂಥ ಸಂದರ್ಭದಲ್ಲಿ ಎಲ್ಲ ಕ್ಷೇತ್ರಕ್ಕೂ

ಮಹಿಳೆಯರ ಮೀಸಲಾತಿ ಬರಬೇಕು ಎನ್ನತಕ್ಕದ್ದು ಮಾಡಲಾಯಿತು. ನಾನು ನನ್ನ ಜಿಲ್ಲೆಯಲ್ಲೇ ಇರುವ ಲೋಪದೋಷಗಳನ್ನು ಹೇಳಿಬಿಡುತ್ತೇನೆ. ಶ್ರವಣಬೆಳಗೊಳ ಕ್ಷೇತ್ರದಲ್ಲಿ ಐದು ಜಿಲ್ಲಾ ಪಂಚಾಯತಿಗಳು ಇವೆ. ಆದರೆ ಅಲ್ಲಿ ಒಂದೇ ಒಂದು ಮಹಿಳೆ ಕೂಡ ಆಗಿಲ್ಲ. ನನ್ನ ಕ್ಷೇತ್ರಕ್ಕೆ ಐದು ಜಿಲ್ಲಾ ಪಂಚಾಯತಿಗಳು ಇವೆ. ಐದರಲ್ಲಿ ನಾಲ್ಕು ಮಹಿಳೆಯರು ನಿಗಧಿಯಾದರು. ನ್ಯಾಯ ಎಲ್ಲರಿಗೂ ಒಂದೇನೆ. ಪ್ರಾಮಾಣಿಕವಾಗಿ ಇರತಕ್ಕಂಥ ಲೋಪದೋಷಗಳನ್ನು ಸರಿಪಡಿಸಿಕೊಳ್ಳಬೇಕು, ನ್ಯೂನತೆಗಳನ್ನು ತಿದ್ದಿಕೊಳ್ಳಬೇಕು ಎನ್ನತಕ್ಕದ್ದು. ಆದ್ದರಿಂದ ಎಲ್ಲವೂ ತಪ್ಪಾಗಿದೆಯೆಂದು ನಾನು ಹೇಳುತ್ತಿಲ್ಲ. ಒಟ್ಟಾರೆ ಏನೆಂದರೆ ಈಗ ಮೀಸಲಾತಿ ಏನಿದೆ 7 ಪರಿಶಿಷ್ಟ ಜಾತಿ, 1 ಪರಿಶಿಷ್ಟ ವರ್ಗ ಅಥವಾ ಇಷ್ಟು ಮಹಿಳೆಗೆ ಎಂದು ಅದನ್ನು ಮಾತ್ರ ಕಾಪಾಡತಕ್ಕದ್ದನ್ನು ಪ್ರಾಮಾಣಿಕವಾಗಿ ಮಾಡಿದ್ದಾರೆ. ಆದರೆ ಜಿಲ್ಲಾಧಿಕಾರಿಗಳ ಸಮ್ಮುಖದಲ್ಲಿ ನಡೆಯಿತಲ್ಲ, ಶಾಸಕರು, ಮಂತ್ರಿಗಳು ಮತ್ತು ವಿರೋಧ ಪಕ್ಷದ ಶಾಸಕರು ಕುಳಿತುಕೊಂಡು ಮಾಡಿದಂಥ ಸಂದರ್ಭದಲ್ಲಿ..... ನಾನು ನಮ್ಮದನ್ನು ಹೇಳುತ್ತಿದ್ದೇನೆ. ನಮ್ಮ ಜಿಲ್ಲೆ ಬಗ್ಗೆ ನಾನು ಹೇಳುತ್ತಿರುವುದು. ಆವಾಗ ಯಾವುದೇ ಲೋಪದೋಷಗಳನ್ನು ಮಾಡದ ರೀತಿಯಲ್ಲಿ ಪ್ರಾಮಾಣಿಕವಾಗಿ ಸಾಧ್ಯವಾದಷ್ಟು ಸುತ್ತೋಲೆಯನ್ನು ಅನುಸರಿಸಿ ಕಳಿಸಿದ್ದಂತೂ ಸರಿ. ಆದರೆ ರಾತ್ರೋರಾತ್ರಿ ಗೆಜೆಟ್‌ಗೆ ಹೋಗುವ ಹಿಂದಿನ ದಿವಸ ಬದಲಾವಣೆಯಾಗಿ ಗೆಜೆಟ್‌ನಲ್ಲಿ ಬೇರೆಯದ್ದು ಬಂದಾಗ ನಮ್ಮಲ್ಲಿ ಏನು ಭಾವನೆ ಬರುತ್ತದೆ? ಇದನ್ನು ನಾನು ಏಕೆ ಹೇಳುತ್ತಿದ್ದೇನೆ ಎಂದರೆ ನಾವು ಕ್ಷೇತ್ರದ ಜನತೆಗೆ ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ನೀವು ಶಾಸಕರಾಗಿ ಕೆಲಸ ಮಾಡುತ್ತಿದ್ದೀರೋ ಅಥವಾ ಬೇರೇನು ಮಾಡುತ್ತಿದ್ದೀರಿ ಎಂದು ಜನರು ಕೇಳತಕ್ಕಂಥ ಪ್ರಶ್ನೆ ಉದ್ಭವಿಸುತ್ತದೆ. ಆದ್ದರಿಂದ ಮೀಸಲಾತಿ ಎನ್ನುವಾಗ ಸಾಮಾಜಿಕ ನ್ಯಾಯವನ್ನು ಕೊಡುವ ದೃಷ್ಟಿಯಿಂದ ಏನು ಮೀಸಲಾತಿಯನ್ನು ನಾವು ತಂದಿದ್ದೇವೆ, ಅದನ್ನು ಪ್ರಾಮಾಣಿಕವಾಗಿ ಅನುಷ್ಠಾನಕ್ಕೆ ತರತಕ್ಕಂಥ ವ್ಯವಸ್ಥೆ ನಿರ್ಮಾಣ ಆಗಲೇಬೇಕು. ಆವಾಗ ಮಾತ್ರ ಆ ಪ್ರತಿನಿಧಿಸತಕ್ಕಂಥ ಶಾಸಕರ ಮೇಲೆ ಎಲ್ಲ ವರ್ಗದ ಜನತೆಯ ಕಳಕಳಿ ಉಳಿಯತಕ್ಕದ್ದು ಆಗುತ್ತದೆ. ನಾವು ಇಲ್ಲಿಯವರೆಗೆ ಸಾಮಾಜಿಕ ನ್ಯಾಯವನ್ನು ಕಾಪಾಡಿದ್ದರಿಂದಲೇ ಮೂರು ಸಾರಿ ಆಯ್ಕೆಯಾಗಿ ಎಲ್ಲ ವರ್ಗದ ಜನರು ಓಟು ಕೊಟ್ಟರು. ಇವತ್ತು ಬದಲಾವಣೆ ಏಕೆ? ಇವತ್ತು ನಮ್ಮ ಕ್ಷೇತ್ರದ ಜನ ಕೇಳುತ್ತಿದ್ದಾರೆ. ತಪ್ಪು ಇರುವುದನ್ನು ಸರಿಪಡಿಸಬೇಕು ಎನ್ನುವುದು ನನ್ನ ವಾದವೂ ಇದೆ. ದಯವಿಟ್ಟು ಇದನ್ನು ಸರಿಪಡಿಸಬೇಕು ಎಂದು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಮಂತ್ರಿಗಳನ್ನು ನಾನು ಒತ್ತಾಯ ಮಾಡುತ್ತೇನೆ.

+ಶ್ರೀ ಹೆಚ್.ಎಸ್.ಮಹದೇವಪ್ರಸಾದ್ (ಗುಂಡ್ಲುಪೇಟೆ): ಮಾನ್ಯ ಅಧ್ಯಕ್ಷರೇ, ನಮ್ಮದು ಹೊಸದಾಗಿ ರಚನೆಯಾಗಿರುವ ಚಾಮರಾಜನಗರ ಜಿಲ್ಲೆ. ಒಟ್ಟು ಜಿಲ್ಲೆ ಮೈಸೂರಿನಲ್ಲಿದ್ದಾಗ ಇದ್ದಂಥ ಮೀಸಲಾತಿಗೂ, ಈಗ ಚಾಮರಾಜನಗರ ಪ್ರತ್ಯೇಕ ಜಿಲ್ಲೆಯಾದಮೇಲೆ ಮಾಡಿರುವಂಥ ಮೀಸಲಾತಿಗೂ ಸಾಕಷ್ಟು ವ್ಯತ್ಯಾಸ ಕಾಣುತ್ತಿದ್ದೇವೆ.

ಒಟ್ಟು 21 ಕ್ಷೇತ್ರಗಳು ನಮ್ಮ ಚಾಮರಾಜನಗರ ಜಿಲ್ಲೆಗೆ ಬರುತ್ತವೆ. 33 ಪರ್ಸೆಂಟ್ ಮಹಿಳೆಯರಿಗೆ ಮೀಸಲಾತಿ ಎನ್ನುವುದು ಇದೆ. 21 ಕ್ಷೇತ್ರಗಳನ್ನು ನಮ್ಮ ಚಾಮರಾಜನಗರ ಜಿಲ್ಲೆಗೆ ಸೀಮಿತಗೊಳಿಸಿದ್ದಾರೆ. ಅದರಲ್ಲಿ 33 ಪರ್ಸೆಂಟ್ ಮಹಿಳೆಯರಿಗೆ ಮೀಸಲಾತಿ ಇರಬೇಕು ಎಂದು ಹೇಳಿದರೆ 7 ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಮೀಸಲಾತಿ ಕೊಡಬೇಕು. ಆದರೆ ಈ 9 ಕ್ಷೇತ್ರಗಳನ್ನು ಮೀಸಲಾತಿಯಾಗಿ ಮಹಿಳೆಯರಿಗೆ ಇಟ್ಟಿದ್ದಾರೆ. ಅದೇ ತರಹ 23 ಪರ್ಸೆಂಟ್ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಮೀಸಲಾತಿ ಇರಬೇಕು ಎಂದರೆ ಅದು 5 ಕ್ಷೇತ್ರಗಳಿಗೆ ಅನ್ವಯಿಸಬೇಕು. ಆದರೆ 7 ಕ್ಷೇತ್ರಗಳಿಗೆ ಈ ಮೀಸಲಾತಿಯನ್ನು ಹೆಚ್ಚಿಗೆ ಮಾಡಿದ್ದಾರೆ. ಅದಕ್ಕಾಗಿ ಬೇರೆ ಸಾಮಾನ್ಯ ವರ್ಗ ಮತ್ತು ಹಿಂದುಳಿದ ವರ್ಗಗಳು ಮತ್ತು ಜನರಲ್ ಆಗಿ ನಿಲ್ಲುವಂಥವರಿಗೆ ಕ್ಷೇತ್ರಗಳ ಸಂಖ್ಯೆ ನಮ್ಮ ಜಿಲ್ಲೆಗೆ ಕಡಿಮೆಯಾಗಿದೆ. ಹಿಂದೆ ಒಟ್ಟು ಜಿಲ್ಲೆ ಇದ್ದಾಗ ಕೂಡ ಮಹಿಳೆಯರಿಗೆ 7 ಕ್ಷೇತ್ರಗಳು ಇದ್ದವು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ 7 ಕ್ಷೇತ್ರಗಳು ಇದ್ದವು. ಆದರೆ ಈಗ ಎರಡೂ ವರ್ಗದಲ್ಲಿ ಎರಡೆರಡರಷ್ಟು ಹೆಚ್ಚು ಕ್ಷೇತ್ರಗಳ ಮೀಸಲಾತಿಯನ್ನು ಇಟ್ಟಿದ್ದಾರೆ. ಮೊನ್ನೆ ತಿದ್ದುಪಡಿಯಾಗುವಂಥ ಸಂದರ್ಭದಲ್ಲಿ ನಾನು ಒಂದು ಸಲಹೆಯನ್ನು ಕೊಟ್ಟಿದ್ದೆ. ಮಹಿಳೆಯರಿಗೆ ಕೂಡ ಜನಸಂಖ್ಯೆ ದೃಷ್ಟಿಯಿಂದ ಮಾಡಿದರೆ ಆ ಕ್ಷೇತ್ರದಲ್ಲಿ ಲೆಕ್ಕ ಸಿಗುತ್ತಿತ್ತು. ಮಹಿಳೆಯರ ಸಂಖ್ಯೆ ಆಧಾರದ ಮೇಲೆ ಮಹಿಳಾ ಕ್ಷೇತ್ರಗಳನ್ನು ರೊಟೇಶನ್ ಪ್ರಕಾರ ಇಟ್ಟರೆ ಇಷ್ಟು ಗೊಂದಲಕ್ಕೆ ಅವಕಾಶ ಇರುತ್ತಿರಲಿಲ್ಲವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ.ವೆಂಕಟೇಶಪ್ಪ (ಬೇತಮಂಗಲ): ಬಿ.ಸಿ.ಎಂ.ಎ. ಅಂತ ನನ್ನ ಕ್ಷೇತ್ರದಲ್ಲಿ ಮೂರು ಕೊಟ್ಟಿದ್ದೀರಿ. ಅದು ಯಾರ ಕೈವಾಡ ಅಂತ ಗೊತ್ತಿಲ್ಲ. ಅದು ಗೆಜೆಟ್‌ಗೆ ಹೋಗುವಾಗ ಸರಿಯಿತ್ತು. ಅಲ್ಲಿ ಎಷ್ಟು ಜನಸಂಖ್ಯೆ ಇದೆ ಮತ್ತು ಇತರ ನಾರ್ಮ್ಸ್ ತಮಗೆಲ್ಲರಿಗೂ ಗೊತ್ತಿದೆ, ಆದರೆ ಗೆಜೆಟ್ ನೋಟಿಫಿಕೇಶನ್‌ಗೆ ಹೋಗುವಾಗ ಎಲ್ಲ ಮೂರನ್ನು 'ಎ' ಮಾಡಿದ್ದಾರೆ ಎಂದರೆ ಇದು ದೊಡ್ಡ ವ್ಯಕ್ತಿಗಳು ಇದರಲ್ಲಿ ಸಂಬಂಧಪಟ್ಟಿರತಕ್ಕಂಥವರು. ಜಿಲ್ಲಾ ಮಂತ್ರಿಗಳಿಗೂ ಗೊತ್ತಿಲ್ಲ. ಗೆಜೆಟ್‌ಗೆ ಹೋಗುವಾಗ ಯಾರು ಬದಲಾವಣೆ ಮಾಡಿದರು? ಮಂತ್ರಿಗಳು ಮಾಡಿದ್ದಾರೆಯೇ ಅಥವಾ ಬೇರೆ ಯಾರಾದರೂ ವ್ಯಕ್ತಿಗಳು ಮಾಡಿದ್ದಾರೆಯೆ? ಅಥವಾ ಅದಾಗಿ ಅದೇ ಏನಾದರೂ ಬಂದುಬಿಟ್ಟಿತಾ? ಇದನ್ನು ಸರಪಡಿಸದೇ ಹೋದರೆ ನಾವಂತೂ ನಮ್ಮ ಕ್ಷೇತ್ರದಲ್ಲಿ ಕೆಲಸ ಮಾಡುವಂತಿಲ್ಲ, ನಮಗೆ ಅಲ್ಲಿ ಉಳಿಗಾಲವಿಲ್ಲ. ಅಲ್ಲಿ ಬೇರೆಬೇರೆ ವ್ಯಕ್ತಿಗಳು ಕೈಹಾಕಿ ಅದರಲ್ಲಿ ಬದಲಾವಣೆ ಮಾಡಿ ನಮಗೆ ಅವಮಾನ ಮಾಡಿದರೆ ಸದನದಲ್ಲಿ ನಾವು ಏನೂಂತ ಹೇಳಿಕೊಳ್ಳುವುದು? ನಾವು ಆಡಳಿತ ಪಕ್ಷದಲ್ಲಿ ಕುಳಿತಿರತಕ್ಕವರು. ಗೆಜೆಟ್ ನೋಟಿಫಿಕೇಶನ್ ಆಗುವಾಗ ಇದು ಯಾರು ಮಾಡಿದ್ದಾರೆ ಎಂದು ಗೊತ್ತಿಲ್ಲ. ನಮ್ಮ ಅಧ್ಯಕ್ಷರಿಗೆ ಗೊತ್ತು. ಇದನ್ನು ಸರಿಪಡಿಸಬೇಕು. ಇಲ್ಲದಿದ್ದರೆ ನಾವು ನಮ್ಮ ಕ್ಷೇತ್ರದಲ್ಲಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ.

+ ಶ್ರೀ ಎಂ.ಎಸ್.ಆತ್ಮಾನಂದ (ಮಂಡ್ಯ): ಮಾನ್ಯ ಅಧ್ಯಕ್ಷರೇ, ಈಗಾಗಲೇ ಶ್ರೀ ಶಿವರಾಮು, ಶ್ರೀ ವೆಂಕಟೇಶಪ್ಪ ಅವರೆಲ್ಲರೂ ಕೂಡ ಮಾತನಾಡಿದ್ದಾರೆ. ನಾನು ಕೂಡ ಅದಕ್ಕೆ ಧ್ವನಿಗೂಡಿಸುತ್ತ ಮಂಡ್ಯ ತಾಲ್ಲೂಕು ಪಂಚಾಯತಿ ಕ್ಷೇತ್ರದಲ್ಲಿ 22ನೇ ತಾರೀಖು ಒಂದು ನೋಟಿಫಿಕೇಶನ್ ಹೊರಡಿಸಿದರು. ಸುಮಾರು 8 ಕ್ಷೇತ್ರಗಳನ್ನು ಬದಲಾಯಿಸಿ ಇದನ್ನು ಹೊರಡಿಸಿದ್ದಾರೆ. ಅದಕ್ಕೆ ಏನಾದರೂ ಕೂಡ ಅವಕಾಶ ಇದೆಯೇ ಎಂದು ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಬಯಸುತ್ತೇನೆ. ನಮ್ಮ ಇತರ ಸದಸ್ಯರುಗಳು ಅವರ ಭಾವನೆಗಳನ್ನು ವ್ಯಕ್ತಮಾಡಿದ ಹಾಗೆ ಇದು ವೈಜ್ಞಾನಿಕವಾಗಿ, ಪ್ರಾಮಾಣಿಕವಾಗಿ, ಯಾರಿಗೂ ಅನ್ಯಾಯವಾಗದ ಹಾಗೆ ಮೀಸಲಾತಿ ನಿಗಧಿಯಾಗಿ ಅದು ಪಾರದರ್ಶಕವಾಗಿ ಮಾಡಬೇಕು ಎನ್ನತಕ್ಕದ್ದನ್ನು ನಾನು ಕೇಳುತ್ತೇನೆ.

ಶ್ರೀ ಎಂ.ಜಿ.ಮುಳೆ: ಸನ್ಮಾನ್ಯ ಅಧ್ಯಕ್ಷರೇ, ಜಿಲ್ಲಾಧಿಕಾರಿಗಳು ಯಾವ ಲೆಕ್ಕದಲ್ಲಿ ಮಾಡಿದ್ದಾರೆ? ನಾವು ಶಾಸಕರಾಗಿ ಯಾವುದನ್ನು ಹೇಳಿದ್ದೇವೆ, ಅಂಕಿ ಸಂಖ್ಯೆ ಪ್ರಕಾರ ಯಾವುದು ಆಗಬೇಕು, ಅದು ಆಗಲಿಲ್ಲ. ನಿಮ್ಮ ನಾರಮ್ಸ್ ಪ್ರಕಾರ, ಎಲ್ಲಿ ಎಸ್.ಸಿ. ಜನಸಂಖ್ಯೆ ಹೆಚ್ಚಿದೆ, ಅಲ್ಲಿ ಆಗಬೇಕಾಗಿತ್ತು ಅದು ಆಗಲಿಲ್ಲ. ಅದು ಬಿಟ್ಟು ಬೇರೆ ಕಡೆ ಆಗಿದೆ. ಇದು ನನಗೆ ಗೊತ್ತಾಗುತ್ತಾ ಇಲ್ಲ. ನನಗೆ ಸಾಮಾಜಿಕ ನ್ಯಾಯ ಬೇಕು. ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರ ಬಗ್ಗೆ ನಮಗೆ ಬಹಳ ಗೌರವ ಇದೆ. ಅವರು ಆ ಚೇರ್‌ನಲ್ಲಿದ್ದಾಗ ಸರಿಯಾಗಿ ಆಗುತ್ತದೆಂಬ ವಿಶ್ವಾಸ ಇದೆ. ಆದರೆ, ಇದು ಎಲ್ಲಿ ಆಗುತ್ತದೆ? ಯಾರು ಮಾಡುತ್ತಾ ಇದ್ದಾರೆ? ನಾವು ಆಡಳಿತ ಪಕ್ಷದ ಶಾಸಕರಾಗಿದ್ದೇವೆ. Who has resisted in my constituency and why? What prompted to issue such a notification without any base?

ಯಾವುದೂ ನಾರಮ್ಸ್ ಇಲ್ಲ, ಯಾವುದೂ ಗೈಡ್‌ಲೈನ್ಸ್ ಇಲ್ಲ. Only I am talking regarding SC. ಈ ಸದನದಲ್ಲಿ ಮತ್ತು ಹೊರಗಡೆ ಎಲ್ಲಾ ಕಡೆ ಹೇಳುತ್ತಾ ಇದ್ದರು. ಎಸ್.ಸಿ. ಮತ್ತು ಎಸ್.ಟಿ. ಟಚ್ ಮಾಡುವುದಕ್ಕೆ ಬರುವುದಿಲ್ಲ ಎಂದು. ಹಾಗಾದರೆ, ಏಕೆ ಟಚ್ ಮಾಡಿದಿರಿ? ಯಾವಾಗ ಎಸ್.ಟಿ. ಜನಸಂಖ್ಯೆ ಹೆಚ್ಚಿದೆ, ಶಾಸಕರ ಪ್ರಕಾರ, ಜಿಲ್ಲಾಧಿಕಾರಿಗಳ ಪ್ರಕಾರ, ಅಂಕಿಅಂಶಗಳ ಪ್ರಕಾರ ಹೆಚ್ಚಿದೆ, ಮತ್ತೆ ಅದನ್ನು ಬದಲಾವಣೆ ಮಾಡಿ, ಎಲ್ಲಿ ಹೆಚ್ಚಿದೆಯೋ ಅಲ್ಲಿ ಬಿ.ಸಿ.ಎಂ.(ಎ) ಎಂದು ಮಾಡಿ, ಎಲ್ಲಿ ಕಡಿಮೆ ಇದೆ ಅಲ್ಲಿ ಎಸ್.ಟಿ. ಎಂದು ಮಾಡಿದ್ದೀರಿ, ಇದು ಏಕೆ? You are making a joke with the whole process. ಇದು ಯಾರು ಸ್ವಾಮಿ ಮಾಡಿದ್ದು, ಇದನ್ನು ಸರಿ ಮಾಡಬೇಕು. ಮಾನ್ಯ ಸಚಿವರ ಮೇಲೆ ನಮಗೆ ಪೂರ್ತಿ ವಿಶ್ವಾಸ ಇದೆ. ಆದರೆ, ಕೆಳಗಿನ ಅಧಿಕಾರಿಗಳು ಏನು ಮಾಡಿದ್ದಾರೆ, ಅದನ್ನು ಎನ್‌ಕ್ವೈರಿ ಮಾಡಿ, ಸರಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೇ, ಇದು ಪಕ್ಷಾತೀತವಾಗಿ

ನಾವೆಲ್ಲರೂ ನಮ್ಮ ನಮ್ಮ ಕ್ಷೇತ್ರಗಳಲ್ಲಿ, ನಮ್ಮ ನಮ್ಮ ಜಿಲ್ಲೆಗಳಲ್ಲಿ ಆಗಿರತಕ್ಕ ಅನ್ಯಾಯವನ್ನು ಸರಿಪಡಿಸಬೇಕೆಂಬ ಮಾತನ್ನು ಹೇಳುತ್ತಿದ್ದೇವೆ. ಈ ಕಾರಣಕ್ಕಾಗಿ ನಾನು ಸರ್ಕಾರದಲ್ಲಿ ವಿನಂತಿಸಿಕೊಳ್ಳುವುದೆನೆಂದರೆ, ಇದರ ಬಗ್ಗೆ ವಿಶೇಷ ಸಮಯ ನಿಗದಿ ಮಾಡಿಕೊಂಡು, ನಾಳೆಯೇ ಇದರ ಬಗ್ಗೆ ಸಮಗ್ರ ಚರ್ಚೆ ಮಾಡೋಣ. ಏನು ಗೈಡ್‌ಲೈನ್ ಇರಬೇಕು, ಏನಾಗಬೇಕೆಂಬುದನ್ನು ನಾವು ನಿಶ್ಚಯ ಮಾಡೋಣ. ಚುನಾವಣಾ ಆಯೋಗಕ್ಕೆ ಅಧಿಕಾರ ಕೊಡಬೇಕೆಂದಾದರೆ, ಮತ್ತೆ ಅದು ಬೇರೆ ರೀತಿಯಲ್ಲಿ ಆಗುತ್ತೆ. ಜಿಲ್ಲಾಧಿಕಾರಿಗಳಿಗೆ ಅಧಿಕಾರ ಕೊಟ್ಟು, ಅವರು ನೋಟಿಫೈ ಮಾಡುವ ರೀತಿಯಲ್ಲಿ, ಸರಿಪಡಿಸುವಂಥ ಹೆಜ್ಜೆಯನ್ನು ಇಡದೇಹೋದರೆ, ಇಡೀ ಸದನದ ಭಾವನೆಗಳಿಗೂ ಸರ್ಕಾರ ಗೌರವಿಸಿದಂತೆ ಆಗುವುದಿಲ್ಲ. ಅಷ್ಟೇ ಅಲ್ಲ ಇಡೀ ವಿಕೇಂದ್ರೀಕರಣ ವ್ಯವಸ್ಥೆಯನ್ನೇ, ಅತ್ಯಂತ ನಗೆಪಾಟಲಿನ ವ್ಯವಸ್ಥೆಯನ್ನಾಗಿ ಮಾಡುವುದಕ್ಕೆ ಸರ್ಕಾರವೇ ಕಾರಣೀಕರ್ತವಾಗುತ್ತೆ. ಯಾವ ಮೆಷರಿಂಗ್ ರಾಡ್ ಇಲ್ಲ, ಯಾವ ವೈಜ್ಞಾನಿಕವಾದ ನೀತಿ ಇಲ್ಲ, ಸೂತ್ರ ಇಲ್ಲ, ತಾಳ ಇಲ್ಲ ತಂತಿ ಇಲ್ಲ. ಇವರು ವಾದ್ಯ ಬಾರಿಸಿಕೊಳ್ಳುತ್ತಿದ್ದಾರೆ. ಯಾವರೀತಿ ಬಾರಿಸುತ್ತಾರೋ ಗೊತ್ತಿಲ್ಲ. ಅದನ್ನು ಕೇಳುವುದಕ್ಕಾದರೂ ಆಗಬೇಕಲ್ಲ. ಹಾಗಾಗಿ ನಾವು ಮಾನ್ಯ ಸಚಿವರಲ್ಲಿ ಮತ್ತು ಸರ್ಕಾರದಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಈಗ ಆಗಿರುವಂಥ ಅನ್ಯಾಯವನ್ನು ಸರಿಡಿಪಡಿಸುವುದಕ್ಕೆ ವಿಶೇಷವಾದ ಚರ್ಚೆ ಮಾಡಿ, ಗೈಡ್‌ಲೈನ್ ನಿರ್ಧಾರ ಮಾಡುವುದಕ್ಕೆ ತಾವೇ ನೇತೃತ್ವವನ್ನು ವಹಿಸಿಕೊಳ್ಳಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ.

ಡಾ: ವೈ.ನಾಗಪ್ಪ: ಸನ್ಮಾನ್ಯ ಸಭಾಧ್ಯಕ್ಷರೇ, ಇದು ಬಹಳ ಗಂಭೀರವಾದಂಥ ವಿಷಯ. You know, this is a temple of democracy. I expect every Hon'ble Member should have democratic views and expression. ಆದ್ದರಿಂದ ದಯಮಾಡಿ, ತಾವು ಆಯಾ ಕ್ಷೇತ್ರದ ಶಾಸಕರಿಗೆ ಜವಾಬ್ದಾರಿ ಕೊಡಿ, irrespective of Opposition or ruling, ಅವರಿಗೆ ಜವಾಬ್ದಾರಿ ಕೊಟ್ಟು, ನೇರವಾಗಿ ಅವರು ಗ್ರಾಮೀಣಾಭಿವೃದ್ಧಿ ಮಂತ್ರಿಗಳಿಗೆ ಕೊಡಬೇಕು. ನೀವು ಏಕೆ ಜಿಲ್ಲಾಮಂತ್ರಿಗಳಿಗೆ ಕೊಟ್ಟಿದ್ದೀರಿ. ಅವರು ಬಂದು, ಅಲ್ಲಿ ಗೆಲ್ಲಿಸುತ್ತಾರೆಯೇ? ಇದು ಸಾಧ್ಯವಿದೆಯೇ? ನಮ್ಮ ಕ್ಷೇತ್ರದಲ್ಲಿ ಜಿಲ್ಲಾಮಂತ್ರಿಗಳು ಬಂದು ಗೆಲ್ಲಿಸುವುದಕ್ಕೆ ಆಗುತ್ತದೆಯೇ? ನಾನು ಅವರ ಕ್ಷೇತ್ರಕ್ಕೆ ಗೆಲ್ಲಿಸುವುದಕ್ಕೆ ಸಾಧ್ಯವಿದೆಯೇ? ಇದರ ಬಗ್ಗೆ ನೀವೇಕೆ ವೈಜ್ಞಾನಿಕವಾಗಿ ಚಿಂತನೆ ಮಾಡುವುದಿಲ್ಲ? ದಯಮಾಡಿ, ನಾನು ಕಳಕಳಿಯಿಂದ ಈ ಸದನದಲ್ಲಿ ತಮ್ಮಲ್ಲಿ ಬೇಡಿಕೊಳ್ಳುತ್ತೇನೆ. ಇದನ್ನು ಆಯಾ ಕ್ಷೇತ್ರದ ಶಾಸಕರಿಗೆ, with all reservations for ladies and SC/STs. ಹಾಗಿದ್ದಲ್ಲಿ ಒಪ್ಪಿಕೊಳ್ಳಬಹುದು. The Hon'ble Member has got every right to do modification. ಇಷ್ಟು ಹೇಳಿ, ಈ ಮನೆಯ ಮೂಲಕ ನಾನು ಅವರನ್ನು ಒತ್ತಾಯ ಮಾಡುತ್ತೇನೆ.

ಶ್ರೀ ವಿಜಯಕುಮಾರಶೆಟ್ಟಿ: ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ ಕೆಲವು, ಕೇತ್ರ ವಿಂಗಡಣೆ ಮಾಡಿದ್ದಾರೆ. ಹೊಸ ಗ್ರಾಮ ಪಂಚಾಯ್ತಿಗಳನ್ನು ಮೊದಲು ಇಲ್ಲದಂಥ ತಾಲ್ಲೂಕು ಪಂಚಾಯ್ತಿ ಕ್ಷೇತ್ರದಲ್ಲಿ ಸೇರಿಸಿದ್ದಾರೆ. ಇದು ನನ್ನ ಕ್ಷೇತ್ರಕ್ಕೆ ಬರುವಂತಾದ್ದು ಅಲ್ಲ, ಹೊರಗಿನದು. ಅದರಲ್ಲಿ ಜನಸಂಖ್ಯೆ ಬೇಕಾದಷ್ಟು ಇದ್ದಾಗಲೂ ಈ ತರಹ ಮಾಡಿದ್ದಾರೆ. ಎರಡನೆಯದಾಗಿ ನನ್ನಲ್ಲಿ 6 ತಾಲ್ಲೂಕು ಪಂಚಾಯ್ತಿಗಳು ಇವೆ, 4 ಮಹಿಳೆಯರು. ಇದನ್ನು ಜನಸಂಖ್ಯೆ ಆಧಾರದ ಮೇಲೆ ಮಾಡಿದ್ದಾರೋ ಅಥವಾ ಯಾವ ಆಧಾರದ ಮೇಲೆ ಮಾಡಿದ್ದಾರೋ ನನಗೆ ಗೊತ್ತಾಗುತ್ತಿಲ್ಲ. 6 ತಾಲ್ಲೂಕು ಪಂಚಾಯ್ತಿ ಕ್ಷೇತ್ರಗಳಲ್ಲಿ ನಾಲ್ಕನ್ನು ಮಹಿಳೆಯರಿಗೆ ಮೀಸಲಿಟ್ಟಿದ್ದಾರೆ. ಆದುದರಿಂದ, ದಯವಿಟು ಇದನ್ನು ಸರಿಪಡಿಸಬೇಕು. ನನ್ನ ಕ್ಷೇತ್ರದ ಒಳಗಡೆಯೇ ಆದರೆ ಬಹುಶಃ ಬಹಳ ಉತ್ತಮ. ಅದಕ್ಕೆ ಬೇಕಾದಂಥ ವ್ಯವಸ್ಥೆಗಳು ಅಲ್ಲಿದೆ, ಜನಸಂಖ್ಯೆ ಸಹ ಬೇಕಾದಷ್ಟು ಇದೆ. ದಯವಿಟ್ಟು ಇದನ್ನು ಸರಿಪಡಿಸಬೇಕೆಂದು ವಿನಂತಿ.

ಶ್ರೀ ಎ.ಆರ್.ಕೃಷ್ಣಮೂರ್ತಿ: ಮಾನ್ಯ ಅಧ್ಯಕ್ಷರೇ, ಕಡೂರು ವಿಧಾನ ಸಭಾ ಕ್ಷೇತ್ರದಲ್ಲಿ 4 ಜನ ಮಹಿಳೆಯರನ್ನು ಮಾಡಿದ್ದಾರೆ. ಸರ್ಕಾರ ಒಂದು ನಿರ್ದೇಶನ ನೀಡಿದೆ. ಅದೇನೆಂದರೆ, ಹೋದ ಸಾರಿ ಮಹಿಳೆಯರಿಗೆ ಕೊಟ್ಟ ಜಾಗವನ್ನು ಬದಲಾಯಿಸಬೇಕು. ಹರಿಜನರಿಗೆ ಮೀಸಲಿಟ್ಟ ಜಾಗವನ್ನು ಬಿಟ್ಟು, ಹರಿಜನ ಸಂಖ್ಯೆ ಎಲ್ಲಿ ಜಾಸ್ತಿ ಬರುತ್ತೆ ಅಲ್ಲಿ ಕೊಡಬೇಕೆಂದು ಹೇಳಿದೆ. ಸರ್ಕಾರದ ಆದೇಶವನ್ನೇ ಉಲ್ಲಂಘನೆ ಮಾಡಿ ಮಾಡಿದರೆ, ಸರ್ಕಾರದ ಆದೇಶಕ್ಕೆ ಏನು ಬೆಲೆ ಬಂತು? ಸರ್ಕಾರ ಏಕೆ ಆದೇಶ ಹೊರಡಿಸಬೇಕು? ಇಲ್ಲಿ ಚುನಾವಣೆಯಲ್ಲಿ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲಾ ಪ್ರತಿನಿಧಿಗಳಿಗೂ ಒಂದು ಅವಕಾಶವನ್ನು ಸರ್ಕಾರ ಕಲ್ಪಿಸಬೇಕು. ನಾವೇನೇ ಮೀಸಲಾತಿ ಮಾಡಿದರೂ, ಜನ ಆಯ್ಕೆ ಮಾಡುವವರು, ನಾವಲ್ಲ. ಜನತೆಯ ತೀರ್ಪಿಗೆ ನಾವು ಬದ್ಧರಾದ ಸಂದರ್ಭದಲ್ಲಿ ನಿಷ್ಪಕ್ಷವಾಗಿ ನಾವೇನಾದರೂ ಮೀಸಲಾತಿಯನ್ನು ಮಾಡಿದರೆ, ಸರ್ಕಾರಕ್ಕೆ ಅದು ಗೌರವ ತರುವಂಥ ವಿಚಾರ. ಇವತ್ತು ಬರೀ ವಿರೋಧ ಪಕ್ಷದಲ್ಲೇ ಅಲ್ಲ, ಕಾಂಗ್ರೆಸ್ ಪಕ್ಷದವರೂ ಕೂಡ ಇದೇ ವಿಚಾರವನ್ನು ಪ್ರಸ್ತಾಪ ಮಾಡುತ್ತಾರೆಂದು ಹೇಳಿದರೆ, ಇದನ್ನು ಬಹಳ ಗಂಭೀರವಾಗಿ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಪರಿಶೀಲಿಸಬೇಕು. ಇನ್ನೊಂದು ಸಾರಿ ಪರಿಶೀಲನೆ ಮಾಡಿ, ಶಾಸಕರ ಅಭಿಪ್ರಾಯವನ್ನು ಪಡೆದು, ಮೀಸಲಾತಿಯನ್ನು ನಿಗದಿ ಮಾಡಬೇಕೆಂಬುದನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತೇನೆ.

ಶ್ರೀ ಶಿವಾನಂದ ಪಾಟೀಲ್: ಸನ್ಮಾನ್ಯ ಅಧ್ಯಕ್ಷರೇ, ತಾವು ಕೊಟ್ಟಂಥ ಅವಕಾಶಕ್ಕೆ ಧನ್ಯವಾದಗಳು. ನಾನು ಹೆಚ್ಚಿಗೆ ಹೇಳುವುದು ಬೇಕಾಗಿಲ್ಲ. ಏಕೆಂದರೆ, ಒಂದು ಕಡೆ ಗಂಡಸಿ ಶಿವರಾಮುರವರು, ಕೋಳಿವಾಡ್‌ರವರು ಹೇಳಿದರು. ಇನ್ನೊಂದು ಕಡೆ ನಾಗರಾಜುರವರು ಹೇಳಿದರು. ಜಿಲ್ಲಾ ಮಂತ್ರಿಗಳ ಇನ್‌ಸ್ಟ್ರಕ್ಷನ್ಸ್ ಮೇಲೆ ನೀವು ರಿಸರ್ವೇಷನ್ ಪಾಲಿಸಿಯನ್ನು ಅಡಾಪ್ಟ್ ಮಾಡಿದ್ದೀರಿ ಎಂದು ಹೇಳಿದರು. ಅದರಲ್ಲಿ

ಇನ್ನೊಬ್ಬರು ಬಹಳ ಗಂಭೀರವಾಗಿ ಹೇಳಿದರು. ನೀವು ಇದನ್ನು ಜೋಕ್ ಎಂದು ಮಾಡಿದ್ದೀರೆಂದು ಮಾನ್ಯ ಘೋರ್ಪಡೆಯವರ ಮೇಲೆ ಆಪಾದನೆ ಮಾಡಿದರು. ಈ ರೊಟೇಷನ್ ಸಿಸ್ಟಂನ್ನು ನೀವು ಜೋಕ್ ಎಂದು ತಿಳಿದುಕೊಂಡು ಅಡಾಪ್ಟ್ ಮಾಡಿದ್ದೀರೆಂದು ನಿಮ್ಮ ಪಕ್ಷದ ಶಾಸಕರುಹೇಳಿದರು. ಈ ಮಾತನ್ನು ನಾವು ಹೇಳುತ್ತಾ ಇಲ್ಲ.

ಅಧ್ಯಕ್ಷರು: ತಮ್ಮ ಅಭಿಪ್ರಾಯ ಹೇಳಿ, ಅವರು ಹೇಳಿದ್ದು ಬೇಕಾಗಿಲ್ಲ.

ಶ್ರೀ ಶಿವಾನಂದ ಪಾಟೀಲ್: ನಮ್ಮ ಅಭಿಪ್ರಾಯವೂ ಇಷ್ಟೇ ಇದೆ. ಅದಕ್ಕೆ ನಾವೂ ಧ್ವನಿಗೂಡಿಸಬೇಕಾಗುತ್ತದೆ. ಅವರು ಹೇಳಿದ್ದೂ, ನಾವು ಹೇಳುವುದೂ ಒಂದೇ. ಏಕೆಂದರೆ, ಅವರೇ ಹೇಳುತ್ತಾರೆ, ಅದು ರೆಕಾರ್ಡ್‌ನಲ್ಲಿದೆ. ಜಿಲ್ಲಾಮಂತ್ರಿಗಳ ಇನ್‌ಸ್ಟ್ರಕ್ಷನ್ಸ್ ಮೇಲೆ ಆಗಿದೆ ಎಂದು ಹೇಳಿದ್ದಾರೆ. ಇದಕ್ಕಿಂತ ಹೆಚ್ಚಿಗೆ ಇನ್ನೇನು ಬೇಕಾಗಿದೆಯೋ ನನಗೆ ಗೊತ್ತಿಲ್ಲ.

ಶ್ರೀ ಕೆ.ಬಿ.ಕೋಳಿವಾಡ: ಈ ಮಾತನ್ನು ಯಾರು ಹೇಳಿದ್ದಾರೋ ಅವರ ಹೆಸರನ್ನು ತೆಗೆದುಕೊಳ್ಳಿ. ನಾನು ಆ ಮಾತನ್ನು ಹೇಳಿಲ್ಲ. ಹಾಗಾಗಿ ನನ್ನ ಹೆಸರನ್ನು ಏಕೆ ತೆಗೆದುಕೊಳ್ಳಬೇಕು?

ಶ್ರೀ ಶಿವಾನಂದ ಪಾಟೀಲ್: ಗಂಡಸಿ ಶಿವರಾಮುರವರು ಹೇಳಿದ್ದಾರೆ.

ಅಧ್ಯಕ್ಷರು: ಅದು ಬೇಡಿ. ನಿಮ್ಮ ಅಭಿಪ್ರಾಯ ಹೇಳಿ ಬೇಗ ಮುಗಿಸಿ.

ಶ್ರೀ ಶಿವಾನಂದ ಪಾಟೀಲ್: ನಮ್ಮ ಅಭಿಪ್ರಾಯವೇನೆಂದರೆ, ಮೊದಲು ಏನು ಸೂಚನೆ ಬಂದಿತ್ತು ಎಂದರೆ, ನಮಗೆ ಗೊತ್ತಿದ್ದಮಟ್ಟಿಗೆ, ಜಿಲ್ಲೆಯ ಶಾಸಕರನ್ನು ಕೇಳಿಕೊಂಡು, ಜಿಲ್ಲಾಧಿಕಾರಿಗಳನ್ನು ಕನ್‌ಸಲ್ಟ್ ಮಾಡಿ, ಮಾಡಿದ್ದಾರೆಂಬ ಅಭಿಪ್ರಾಯ ಇತ್ತು. ನಂತರ ಡಿ.ಸಿ. ಮಾಡಿಕೊಟ್ಟಿರತಕ್ಕ ಲಿಸ್ಟ್‌ಗಳು, ದುರಾದೃಷ್ಟವಶಾತ್ ನಮ್ಮ ಕೈಯಲ್ಲಿ ಇವೆ. ಜಿಲ್ಲೆಯಲ್ಲಿ ಅತ್ಯಂತ ಹೆಚ್ಚು ಎಸ್.ಸಿ. ಜನಸಂಖ್ಯೆ ಇರತಕ್ಕ ಕ್ಷೇತ್ರವನ್ನು ಡಿ.ಸಿ.ಯವರು ಗುರುತು ಮಾಡಿ ಕಳುಹಿಸಿದ್ದು, ಇಲ್ಲಿಗೆ ಬಂದು ಅದು ಜನರಲ್ ಆಗುತ್ತದೆ. ಉದಾಹರಣೆಗೆ ಬಿಜಾಪುರ ಜಿಲ್ಲೆಯದೇ ಹೇಳುತ್ತೇನೆ. ತಿಕೋಟಾ ಕ್ಷೇತ್ರ ಜಿಲ್ಲೆಯಲ್ಲಿ ಸೆಕೆಂಡ್ ಹೈಯೆಸ್ಟ್ SC ಇರತಕ್ಕ ಕ್ಷೇತ್ರ ಎಂದು ನೋಟಿಫೈ ಮಾಡಿದ್ದು, ಇಲ್ಲಿ ಬಂದು ಅದು ಜನರಲ್ ಆಗುತ್ತದೆ. ದಯಮಾಡಿ, ನಿಮ್ಮ ಕೈಯಿಂದ ಇಂತಹ ತಪ್ಪು ಆಗಬಾರದು ಎಂಬ ಆಸೆ ನಮಗಿದೆ. ಅದಕ್ಕೆ ಕಾಗೋಡು ತಿಮ್ಮಪ್ಪನವರು ಎಷ್ಟು ಬೆಂಬಲ ಕೊಡುತ್ತಾರೋ ನಮಗೆ ಗೊತ್ತಿಲ್ಲ. ಇದರಲ್ಲಿ ವಿಶ್ವಾಸ ಇಟ್ಟಿರತಕ್ಕ ನೀವೇ, 73, 74ನೇ ತಿದ್ದುಪಡಿ ತಂದು, ಚುನಾವಣಾ ಆಯುಕ್ತರು ಇರಬೇಕೆಂಬ ಆಸೆ ವ್ಯಕ್ತಪಡಿಸಿರತಕ್ಕಂಥವರು ತಾವು. ಇವತ್ತು ನಿಮಗೆ ಏನಾಯಿತೋ ಗೊತ್ತಿಲ್ಲ.

ಚುನಾವಣಾ ಆಯುಕ್ತರ ಮೇಲೆ ನೀವು ಅವಿಶ್ವಾಸ ವ್ಯಕ್ತಪಡಿಸಿ, ಅದನ್ನು ಜಿಲ್ಲಾಧಿಕಾರಿಗಳಿಗೆ ಕೊಟ್ಟಿರಿ. ನಂತರ ಜಿಲ್ಲಾಧಿಕಾರಿಗಳ ಕಚೇರಿಯಿಂದ ತಮ್ಮ ಕಚೇರಿಗೆ ತೆಗೆದುಕೊಂಡು ಬಂದಿರೇನೋ ಎಂಬ ಭಾವನೆ ನಮ್ಮಲ್ಲಿ ಬರುತ್ತಾ ಇದೆ. ದಯಮಾಡಿ ಇದಕ್ಕೆ ಏನಾದರೂ ಪರಿಹಾರ ಕಂಡು ಹಿಡಿಯಬೇಕೆಂಬ ಆಶಯ ವ್ಯಕ್ತಮಾಡುತ್ತೇನೆ.

+ಶ್ರೀ ಎನ್.ಚೆಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರೇ, ಈಗಾಗಲೇ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯ್ತಿ ಅಭ್ಯರ್ಥಿಗಳ ಮೀಸಲಾತಿ ಆಯ್ಕೆ ಪಟ್ಟಿಯಲ್ಲಿ 2-3 ಬಾರಿ ಬದಲಾವಣೆಯಾಗಿರುವುದು ತಮ್ಮ ಗಮನಕ್ಕೂ ಬಂದಿದೆಯೆಂದು ನಾನಂದುಕೊಂಡಿದ್ದೇನೆ. ಈಗಾಗಲೇ ಸದನದಲ್ಲಿ ಮೊದಲು ಚರ್ಚೆ ಮಾಡುವುದಕ್ಕೆ ಹೋದಾಗ ಅವಕಾಶವನ್ನು ಕೊಡದೇ ಏಕಾಏಕಿ, ಚುನಾವಣಾ ಆಯುಕ್ತರಿಗೆ ಇದ್ದುದನ್ನು ವಿತ್ ಡ್ರಾ ಮಾಡಿ, ಡಿ.ಸಿ.ಯವರಿಗೆ ಕೊಟ್ಟು ರಿಸರ್ವೇಷನ್‌ನ್ನು ಮಾಡಲಾಗಿದೆ. ರಿಸರ್ವೇಷನ್ ಮೊದಲ ಹಂತದಲ್ಲಿ ತಪ್ಪೋ ಸರಿಯೋ, ಸರ್ಕಾರದ ಪರವಾಗಿಯೋ, ಜಿಲ್ಲಾಮಂತ್ರಿಗಳೋ ಅಥವಾ ಯಾವುದರಲ್ಲಿ ರಾಜಕೀಯ ಹಸ್ತಕ್ಷೇಪ ಮಾಡಿದರೋ ಅದನ್ನು ಮಾಡಿದಮೇಲೆ, ಮತ್ತೆ ನಿನ್ನೆ ನಾಗಮಂಗಲ ಕ್ಷೇತ್ರದ ತಾಲ್ಲೂಕ್ ಪಂಚಾಯ್ತಿಯಲ್ಲಿ ಡಿ.ಸಿ.ಯವರು ಒಂದು ರಿಸರ್ವೇಷನ್ ಮಾಡಿದ ಮೇಲೆ ಮತ್ತೆ ನಿನ್ನೆ ಅದನ್ನು ಬದಲಾವಣೆ ಮಾಡಿರುತ್ತಾರೆ. 5 ಹೋಬಳಿ ಇದೆ, ಒಂದು ಹೋಬಳಿಯಲ್ಲಿ ಜಿಲ್ಲಾ ಪಂಚಾಯ್ತಿ ಇದೆ. 4 ಕ್ಷೇತ್ರದಲ್ಲಿ ತಾಲ್ಲೂಕು ಪಂಚಾಯ್ತಿಯೂ ಇದೆ. ಒಂದು ಎಸ್.ಸಿ ಮತ್ತೊಂದು ಎಸ್.ಟಿ. 4 ತಾಲ್ಲೂಕು ಪಂಚಾಯ್ತಿ ಕ್ಷೇತ್ರವನ್ನೂ ರಿಸರ್ವ್ ಮಾಡಿದ್ದಾರೆ. ಒಂದು ಕ್ಷೇತ್ರ ಜಿಲ್ಲಾ ಪಂಚಾಯ್ತಿಯನ್ನೂ ರಿಸರ್ವ್ ಮಾಡಿದ್ದಾರೆ. ಇದರ ಉದ್ದೇಶ ಏನು? ಎಲ್ಲರಿಗೂ ಸಮತೋಲನವಾಗಿ ಅಥವಾ ಒಂದುರೀತಿ ರಾಜಕೀಯ ಅಧಿಕಾರ ವಿಕೇಂದ್ರೀಕರಣ ಮಾಡುತ್ತೇವೆಂದು ಹೇಳಿ, ನಿಮ್ಮ ಕಂಟ್ರೋಲ್ ಇರತಕ್ಕ ಡಿ.ಸಿಯವರನ್ನೇ ಸರ್ಕಾರದವರು ಮಾಡಿ, ಮತ್ತೆ ಬದಲಾವಣೆ ಮಾಡುವುದಾದರೆ ಇದರ ಉದ್ದೇಶ ಏನು? ಈ ರೀತಿ ಅಸಮಾಧಾನವಾಗತಕ್ಕ ಕೆಲಸ ಏಕೆ? ಮೊನ್ನೆ ಯಾರೋ ಒಂದು ಆಸೆ ಇಟ್ಟುಕೊಂಡು ಇದ್ದರು. 5 ಕ್ಷೇತ್ರ ಇದೆ, ಈ ಐದು ಕ್ಷೇತ್ರಕ್ಕೂ ಒಂದು ಜನರಲ್ ಬಂದರೆ, ಇನ್ನೊಂದು ''ಎ'' ಮಾಡಬೇಕು, ಇನ್ನೊಂದು ಎಸ್.ಸಿ. ಮಾಡಬೇಕು. ಇವೆರಡೂ ಇಲ್ಲದೇ ಇದ್ದರೆ, ಐದು ಕ್ಷೇತ್ರಕ್ಕೂ ಕೊಡಬೇಕು. ಈ ರೀತಿ ಮಾಡಿದರೆ, ನಮ್ಮನ್ನು ಕೇಳದೇ ಇದ್ದರೂ ಪರವಾಯಿಲ್ಲ, ನಾವು ಒಪ್ಪಿಕೊಳ್ಳುತ್ತೇವೆ. ಆದರೆ, ನೀವು ಮಾಡಬೇಕಾದರೆ ಏನಾದರೊಂದು ನಾರಮ್ಸ್ ಇರಬೇಕು. ಅದರಡಿಯಲ್ಲಿ ಒಂದು ಗೈಡ್‌ಲೈನ್ಸ್ ಇಷ್ಯೂ ಮಾಡಿದ್ದೇವೆ, ಅದರ ಪ್ರಕಾರ ಮಾಡುತ್ತೇವೆ ಎಂದು ಮಾನ್ಯ ಘೋರ್ಪಡೆ ಸಾಹೇಬರು ಹೇಳಿದರು. ಮೊನ್ನೆ ಒಂದನ್ನು ಮಾಡಿದಮೇಲೆ, ಮತ್ತೆ ಬದಲಾವಣೆ ಮಾಡಿದರೆ, ಇದರಲ್ಲಿ ಏನೋ ಉದ್ದೇಶ ಇದೆಯೆಂಬುದು ಎದ್ದು ಕಾಣುತ್ತದೆ. ನೀವು ಇಂತಹ ಕೆಲಸವನ್ನು ಈ ರೀತಿ ಮಾಡಿಸುತ್ತೀರಿ ಎಂಬುದನ್ನು ನಾವ್ಯಾರೂ ಎಕ್ಸ್‌ಪೆಕ್ಟ್ ಮಾಡಿರಲಿಲ್ಲ. ಅದರಲ್ಲೂ ನಮ್ಮ

ಜಿಲ್ಲೆಯಲ್ಲಿ, ಮುಖ್ಯಮಂತ್ರಿಯವರ ಜಿಲ್ಲೆಯಲ್ಲಿ ಈ ರೀತಿ ರಿಸರ್ವೇಷನ್‌ನ್ನು ಮೂರು ಮೂರು ಬಾರಿ ಬದಲಾವಣೆ ಮಾಡತಕ್ಕಂತಾದ್ದು. ಬೆಳಿಗ್ಗೆ ಒಂದು ಮಾಡತಕ್ಕಂಥಾದ್ದು, ರಾತ್ರಿ ಒಂದು ಮಾಡತಕ್ಕಂಥಾದ್ದು. ಈ ವ್ಯವಸ್ಥೆಗೆ ಹೋಗತಕ್ಕಂಥಾದ್ದು ನಿಮಗೆ ಗೌರವ ಅಲ್ಲವೆಂಬುದನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಎಸ್.ಆರ್.ಕಾಶಪ್ಪನವರ್: ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ಮಾನ್ಯ ವಿರೋಧಪಕ್ಷದ ಸದಸ್ಯರು ಏನು ಆಪಾದನೆ ಮಾಡಿದ್ದಾರೆ ಅದು ಸತ್ಯಕ್ಕೆ ದೂರವಾದ ಮಾತು. ಈ ವಿಚಾರದಲ್ಲಿ ಜಿಲ್ಲಾ ಮಂತ್ರಿಗಳು ಯಾರೂ ಹಸ್ತಕ್ಷೇಪ ಮಾಡಿಲ್ಲ. ಕಾನೂನು ಬದ್ಧವಾಗಿ ಏನು ಇದೆ ಅದನ್ನು ಮಾಡಿದ್ದಾರೆ. ಬಿಜಾಪುರ ಜಿಲ್ಲೆಯ ಉಸ್ತುವಾರಿ ಸಚಿವ ನಾನೆ. ಮಾನ್ಯ ಶಿವಾನಂದ ಪಾಟೀಲರು ಏನು ಆಪಾದನೆ ಮಾಡಿದರು ಅದು ಸರಿಯಲ್ಲ. ಅವರಿಗೆ ಎಲ್ಲಾ ವಿಚಾರ ಗೊತ್ತಿದೆ. ಆದರೂ ಏಕೆ ಅವರು ಆ ರೀತಿ ಮಾತನಾಡುತ್ತಾರೋ ಗೊತ್ತಿಲ್ಲ.

ಶ್ರೀ ಎ.ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೇ ಮಾನ್ಯ ವಿರೋಧಪಕ್ಷದ ಸದಸ್ಯರು ಏನು ಆಪಾದನೆ ಮಾಡಿದ್ದಾರೆ ಅದು ಸತ್ಯಕ್ಕೆ ದೂರವಾದ ಮಾತು.

ಶ್ರೀ ಶಿವಾನಂದ ಪಾಟೀಲ್: ಮಾನ್ಯ ಅಧ್ಯಕ್ಷರೇ ನಾನು ಆಪಾದನೆ ಮಾಡಿದ್ದು ಅಲ್ಲ. ಅವರ ಪಕ್ಷದ ಶಾಸಕರೇ ಆಪಾದನೆ ಮಾಡಿದ್ದು.

ಶ್ರೀ ವಿ.ಮುನಿಯಪ್ಪ:ಮಾನ್ಯ ಅಧ್ಯಕ್ಷರೇ, ಜಿಲ್ಲಾ ಉಸ್ತುವಾರಿ ಮಂತ್ರಿಗಳು ಕೊಟ್ಟ ಸಲಹೆಗಳು ಯಾವುದೂ ಇಂಪ್ಲಿಮೆಂಟ್ ಆಗಿಲ್ಲ.

(ಗೊಂದಲ)

ಅಧ್ಯಕ್ಷರು: ಮಾನ್ಯ ಘೋರ್ಪಡೆಯವರೇ ತಾವು ಉತ್ತರ ಕೊಡಿ.

(ಗೊಂದಲ)

ಶ್ರೀ ಎಂ.ವೈ.ಘೋರ್ಪಡೆ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಅಧ್ಯಕ್ಷರೇ, ಈ ವಿಷಯದಲ್ಲಿ ನಿಜವಾದಂತಹ ಪರಿಸ್ಥಿತಿ ಏನಿದೆ, ಇದನ್ನು ಹೇಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಪ್ರಥಮವಾಗಿ ತಮಗೆ ಧನ್ಯವಾದಗಳು. ನಾನು ಮಾತನಾಡುವಾಗ ಆ ಕಡೆಯವರು ಈ ಕಡೆಯವರು ಶಾಂತಿಯಿಂದ ನನ್ನ ಮಾತನ್ನು ಕೇಳಬೇಕೆಂದು ನನ್ನ ವಿನಂತಿ. ಏಕೆಂದರೆ ಇದು ಗಂಭೀರವಾದಂತಹ ಸಮಸ್ಯೆ. ಅನಾವಶ್ಯಕವಾಗಿ ಇದರಲ್ಲಿ ಏನೋ ಒಂದು ದುರಂತ ಅಥವಾ ಏನೋ ಒಂದು ಗಡಿಬಿಡಿ ನಡೆದಿದೆ ಎನ್ನುವಂತಹ ಒಂದು ಭಾವನೆ ಮೂಡಬಾರದು, ಮೂಡಲಿಕ್ಕೆ ಯಾವ ಅವಕಾಶ ಇಲ್ಲ. ನಾವು 1993ರಲ್ಲಿ ಆಕ್ಟ್

ಮಾಡಿದಾಗ ಈ ಮೀಸಲಾತಿಯನ್ನು ಮಾಡುವಂತಹ ಅವಕಾಶ ಅಧಿಕಾರ ಸರ್ಕಾರದ ಕಡೆ ಇತ್ತು. ಚುನಾವಣೆ ಆಯೋಗವನ್ನು ನಾವು ನೇಮಕ ಮಾಡಿದೆವು. ಚುನಾವಣೆ ಆಯೋಗ ಚುನಾವಣೆಯನ್ನು ನಡೆಸುವುದಕ್ಕೋಸ್ಕರ ನೇಮಕ ಮಾಡಿದ್ದೆವು. ಮೀಸಲಾತಿ ಮತ್ತು ಡಿ-ಲಿಮಿಟೇಶನ್ಸ್ ಮಾಡುವುದಕ್ಕೆ ಅಲ್ಲ. ರಾಜ್ಯಾಂಗದ ತಿದ್ದುಪಡಿ ಪ್ರಕಾರ ಚುನಾವಣೆ ಆಯೋಗ ಇರಲೇಬೇಕು. ಅವರು ಚುನಾವಣೆಯನ್ನು ನಡೆಸಲೇಬೇಕು. ಇದು 1993ನೇ ಆಕ್ಟನಲ್ಲಿರತಕ್ಕಂಥಾದ್ದು, ಈಗ 1997ನೇ ಇಸವಿಯಲ್ಲಿ ಆಗ ಇದ್ದಂತಹ ಸರ್ಕಾರ ಏಕಾಏಕಿ ಈ ಮೀಸಲಾತಿಯನ್ನು ಕೊಡುವಂತಹ ಜವಾಬ್ದಾರಿ ಮತ್ತು ಡಿ-ಲಿಮಿಟೇಶನ್ಸ್ ಮಾಡುವಂತಹ ಜವಾಬ್ದಾರಿ ರಾಜ್ಯ ಚುನಾವಣಾ ಆಯೋಗಕ್ಕೆ ವಹಿಸಿದರು. ದುರ್ದೈವ ಏನೆಂದರೆ ಅವರು ಚುನಾವಣೆಗಳನ್ನು ನಡೆಸಿ ಆಮೇಲೆ ಚುನಾವಣಾ ಆಯೋಗಕ್ಕೆ ಈ ಜವಾಬ್ದಾರಿಯನ್ನು ವಹಿಸಿದರು. ಚುನಾವಣೆಗೆ ಮೊದಲೇ ಈ ಜವಾಬ್ದಾರಿಯನ್ನು ಅವರಿಗೆ ವಹಿಸಿದ್ದರೆ ಇನ್ನಷ್ಟು ಅರ್ಥಪೂರ್ಣವಾಗಿರುತ್ತಿತ್ತು. ನಾನು ಪ್ರಾಮಾಣಿಕವಾಗಿ ಉತ್ತರ ಹೇಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈ ಸಭೆಯ ಎರಡೂ ಕಡೆ ಇರತಕ್ಕಂಥ ಸದಸ್ಯರು ಅಷ್ಟೇ ನಿಷ್ಪಕ್ಷಪಾತವಾಗಿ ಉತ್ತರವನ್ನು ಕೇಳುತ್ತಾರೆಂದು ನಾನು ನಂಬಿದ್ದೇನೆ. ಈಗ ಮಾನ್ಯ ಸಿಂಧ್ಯಾರವರು ಹಿಂದೆ ಒಂದು ಸಲ ತಾವು 1997ನೇ ಇಸವಿಯಲ್ಲಿ ಒಂದು ತಿದ್ದುಪಡಿಯನ್ನು ತಂದು ಈ ಅಧಿಕಾರವನ್ನು ಅವರಿಗೆ ವಹಿಸಿ ಕೊಟ್ಟಿದ್ದು ಅದರ ಬಗ್ಗೆ ಚರ್ಚೆ ನಡೆದಾಗ ನಾನು ಈ ಸಭೆಯಲ್ಲಿ ಏನು ಹೇಳಿದೆ ಎನ್ನುವುದನ್ನು ನೆನಪು ಮಾಡಿ ಕೊಟ್ಟರು. ಅಷ್ಟೇ ಅಲ್ಲ ನಾನು ಹೇಳಿದ ವಾಕ್ಯಗಳನ್ನು ಲಿಖಿತ ಮೂಲಕ ಬರೆದು ಕಳುಹಿಸಿಕೊಟ್ಟಿದ್ದಾರೆ. ನೀವು ಎಷ್ಟು ಪ್ರಾಮಾಣಿಕತೆಯಿಂದ ಈ ಚುನಾವಣೆಗಳನ್ನು ಮುಂದಕ್ಕೆ ಹಾಕಿದ್ದು ತಮ್ಮ ಸರ್ಕಾರ, ಸರಿಯಲ್ಲ ಅಂತ ಹೇಳಿದಿರಿ, ಅಷ್ಟೇ ಪ್ರಾಮಾಣಿಕತೆಯಿಂದ ನಾನು ಹೇಳುತ್ತಿದ್ದೇನೆ. ತಾವು ಆ ತಿದ್ದುಪಡಿಯನ್ನು ತಂದಾಗ 1997ರಲ್ಲಿ ನಾವು ವಿರೋಧ ಮಾಡಲಿಲ್ಲ. ನಾವು ವಿರೋಧಪಕ್ಷದಲ್ಲಿದ್ದರೂ ಕೂಡ. ಆಗ ನಾವು ಸ್ವಾಗತ ಮಾಡಿದೆವು. ಏಕೆಂದರೆ, ''ಈ ತಲೆನೋವು ನಮಗೆ ಬೇಡ, ಚುನಾವಣೆ ಆಯೋಗಕ್ಕೆ ಕೊಡೋಣ'' ಎನ್ನುವ ದೃಷ್ಟಿಯಿಂದ ಆ ಕೆಲಸ ಆ ಕಾಲಕ್ಕೆ ನಡೆಯಿತು. ತಾವು ಚುನಾವಣೆ ಮಾಡಿ ಏನೇನು ಮಾಡಬಾರದೋ ಅದನ್ನೆಲ್ಲಾ ಮಾಡಿ ಆ ನಂತರ ಚುನಾವಣೆ ಆಯೋಗಕ್ಕೆ ವಹಿಸಿದ್ದು ಅಷ್ಟು ಮಾತ್ರ ನನ್ನ ದೃಷ್ಟಿಯಲ್ಲಿ ಸರಿಯಲ್ಲ ಅಂತ ಅನ್ನಿಸಿತು. ವಹಿಸಿ ಕೊಟ್ಟಿದ್ದು ಸರಿಯಲ್ಲ ಅಂತ ಅಲ್ಲ. ಈಗ ನಮ್ಮ ಪಕ್ಷ ಹೊಸದಾಗಿ ಅಧಿಕಾರಕ್ಕೆ ಬಂದಾಗ ಬಹಳಷ್ಟು ಜನ ಸದಸ್ಯರು ಈ ಅಧಿಕಾರವನ್ನು ವಾಪಸ್ಸು ಪಡೆಯಬೇಕು ಎನ್ನುವ ಅಭಿಪ್ರಾಯಕ್ಕೆ ಸೇರಿರತಕ್ಕಂಥವರು. ಪ್ರಜಾಪ್ರಭುತ್ವದಲ್ಲಿ ಶಾಸಕರ ಅಭಿಪ್ರಾಯಕ್ಕೆ ನಾವು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡುವುದಕ್ಕೆ ಬರುವುದಿಲ್ಲ. ಮತ್ತೆ ಅವರ ವಾದ ಏನೆಂದರೆ ನಾನು ಮಾಡಿರತಕ್ಕಂಥ ಕಾನೂನು 1993ರಲ್ಲಿ ಯಾವ ಪರಿಸ್ಥಿತಿ ಇತ್ತು ಇದರ ಬಗ್ಗೆ ಮೀಸಲಾತಿ ಬಗ್ಗೆ ಮತ್ತು ಡಿ-ಲಿಮಿಟೇಶನ್ ಬಗ್ಗೆ ಆ ಪರಿಸ್ಥಿತಿಗೆ ನಾವು ವಾಪಸ್ಸು ಹೋಗೋಣ ಅಂತ ಅಂದಾಗ ನೈತಿಕವಾಗಿ ನಾನು ವಿರೋಧ ಮಾಡಬಾರದು

ಎಂಬುದೇ ನಮ್ಮ ಪಕ್ಷದಲ್ಲಿ ವಾದ ಇತ್ತು. ಆದಕಾರಣ ನಾನು ನನ್ನ ಅಭಿಪ್ರಾಯವನ್ನು ಕೊಟ್ಟಿರಬಹುದು. ಆದರೆ ಆ ವಿರೋಧ ಮಿತಿಮೀರಿ ಹೋಗುವುದಕ್ಕೆ ಬಿಡಲಿಲ್ಲ. ನಮ್ಮ ಪಕ್ಷದ ದೃಷ್ಟಿಯಿಂದ, ಪಂಚಾಯತ್ ರಾಜ್ ದೃಷ್ಟಿಯಿಂದ ಚುನಾವಣೆಗಳನ್ನು ಮಾಡುವ ದೃಷ್ಟಿಯಿಂದ ಇಂತಹ ಮಹತ್ವದ ವಾದ ಅಲ್ಲ ಅಂತ ನನಗೆ ಅನ್ನಿಸಿತು. ಹಾಗೆ ಅಂದತಕ್ಷಣ ನಾವು ಗೈಡ್‌ಲೈನ್ಸ್ ಇಲ್ಲದೆ ಮನಸ್ಸಿಗೆ ಹೇಗೆ ಬೇಕೋ ಹಾಗೆ ಆ ಉದ್ದೇಶದಿಂದ ಈ ಅಧಿಕಾರವನ್ನು ವಾಪಸ್ಸು ಪಡೆದಿಲ್ಲ. ಹೇಗೆ ಬೇಕೋ ಹಾಗೆ ಮಾಡುವುದಾದರೆ ನಾನು ಮಂತ್ರಿಯಾಗಿ ಈ ಸ್ಥಾನದಲ್ಲಿ ಇರುತ್ತಿರಲಿಲ್ಲ. ಮಾನ್ಯ ಸಿಂಧ್ಯಾರವರ ಸರ್ಕಾರ ಇದ್ದಂತಹ ಕಾಲದಲ್ಲಿ ಯಾವ ಒಂದು ರೂಲ್ಸ್ ಅವರು ಮಾಡಿದ್ದರು ಆ 1998ರ ಗೈಡ್‌ಲೈನ್ಸ್ ಇನ್ನೂ ನಮ್ಮ ಮುಂದೆ ಇದೆ. ಈ ಗೈಡ್‌ಲೈನ್ಸ್‌ನಲ್ಲಿರುವುದನ್ನು ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಮೀಸಲಾತಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಜನಸಂಖ್ಯೆ ಆಧಾರದ ಮೇಲೆ ನಡೆಯಬೇಕೆಂದು ಇದೆ. ಅದನ್ನು ನಾವು ಬದಲಾಯಿಸುವುದಕ್ಕೆ ಹೋಗಿಲ್ಲ. ನಾವು ಬದಲಾಯಿಸಿದ್ದು ಒಂದೇ. ಅದನ್ನು ಏಕೆ ಬದಲಾಯಿಸಿದ್ದೇವೆ ಎನ್ನುವುದನ್ನು ಸಹ ನಾನು ಹೇಳುತ್ತೇನೆ. ಇದು ಜಿಲ್ಲಾ ಯೂನಿಟ್ ಆಗಿ ಮಾಡಿರತಕ್ಕಂಥ ವ್ಯವಸ್ಥೆ. ತಾಲ್ಲೂಕು ಮಟ್ಟಕ್ಕೆ ಆಗುವಂತಹ ಮೀಸಲಾತಿ ಜಿಲ್ಲಾಧಿಕಾರಿಗಳು ಯಾವ ರೀತಿ ಮಾಡಿದ್ದಾರೆ ಅದನ್ನೇ ನಾವು ಚುನಾವಣೆ ಆಯೋಗಕ್ಕೆ ಆಗಲೇ ಕಳುಹಿಸಿಕೊಟ್ಟಿದ್ದೇವೆ. ತಮಗೆ ಗೊತ್ತಿರುವಹಾಗೆ ಕಾನೂನಿನ ಪ್ರಕಾರ ಜಿಲ್ಲಾ ಪಂಚಾಯತಿ ಮೀಸಲಾತಿಯನ್ನು ಸರ್ಕಾರ ಅಪ್ರೂವ್ ಮಾಡಬೇಕು. ಅದನ್ನು ಅಪ್ರೂವ್ ಮಾಡುವ ಕಾಲಕ್ಕೆ ಸಚಿವ ಸಂಪುಟದಲ್ಲಿ ಚರ್ಚೆ ಕೂಡ ಆಯಿತು. ಚರ್ಚೆ ಆಗಿ ಅದರಲ್ಲಿ ಒಂದು ದೋಷ ನಮಗೆ ಬಹಳ ಸ್ಪಷ್ಟವಾಗಿ ಎದ್ದು ಕಾಣಿಸುತ್ತಿತ್ತು. ಜಿಲ್ಲಾ ಮಟ್ಟದಲ್ಲಿ ಮಾಡಿರತಕ್ಕಂಥ ಮೀಸಲಾತಿ ವ್ಯವಸ್ಥೆ ಬರೀ ಜನಸಂಖ್ಯೆ ಆಧಾರದ ಮೇಲೆ ಮಾಡಿರತಕ್ಕಂಥಾದ್ದು, ಕೆಲವು ತಾಲ್ಲೂಕುಗಳಲ್ಲಿ 3-4 ಮೀಸಲಾತಿ ಸೀಟುಗಳು ಇರುವ ಉದಾಹರಣೆ ಕೂಡ ಇದೆ. ತಮಗೆ ಗೊತ್ತಿದೆ, ಜಿಲ್ಲಾ ಪರಿಷತ್ತು ಜನಸಂಖ್ಯೆ 40 ಸಾವಿರ ಅಂತ. ಮೂರು ಜಿಲ್ಲಾ ಪರಿಷತ್ತುಗಳಲ್ಲಿ ಒಂದು ಕ್ಷೇತ್ರದಲ್ಲಿ ಒಂದು ಲಕ್ಷ 20 ಸಾವಿರ ಜನಸಂಖ್ಯೆ ಬಂದರೆ ಅಲ್ಲಿ ಮೂರು ಸೀಟುಗಳು ಮೀಸಲಾತಿಯಲ್ಲಿ ಬಂದರೆ ಸ್ವಲ್ಪ ಮಟ್ಟಿಗೆ ಅಲ್ಲಿ ಅನಾನುಕೂಲವಾಗುತ್ತದೆ. ಪರಿಶಿಷ್ಟ ಜಾತಿ ಮತ್ತು ಪಂಗಡದ ಪ್ರತಿನಿಧಿಗಳಿಗೆ ಅನ್ಯಾಯವಾಗುತ್ತದೆ.

5. 10 ಪಿ.ಎಂ

ಅವರು ನನ್ನ ಹತ್ತಿರ ಬಂದು ಇದನ್ನು ಬೇರೆ ರೀತಿಯಲ್ಲಿ ಮಾಡುವುದಕ್ಕೆ ಆಗುವುದಿಲ್ಲವೆ? ಎಂದು ಕೇಳಿದರು. ಜನಸಂಖ್ಯೆ ಆಧಾರವನ್ನು ನಾವು ಕೈಬಿಡುವುದಕ್ಕೆ ಆಗುವುದಿಲ್ಲ, ಆದರೆ ಇದರಲ್ಲಿ ಬಂಚಿಂಗ್ ಏನು ಆಗುತ್ತ ಇದೆ, ಅಂದರೆ ಮೂರು ಮೂರು ರಿಸರ್ವ್ ಸೀಟುಗಳು ಒಂದು ತಾಲ್ಲೂಕ್‌ನಲ್ಲಿ ಆಗುತ್ತಾ ಇದೆ, ಜಿಲ್ಲಾ ಮಟ್ಟದಲ್ಲಿ

ರಿಸರ್‌ವೇಶನ್ ಆದರೂ ಕೂಡ ಒಂದು ತಾಲ್ಲೂಕಿನಲ್ಲಿ ಮೂರು ಸೀಟು ಬಂದರೆ ತೊಂದರೆಯಾಗುತ್ತದೆ. ಅದಕ್ಕೋಸ್ಕರವಾಗಿ ಸಚಿವಸಂಪುಟದಲ್ಲಿ ನಾವು ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಜನಸಂಖ್ಯೆ ಆಧಾರದ ಮೇಲೆ ಎಸ್‌ಸಿ ಸೀಟುಗಳು ಒಂದು ಜಿಲ್ಲೆಗೆ ಎಷ್ಟು ಬರುತ್ತವೆ ಅದನ್ನು ಪ್ರಥಮವಾಗಿ ನಾವು ಒಂದೊಂದು ತಾಲ್ಲೂಕಿಗೆ ಕೊಟ್ಟು ಬಿಡೋಣ, ಎಂದು ಮಾಡಿದ್ದೇವೆ. ಇದು ಪ್ರೊಸೀಜರ್. ಒಂದು ಜಿಲ್ಲೆಗೆ ಇಷ್ಟು ಎಸ್‌ಸಿ ರಿಸರ್‌ವೇಶನ್ ಇರಬೇಕೆಂದು ಬಂದರೆ, ಕಾನೂನು ಪ್ರಕಾರ ಅದನ್ನು ಉಲ್ಲಂಘನೆ ಮಾಡಲು ಯಾರಿಗೂ ಸಾಧ್ಯವಿಲ್ಲ. ಅದು ಈ ಸರಕಾರಕ್ಕೂ ಅಥವಾ ಯಾವುದೇ ಸರಕಾರಕ್ಕೂ ಸಾಧ್ಯವಿಲ್ಲ. ಅದು ನಮ್ಮ ಕಾನೂನಿನ ವಿಚಾರ. ಒಂದು ಸೀಟು ಒಂದು ತಾಲ್ಲೂಕಿಗೆ ಎಸ್‌ಸಿ:ಎಸ್‌ಟಿಯಲ್ಲಿ ಕೊಡುವುದು, ರಿಸರ್‌ವೇಶನ್ ಸೀಟ್ಸ್ ಎಷ್ಟು ತಾಲ್ಲೂಕುಗಳಿಗಿವೆ ಅದಕ್ಕಿಂತ ಹೆಚ್ಚಿಗೆ ಇದ್ದರೆ ಆಗ ಮಾತ್ರ ಒಂದು ತಾಲ್ಲೂಕಿಗೆ ಎರಡು ಎಸ್‌ಸಿ:ಎಸ್‌ಟಿ ಸೀಟ್ ಕೊಡುವಂಥ ಸಂದರ್ಭವು ಬರುತ್ತದೆ. ಅಂಥ ಪರಿಸ್ಥಿತಿಯಲ್ಲಿ ಆ ಎರಡನೇ ಎಸ್‌ಸಿ ರಿಸರ್‌ವೇಶನ್ಸ್ ಯಾವ ತಾಲ್ಲೂಕಿಗೆ ಕೊಡಬೇಕೆಂಬುದು ನಮಗೆ ಬಿಟ್ಟಿದ್ದಲ್ಲ. ಇದು ನಮ್ಮ ರೂಲ್ಸ್‌ನ ಗೈಡ್‌ಲೈನ್ಸ್ ಪ್ರಕಾರ ಆಗುತ್ತದೆ. ಯಾವ ಜಿಲ್ಲೆಯಲ್ಲಿನ ತಾಲ್ಲೂಕಿನಲ್ಲಿ ಜಾಸ್ತಿ ಜನಸಂಖ್ಯೆ ಇದೆ, ಅಂಥ ತಾಲ್ಲೂಕಿಗೆ ಎರಡನೇ ಸೀಟನ್ನು ಕೊಡಬೇಕೆಂದು ಇದೆ. ಇದು ಮೊದಲನೇ ಹೆಜ್ಜೆ. ಎರಡನೇ ಹೆಜ್ಜೆ ಅಂದರೆ ಎಸ್‌ಟಿ ರಿಸರ್‌ವೇಶನ್ಸ್. ಅದರ ಬಗ್ಗೆ ಕೂಡ ಯಾವ ತೊಂದರೆಯೂ ಬರುವುದಿಲ್ಲ. ಏಕೆಂದರೆ ತಾಲ್ಲೂಕುಗಳಲ್ಲಿ ಹೆಚ್ಚಿಗೆ ಎಸ್‌ಟಿ ಸೀಟ್ಸ್ ಇರುವುದಿಲ್ಲ. ಆದರೂ ಕೂಡ ಯಾವ ತಾಲ್ಲೂಕಿನಲ್ಲಿ ಎಸ್‌ಟಿ ಜನಸಂಖ್ಯೆ ಜಾಸ್ತಿ ಇದೆ, ಆ ತಾಲ್ಲೂಕಿಗೆ ಮೊದಲು ಕೊಡಬೇಕೆಂದು ಇದೆ. ಇದು ಈಗ ಇರತಕ್ಕಂಥ ನಮ್ಮ ರಿಸರ್‌ವೇಶನ್ಸ್ ಗೈಡ್‌ಲೈನ್ಸ್‌ನ ಮುಖ್ಯಾಂಶಗಳು. ಆ ನಂತರ ಓಬಿಸಿ, ಹೆಣ್ಣು ಮಕ್ಕಳ ಮೀಸಲಾತಿ ಮತ್ತು ಜನರಲ್ ಸೀಟುಗಳ ವಿಚಾರ ಬರುತ್ತದೆ. ಇವುಗಳಿಗೆ ಯಾವ ಗೈಡ್‌ಲೈನ್ಸ್ ಇಲ್ಲ. ಆದರೆ ಒಂದೇ ಗೈಡ್‌ಲೈನ್ಸ್‌ನ ಪ್ರಕಾರ ರೊಟೇಶನ್ ಆಗಬೇಕೆಂದು ಇದೆ. ಒಂದು ಕಡೆ ಒಮ್ಮೆ ಮಹಿಳೆಯರಿಗೆ ಮೀಸಲಾತಿ ಇಟ್ಟಿದ್ದರೆ ಮತ್ತೆ ಪುನಃ ಅಲ್ಲಿ ಅದನ್ನು ರಿಪೀಟ್ ಮಾಡಬಾರದು. ಓಬಿಸಿ ಒಮ್ಮೆ ಇದ್ದರೆ ಮತ್ತೊಮ್ಮೆ ಅಲ್ಲಿಗೆ ಆ ಕ್ಷೇತ್ರಕ್ಕೆ ಓಬಿಸಿ ತರಬಾರದು ಎಂದು ಇದೆ. ಅದೇ ಜನರಲ್ ಕ್ಯಾಟಗರಿಗೆ ಒಮ್ಮೆ ಜನರಲ್ ಆಗಿದ್ದರೆ ಮತ್ತೆ ಅಲ್ಲಿಗೆ ಜನರಲ್ ಕೊಡಬಹುದು ಎಂದು ಇದೆ. ಏಕೆಂದರೆ ಜನರಲ್ ಮೀಸಲಾತಿಯ ಕೆಟಗರಿಗೆ ಬರುವುದಿಲ್ಲ. ಸಂವಿಧಾನದ ಪ್ರಕಾರ ಮೀಸಲಾತಿಯ ಕೆಟಗರಿ ಏನಿದೆ, ಅದನ್ನು ನಾವು ರೊಟೇಟ್ ಮಾಡಲೇ ಬೇಕು ಎಂದಿದೆ. ಅದನ್ನು ನಾನು ಉಲ್ಲಂಘನೆ ಮಾಡುವುದಕ್ಕಾಗುವುದಿಲ್ಲ. ಉಲ್ಲಂಘನೆ ಮಾಡಿದರೆ 73ನೇ ಸಂವಿಧಾನದ ತಿದ್ದುಪಡಿಯನ್ನು ಉಲ್ಲಂಘನೆ ಮಾಡಿದ ಹಾಗೆ ಆಗುತ್ತದೆ. ಆದ್ದರಿಂದ ಅದು ಅಸಾಧ್ಯವಾದಂಥ ಮಾತು. ಅದು ನಮ್ಮ ಈ ವಿಚಾರಗಳಿಗೆ ಬೇಸ್ ಆಗಿದೆ. ಡೆಪ್ಯುಟಿ ಕಮಿಶನರ್ಸ್ ಬೇರೆ ಸೀಟ್ಸ್‌ನ್ನು "As he deems fit"ಎಂದು ರೂಲ್ಸ್‌ನಲ್ಲಿ ಇದೆ. ಅಂದರೆ ಬೇರೆ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ತಮ್ಮ

ಅಭಿಪ್ರಾಯಗಳನ್ನು ಕೂಡ ಗಮನಿಸಿ ಇದನ್ನು ಮಾಡಬಹುದು ಎಂದು ಇದೆ. ಅಲ್ಲಿ ಡಿಸ್‌ಕ್ರಿಶನ್ ಇದೆ. ಈ ಸಿಸ್ಟಂನಲ್ಲಿ ಡಿಸ್‌ಕ್ರೆಶನ್ ಇರುವುದು ಓಬಿಸಿ ಮತ್ತು ಆ ಸೀಟ್ಸ್ ಬಗ್ಗೆ. ಆದ್ದರಿಂದ ರೊಟೇಶನ್‌ನ್ನು ಒಂದು ಜೋಕ್ ತರಹದಲ್ಲಿ ಟ್ರೀಟ್ ಮಾಡಿದ್ದಾರೆ ಎಂದು ಯಾರಾದರೂ ಅಂದರೆ ಅದೇ ನನಗೆ ಜೋಕ್ ಎಂದು ಕಾಣಿಸುತ್ತದೆ. ಏಕೆಂದರೆ ಅಷ್ಟು ಹಗುರವಾಗಿ ನಾವು ಸಂವಿಧಾನವನ್ನು ಉಲ್ಲಂಘನೆ ಮಾಡುವುದಕ್ಕಾಗುವುದಿಲ್ಲ. ಈ ಪ್ರಕಾರ ನಾವು ಮಾಡಿ ಎಲೆಕ್ಷನ್ ಕಮಿಶನರ್‌ಗೆ 24ನೇ ತಾರೀಖಿಗೆ ಈ ರಿಸರ್‌ವೇಶನ್ಸ್‌ನ್ನು ಕಳುಹಿಸಿಕೊಟ್ಟಿದ್ದೇವೆ. ಏಕೆಂದರೆ ಅದನ್ನು ನಾವು ಕಳುಹಿಸದೇ ಹೋದರೆ, ಇದೇ ತರಹ ನಾವು ಚರ್ಚೆ ಮಾಡುತ್ತಾ ಹೋದರೆ, ಮುಂದೆ ಬರುವ ಎಲೆಕ್ಷನ್‌ಗೆ ಯಾವುದೇ ರೀತಿಯ ಧಕ್ಕೆ ಬರಬಾರದು ಎನ್ನುವುದು ನಮ್ಮ ಮುಖ್ಯ ಉದ್ದೇಶ. ಅದೇ ರೀತಿಯಲ್ಲಿ ಅವಸರದಲ್ಲಿ ನಾವು ತಪ್ಪು ಮಾಡಬಾರದು ಎಂಬ ಬಗ್ಗೆ ನಮ್ಮ ಮನಸ್ಸಿನಲ್ಲಿ ಇದೆ. ನೀವು ಹೇಳದಿದ್ದರೂ ಒಬ್ಬ ಡಿಸಿ ಯವರು ಕಳುಹಿಸಿದ ರಿಪೋರ್ಟ್‌ದಲ್ಲಿ ಒಂದು ದೊಡ್ಡ ತಪ್ಪು ಮಾಡಿ ಬಿಟ್ಟಿದ್ದರು. ಅದು ಉದ್ದೇಶಪೂರ್ವಕವಾಗಿ ಮಾಡಿದ ತಪ್ಪಲ್ಲಿ. ಎಸ್‌ಸಿ ಇದ್ದ ಕಡೆ ಎಸ್‌ಟಿ ಬರೆದಿದ್ದರು, ಎಸ್‌ಟಿ ಇದ್ದ ಕಡೆ ಎಸ್‌ಸಿ ಅಂತ ಬರೆದಿದ್ದರು. ಇದು ರಾಯಚೂರು ಜಿಲ್ಲೆಗೆ ಸಂಬಂಧಪಟ್ಟಿದ್ದು. ಅದರ ಬಗ್ಗೆ ತಾವುಗಳು ಯಾರೂ ಹೇಳಿಲ್ಲ. ಆದರೆ ನಮಗೆ ಜವಾಬ್ದಾರಿ ಇರುವುದರಿಂದ ಆ ತಪ್ಪನ್ನು ತಿದ್ದಿ ಪುನಃ ಕಾರಿಜೆಂಡಂನ್ನು ಎಲೆಕ್ಷನ್ ಕಮಿಶನ್‌ಗೆ ಕಳುಹಿಸಿದ್ದೇವೆ. ಅಲ್ಲಿ ಕೈತಪ್ಪಿ ಟೈಪಿಂಗ್ ಮಿಸ್ಟೇಕ್ ಆಗಿರಬಹುದು. ಅಲ್ಲಿನ ಡಿಸಿ ಉದ್ದೇಶಪೂರ್ವಕವಾಗಿ ತಪ್ಪನ್ನು ಮಾಡಿದ್ದಾರೆಂದು ನಾನು ಹೇಳುತ್ತಾ ಇಲ್ಲ. ಆದ್ದರಿಂದ ಅದನ್ನು ಗಮನಿಸಿ ಸರಿಪಡಿಸಿ ಹೊಸ ಮೀಸಲಾತಿ ಪಟ್ಟಿಯನ್ನು ರಾಯಚೂರು ಜಿಲ್ಲೆಗೆ ನಾವು ಕಳುಹಿಸಿದ್ದೇವೆ.

ಇನ್ನು ಮಾನ್ಯ ಸದಸ್ಯರುಗಳ ಚರ್ಚೆಯಲ್ಲಿ ಪ್ರಸ್ತಾಪಿಸಿದ ವಿಚಾರಗಳ ಬಗ್ಗೆ ಉತ್ತರ ಕೊಡಲು ನಾನು ಪ್ರಯತ್ನ ಮಾಡುತ್ತೇನೆ. ಮಾನ್ಯ ಸಿಂಧ್ಯಾರವರು ಹೇಳಿದಂತೆ ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಪಾರ್ಟಿಸಿಪಿಯೇಶನ್ ಮತ್ತು ಪರ್ಫಾರ್ಮೆನ್ಸ್ ಇದೇ ಅದರ ಮೂಲ ಎಂಬುದನ್ನು ನಾವು ಕೂಡ ಅದನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇವೆ. ಆದರೆ ರಿಸರ್‌ವೇಶನ್ಸ್ ಆದುದು ತಮ್ಮ ಕಾಲದಲ್ಲಿ ಎಂದು ಹೇಳಿದ್ದು ಸರಿಯಲ್ಲ ಎಂದು ನಾನು ಬಹಳ ವಿನಯದಿಂದ ಹೇಳಬಯಸುತ್ತೇನೆ. ತಮ್ಮ ಕಾಲದಲ್ಲಿ ಮಹಿಳೆಯರ ಮೀಸಲಾತಿ ಇತ್ತು. ಆದರೆ 33 ಪರ್‌ಸೆಂಟ್ ಇರಲಿಲ್ಲ. ಎಸ್‌ಸಿ/ಎಸ್‌ಟಿ ರಿಸರ್‌ವೇಶನ್ ಇತ್ತು. ಆದರೆ ತಮ್ಮ ಸರಕಾರದ ಕಾಲದಲ್ಲಿ ಅನಾಹುತ ಮಾಡಿದರು. ಏಕೆಂದರೆ ಪಾಪ್ಯುಲೇಶನ್ ಆಧಾರದ ಮೇಲೆ ಕೊಟ್ಟು ಮಿನಿಮಮ್ ರಿಸರ್‌ವೇಶನ್ ಏನಿತ್ತು ಅದನ್ನು ತಾವು ತೆಗೆದು ಹಾಕಿ ನಮ್ಮ ಕಾಲಕ್ಕೆ 30 ಪರ್‌ಸೆಂಟ್ ರಿಸರ್‌ವೇಶನ್ ಇದ್ದುದನ್ನು ತೆಗೆದು ಹಾಕಿ 23 ಪರ್‌ಸೆಂಟ್‌ಗೆ ಇಳಿಸಿದ್ದೀರಿ. ಅದರಲ್ಲಿ ನನಗೆ ಆಶ್ಚರ್ಯವೆಂದರೆ, ಜೀವಂತವಾದಂಥ ಪ್ರಜಾಪ್ರಭುತ್ವದಲ್ಲಿ ಮೂಲಭೂತವಾದಂಥ

ತಪ್ಪುಗಳು ಆದಾಗ ಅದನ್ನು ಯಾರೂ ಗಮನಿಸುವುದಿಲ್ಲ, ಅದರ ಬಗ್ಗೆ ಯಾರೂ ಮಾತನಾಡುವುದಿಲ್ಲ, ನಮ್ಮ ಪ್ರತಿಷ್ಠೆ ಪ್ರಶ್ನೆ ಬಂದಾಗ ಕೆಲವು ವಿಚಾರಗಳನ್ನು ದೊಡ್ಡದು ಮಾಡಲು ಹೋಗುತ್ತೇವಲ್ಲ ಇದು ದುರ್ದೈವದ ಮಾತು ಎಂದು ನಾನು ಹೇಳಲಿಚ್ಛಿಸುತ್ತೇನೆ. ರಿಸರ್‌ವೇಶನ್ ಮಾಡುವ ಕಾಲದಲ್ಲಿ ವಿರೋಧಪಕ್ಷದವರು ತಮ್ಮ ಅನುಕೂಲ ಮತ್ತು ಅನಾನುಕೂಲಗಳನ್ನು ಹೇಳುವುದರಲ್ಲಿ ಯಾವ ತಪ್ಪೂ ಇಲ್ಲ. ಅದಕ್ಕಾಗಿ ನಾನು ನೀವು ನೇರವಾಗಿ ಸೆಕ್ರೆಟರಿಗೆ ಮತ್ತು ಡಿಸಿ ಯವರಿಗೆ ಹೇಳಬಹುದು ಎಂದು ಹೇಳಿದ್ದೆ. ಏಕೆಂದರೆ ಅದನ್ನು ಕೂಡ ಗಮನಿಸಿ ಎಲ್ಲಿ ನಮಗೆ ಡಿಸ್‌ಕ್ರೆಶನ್ ಇದೆ, ಅದನ್ನು ತಮ್ಮ ಪರವಾಗಿ ನಾವು ಉಪಯೋಗಿಸಲು ಸಾಧ್ಯವಿದೆ. ಆದರೆ ಆ ವಿಚಾರವನ್ನು ತಾವುಗಳು ಬೇರೆ ಅರ್ಥದಲ್ಲಿ ತೆಗೆದುಕೊಂಡು ಬಿಟ್ಟಿರಿ. ಪಾರದರ್ಶಕ ಆಡಳಿತದ ಸರಕಾರವಿದ್ದಾಗ ತಮಗೂ ಅಷ್ಟೇ ಹಕ್ಕು ಇದ್ದೇ ಇರುತ್ತದೆ. ನಿಮ್ಮ ಅನಾನುಕೂಲತೆಗಳನ್ನು ಹೇಳಿಕೊಳ್ಳಲು ನಿಮಗೆ ಆಸ್ಪದವಿದೆ ಎಂಬ ಅರ್ಥದಿಂದ ನಾನು ಆ ಮಾತುಗಳನ್ನು ಹೇಳಿದ್ದೇನೆಯೇ ಹೊರತು ಬೇರೆ ಯಾವ ಉದ್ದೇಶದಿಂದಲೂ ಅಲ್ಲ. ಈಗ ನಾವೇನು ತಿದ್ದುಪಡಿಯನ್ನು ತಂದಿದ್ದೇವೆ, ಅಂದರೆ ಈ ಅಧಿಕಾರವನ್ನು ಎಲೆಕ್ಷನ್ ಕಮಿಶನ್‌ನಿಂದ ವಾಪಸ್ ಸರಕಾರಕ್ಕೆ ತೆಗೆದುಕೊಳ್ಳುವಂಥ ಅಮೆಂಡ್‌ಮೆಂಟ್‌ನಲ್ಲಿ ಇದು ಕಾನೂನುಬದ್ಧವಾಗಿ ಇದೆ. ತಾವು ಪಂಚಾಯತ್ ಎಲೆಕ್ಷನ್ಸ್ ಪೋಸ್ಟ್‌ಪೋನ್ ಮಾಡಿದ್ದು ಅದು ಕಾನೂನು ಮತ್ತು ಸಂವಿಧಾನಕ್ಕೆ ವಿರುದ್ಧವಾಗಿರುವಂಥಾದ್ದು. ಎಲೆಕ್ಷನ್ ಕಮಿಶನ್‌ನವರಿಗೆ ಈ ಅಧಿಕಾರವನ್ನು ತಾವು 1997ರಲ್ಲಿ ಕೊಟ್ಟಿದ್ದೀರಿ. ನಾವು 1993ರಲ್ಲಿ ಯಾವ ಪರಿಸ್ಥಿತಿ ಇತ್ತು ಅದಕ್ಕೆ ವಾಪಸ್ ಬಂದಿದ್ದೇವೆ. ಇದು ಕಾನೂನಿನ ಉಲ್ಲಂಘನೆಯಲ್ಲ. ಕಾನೂನಿನ ಉಲ್ಲಂಘನೆ ಮಾಡಿದರೆ ನಮ್ಮ ಕರ್ನಾಟಕ ರಾಜ್ಯದ ರಾಜ್ಯಪಾಲರು ಇದ್ದಾರೆ. ಅವರು ಬಿಡುವುದಿಲ್ಲ. ಅವರಿಗೆ ಕಾನೂನಿನ ವಿಷಯ ಚೆನ್ನಾಗಿ ಗೊತ್ತಿದೆ. ಪಂಚಾಯತ್‌ರಾಜ್ ವಿಚಾರ ಬಹಳ ಚೆನ್ನಾಗಿ ಗೊತ್ತಿದೆ. 73ನೇ ಕಾನ್ಸಿಟಿಟ್ಯೂಶನ್ ಅಮೆಂಡ್‌ಮೆಂಟ್ ಮಾಡುವ ಕಾಲಕ್ಕೆ ಅದರ ಬಗ್ಗೆ ಸಾಕಷ್ಟು ಅಭ್ಯಾಸ ಮಾಡಿದ್ದಾರೆ. ಖಂಡಿತವಾಗಿ ನಮ್ಮ ರಾಜ್ಯಪಾಲರು ಕಾನೂನಿಗೆ ವಿರುದ್ಧವಾದ ತಿದ್ದುಪಡಿಗೆ ಅನುಮತಿಯನ್ನು ಕೊಡುತ್ತಾ ಇರಲಿಲ್ಲ. ಮಾನ್ಯ ಜಗದೀಶ್ ಶೆಟ್ಟರ್ ಜೆಪಿ ಎಲೆಕ್ಷನ್‌ನಲ್ಲಿ ಲಾಟ್ಸ್‌ನ ವ್ಯವಸ್ಥೆ ಬಹಳ ಚೆನ್ನಾಗಿತ್ತು ಎಂದು ಅವರು ಸ್ವಾಗತ ಮಾಡಿದರು. ಇದೇ ಮಾತನ್ನು ಬಹಳಷ್ಟು ಜನರು ಬಂದು ನನಗೆ ಹೇಳಿದರು. ಅದರ ಬಗ್ಗೆ ನಾವು ಬೆನ್ನು ಚಪ್ಪರಿಸಿಕೊಳ್ಳುವ ಅವಶ್ಯಕತೆಯಿಲ್ಲ. ಏಕೆಂದರೆ ಅದನ್ನು ನಾವು ಮಾಡಿದ್ದಲ್ಲ. ಎಲೆಕ್ಷನ್ ಕಮಿಷನ್‌ನವರು ಮಾಡಿದ್ದು. ಇವತ್ತಿಗೂ ಪಂಚಾಯತ್ ರಾಜ್ ಚುನಾವಣೆಗಳನ್ನು ನಡೆಸುವ ಜವಾಬ್ದಾರಿ ಇವತ್ತಿಗೂ ಎಲೆಕ್ಷನ್ ಕಮಿಷನ್‌ಗೆ ಇದೆ. ಅದನ್ನು ನಾವು ವಾಪಸ್ಸು ತೆಗೆದುಕೊಂಡಿಲ್ಲ. ಬರೀ ತಾಲ್ಲೂಕು ಮತ್ತು ಜಿಲ್ಲಾಪಂಚಾಯತ್ ರಿಸರ್ವೇಶನ್, ಡೀಲಿಮಿಟೇಶನ್ ವಾಪಸ್ಸು ತೆಗೆದುಕೊಂಡಿದ್ದೇವೆ. ಆ ಕಾರಣ ಸುದೈವದಿಂದ ಅವರು ಲಾಟ್ ಸಿಸ್ಟಂ ಏನು ಮಾಡಿದ್ದರು ಅದರ ಬಗ್ಗೆ ಎಷ್ಟೋ ಮಾತು ನಡೆಯಿತು. ಲಾಟರಿ ಮೂಲಕ ಎಲೆಕ್ಟ್ ಮಾಡುತ್ತಿದ್ದಾರೆಂದು. ಆದರೆ

ಇವತ್ತು ಎಲ್ಲರೂ ಒಪ್ಪುತ್ತಾರೆ, ಅದರಿಂದ ಈ ಅಪವಾದಕ್ಕೆ ಗುರಿಯಾಗುವುದು ತಪ್ಪಿತು ಎಂದು. ಯಾರೂ ಅಪವಾದಕ್ಕೆ ಗುರಿಯಾಗಲಿಲ್ಲ. ಇದರಲ್ಲಿ ಡಿಸ್ಕ್ರಿಷನರಿ ಇದೆಯೆಂದು ನಾನು ಹೇಳಿದೆ. ನಾವು ಸೇರಿಸಿ ಡಿಸ್ಕ್ರಿಷನರಿ ಅಲ್ಲ, ಪ್ರಾರಂಭದಿಂದ ಡಿಸ್ಕ್ರಿಷನರಿ ಇತ್ತು. ಆ ಡಿಸ್ಕ್ರಿಷನರಿ ನಾವು ಸ್ವಲ್ಪಮಟ್ಟಿಗೆ ಬದಲಾಯಿಸಿದ್ದೇವೆ. ಅಂದರೆ ಒಂದು ಜಿಲ್ಲೆಗೆ ಒಂದು ಸೀಟು ಎಸ್‌ಸಿ ಆಮೇಲೆ ಒಂದು ಎಸ್‌ಟಿ ಸೀಟು ಹೀಗೆ ಕೊಟ್ಟು ಬಂಚ್ಚಿಂಗ್ ಏನಿದೆ ಅದನ್ನು ತಪ್ಪಿಸಿದ್ದೇವೆ. ಬಂಚ್ಚಿಂಗ್‌ನಿಂದ ಕೆಲವೇ ತಾಲ್ಲೂಕುಗಳಿಗೆ ಬಹಳಷ್ಟು ತೊಂದರೆಯಾಗುತ್ತಿತ್ತು. ಪಾವಗಡ ಹೆಗ್ಗಡದೇವನಕೋಟೆ, ಮೂಡಿಗೆರೆ ಈ ರೀತಿಯ ತಾಲ್ಲೂಕುಗಳಿವೆ. ಆದರೆ ಈ ರೂಲ್‌ನಲ್ಲಿ ಬಂಚಿಂಗ್ ತಪ್ಪಿಸುವುದಕ್ಕೋಸ್ಕರ ಏನು ಬದಲಾವಣೆ ಮಾಡಿದ್ದೇವೆ, ಅದರಿಂದ ಏನು ಪರಿಣಾಮ ಆಗಿದೆಯೆಂದರೆ, ಯಾವುದೇ ತಾಲ್ಲೂಕಿನಲ್ಲಿ ರಿಸರ್ವೇಶ್‌ನ್ನಲ್ಲಿ ಮೂರು ಎಸ್‌ಸಿ ಬಂದಿಲ್ಲ. ಕರ್ನಾಟಕದಲ್ಲಿ ಯಾವುದೇ ತಾಲ್ಲೂಕಿನಲ್ಲಿ ಮೂರು ಎಸ್.ಸಿ ಇಲ್ಲ. ಇದ್ದರೆ ಆಮೇಲೆ ಹೇಳಿ. ನನಗೆ ತಿಳಿದಮಟ್ಟಿಗೆ ಮೂರು ಎಸ್‌ಸಿ ಇಲ್ಲ. 17 ತಾಲ್ಲೂಕುಗಳಲ್ಲಿ ಎರಡು ಎಸ್‌ಸಿ ಇದೆ. ಏಕೆಂದರೆ ಎಸ್‌ಸಿ ಮೆಂಬರ್ಸ್ ಜಾಸ್ತಿಯಿರುವುದರಿಂದ ಕೆಲವು ತಾಲ್ಲೂಕುಗಳಲ್ಲಿ ಎರಡು ಎಸ್‌ಸಿ ಬರಬೇಕಾಗುತ್ತದೆ. ಕರ್ನಾಟಕದ 175 ತಾಲ್ಲೂಕುಗಳ ಪೈಕಿ ಆರು ಅಥವ ಏಳು ತಾಲ್ಲೂಕುಗಳಲ್ಲಿ ಮಾತ್ರ ಎರಡು ಎಸ್‌ಸಿ, ಒಂದು ಎಸ್‌ಟಿ ಇದೆ. ಈ ರೂಲ್ ಬದಲಾಯಿಸಿ ಇದರಿಂದ ಎಸ್‌ಸಿ:ಎಸ್‌ಟಿ ರಿಸರ್ವೇಶನ್ ಬಗ್ಗೆ ಪ್ರತಿಯೊಂದು ತಾಲ್ಲೂಕಿಗೆ ತಾವು ಕೂಡ ಈ ಅಭಿಪ್ರಾಯ ಕೊಟ್ಟಿದ್ದಕ್ಕಾಗಿ ನನ್ನ ಧನ್ಯವಾದಗಳು, ಏಕೆಂದರೆ ಡಿಸ್ಕ್ರಿಷನರಿ ಆಗಬೇಕು ಎಲ್ಲಿಯವರೆಗೂ ನಂಬರ್ ಆಫ್ ರಿಸರ್ವೇಶನ್ ಕಡಿಮೆಯಾಗುವುದಿಲ್ಲ ಅಲ್ಲಿಯವರೆಗೂ ಡಿಸ್‌ಪರ್ಸ್ ಮಾಡಿದರೆ ತಪ್ಪೇನೂ ಇಲ್ಲ, ಅದಕ್ಕೋಸ್ಕರ ಈ ವಿಚಾರವನ್ನು ಒಪ್ಪಿ ಕ್ಯಾಬಿನೆಟ್‌ನಲ್ಲಿ ತೀರ್ಮಾನ ಮಾಡಿದ್ದೇವೆ. ಜಿಲ್ಲಾಧಿಕಾರಿಗಳು ಕಳುಹಿಸಿರತಕ್ಕ ಪಟ್ಟಿ ಏನಿದೆ ಅದನ್ನು ಬದಲಾಯಿಸಲಿಕ್ಕೆ ನಾವು ಹೋದೆವು. ಅದರ ಜೊತೆಗೆ ಕೆಲವು ಸಲಹೆಗಳು ಮಾನ್ಯ ಮಂತ್ರಿಗಳು, ಸದಸ್ಯರು, ತಾವಾಗಲೀ ಕೊಟ್ಟಿದ್ದರೆ ಅದು ಓಬಿಸಿ ವಿಚಾರದಲ್ಲಿ ಹೆಣ್ಣುಮಕ್ಕಳ ರಿಸರ್ವೇಶನ್ ವಿಚಾರದಲ್ಲಿ, ಅದನ್ನು ನಾವು ಕಾನೂನಿನ ಉಲ್ಲಂಘನೆ ಮಾಡದೆ ಅದನ್ನು ಸೇರಿಸಿದರೆ ಅದು ಮಹಾ ತಪ್ಪೇನೂ ಇಲ್ಲವೆಂದು ನನಗನಿಸುತ್ತದೆ. ಈ ಮಾತು ಹೇಳುವಾಗ ಇನ್ನೊಂದು ಮಾತು ಹೇಳುತ್ತೇನೆ. ನಿಮಗೆ ಈ ಗೊಂದಲ ಬೇಡವೆಂದರೆ ಜೀರೋ ಡಿಸ್ಕ್ರಿಷನರಿ ಪದ್ಧತಿ ಮಾಡಿ. ಈಗಲ್ಲ, ಈಗ ನಾವು ಮಾಡಿದ್ದೇವೆ. ಗೈಡ್‌ಲೈನ್ಸ್ ಉಲ್ಲಂಘನೆ ನಾವು ಮಾಡಿಲ್ಲ. ಈಗಾಗಲೇ 24ನೇ ತಾರೀಖಿಗೆ ಎಲೆಕ್ಷನ್ ಕಮಿಷನ್ ಕಡೆಗೆ ಕಳುಹಿಸಿದ್ದೇವೆ, ಇಷ್ಟರಲ್ಲೇ ಅವರು ಟೈಮ್‌ಟೇಬಲ್ ಪಬ್ಲಿಶ್ ಮಾಡುತ್ತಾರೆ. ನಾವು ಎಲೆಕ್ಷನ್ ಮಾಡುತ್ತೇವೆ, ಅದು ಬಹಳ ಮುಖ್ಯ. ಆದರೆ ಅದು ಅಷ್ಟು ಸುಲಭವಾಗಿ ಆಗುವುದಿಲ್ಲ. ಇದು ಜೀರೋ ಡಿಸ್ಕ್ರಿಷನರಿ ತಾವೂ ಮಾಡುವುದಕ್ಕೆ ಆಗಲಿಲ್ಲ, ನಾನೂ ಮಾಡಲಿಕ್ಕೆ ಆಗಲಿಲ್ಲ. ಜಿರೋ ಡಿಸ್ಕ್ರಿಷನರಿ ಮಾಡುವುದಾದರೆ ಡಿಸ್ಕ್ರಿಷನಿಂಗ್ ಇಲ್ಲ. ಮೆಕಾನಿಕಲ್ ಆಗಿ ನಡೆಯಬೇಕೆಂದು ತಮ್ಮ ಉದ್ದೇಶವಿದ್ದರೆ

ಕೆಲವು ಕಡೆ ಲಾಟ್ಸ್ ಪದ್ಧತಿ ಕೂಡ ಅನಿವಾರ್ಯವಾಯಿತು. ಮಧ್ಯಪ್ರದೇಶದಲ್ಲಿ ಲಾಟ್ಸಿಂಗ್ ಮಾಡುತ್ತಿದ್ದಾರೆ. ನಮ್ಮ ನಮ್ಮಲ್ಲಿ ಜಗಳ ಬೇಡವೆಂದು. ಜಗಳ ಬೇಡವೆಂದು ಹೇಳಿ ಮಧ್ಯಪ್ರದೇಶದಲ್ಲಿ ಲಾಟ್ಸಿಂಗ್ ಮಾಡುತ್ತಿದ್ದಾರೆ. ಅದನ್ನು ನೀವು ಲಾಟ್ಸಿಂಗ್ ಮಾಡುವುದಾದರೆ ನನ್ನದೇನೂ ಅಭ್ಯಂತರವಿಲ್ಲ. ಈ ಕಡೆಯವರು ಆ ಕಡೆಯವರು ಮುಂದೆಯಾದರೂ ಯೋಚನೆ ಮಾಡಿ, ಏಕೆಂದರೆ ಹೋದವರ್ಷ ಈ ಸಬಾರ್ಡಿನೇಟ್ ಲೆಜಿಸ್‌ಲೇಷನ್ ಕಮಿಟಿಯವರು ಇದರ ಬಗ್ಗೆ ಶಿಫಾರಸು ಮಾಡಿದ್ದಾರೆ. ಜೀರೋ ಡಿಸ್ಕ್ರಿಷನರಿ ತೆಗೆದು ಹಾಕಿದರೆ ಅನ್ಯಾಯವಾಯಿತು, ನ್ಯಾಯವಾಯಿತು ಎನ್ನುವ ಪ್ರಶ್ನೆ ಬರುವುದಿಲ್ಲ. ಇದರ ಬಗ್ಗೆ ಈ ಸಭೆಯಲ್ಲಿ ಸುದೀರ್ಘವಾಗಿ ಮುಂದೆ ಚರ್ಚೆಮಾಡಿ, ಈಗ ನಾವು ಚುನಾವಣೆ ಮುಂದೆ ಹಾಕುವುದಲ್ಲ. ಈ ಕಾರಣಕ್ಕಾಗಿ ಎಲೆಕ್ಷನ್ ಮುಂದಕ್ಕೆ ಹಾಕಿದರೆ ನೀವು ಮಾಡಿದ ತಪ್ಪನ್ನು ದಯವಿಟ್ಟು ನಮ್ಮ ಕಡೆಯಿಂದ ಮಾಡಿಸಬೇಡಿ. ನಾವು ಮಾಡುವುದೂ ಇಲ್ಲ. ಜೀರೋ ಡಿಸ್ಕ್ರಿಷನರಿದು ಒಂದು ಫಾರ್ಮುಲವನ್ನು ಈ ಕಡೆಯವರು ಆ ಕಡೆಯವರು ಒಪ್ಪುವುದಾದರೆ ಖಂಡಿತವಾಗಿ ನಾನು ಅಡ್ಡ ಬರುವುದಿಲ್ಲ. ಆತ್ಮಸಾಕ್ಷಿಯಾಗಿ, ಮಹಾತ್ಮಗಾಂಧೀಜಿಯವರ ಸಾಕ್ಷಿಯಾಗಿ ಈ ಮಾತನ್ನು ನಾನು ಹೇಳುತ್ತಿದ್ದೇನೆ. ಆದರೆ ನಾವು ಅಷ್ಟರಮಟ್ಟಿಗೆ ರ್‍ಯಾಷನಲ್ ಆಗಿ ಹೋಗುವಂತಹ ಸ್ವಭಾವ ಇದೆಯೋ ಇಲ್ಲವೋ ಎನ್ನುವ ಅನುಮಾನ ಸ್ವಲ್ಪ ಇದೆ. ಇಂಗ್ಲೀಷ್‌ನಲ್ಲಿ ಒಂದು ಮಾತು ಇದೆ. ರೂಲ್ ಆಫ್ ಜನರಲ್ ಇಂಪಾಸಿಬಲ್ ಅಂತ. ಆ ರೀತಿ ಒಬ್ಬರು ಬರೆದ್ದಾರೆ. ಯಾವುದು ಸಾಮಾನ್ಯವಾಗಿ ಅಸಾಧ್ಯವೆಂದರೆ ಇಷ್ಟೊಂದು ಜನ ಅಥವ ಐದಾರು ಜನ ಒಂದು ಕಡೆ ಕೂತು ನೂರಕ್ಕೆ ನೂರರಷ್ಟು ತರ್ಕಬದ್ಧವಾದ ತೀರ್ಮಾನಕ್ಕೆ ಬರುವುದು ಜನರಲ್ ಇಂಪಾಸಿಬಲ್ ಎಂದು ಕರೆದಿದ್ದಾರೆ. ಇದು ಮನುಷ್ಯನ ಸ್ವಭಾವ ಇದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಸಚಿವರು ಹೇಳುವುದು ನಿಮ್ಮದು ನಮ್ಮದು ಸೇರಿ ಎಂದು ಹೇಳುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯ: ಈ ತೀರ್ಮಾನ ಆಗಿದ್ದು ಕ್ಯಾಬಿನೆಟ್‌ನಲ್ಲಿ. ಮಾನ್ಯ ಘೋರ್ಪಡೆಯವರು ಹೇಳಿರುವುದು ನೂರಕ್ಕೆ ನೂರರಷ್ಟು ಸತ್ಯ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಕ್ಯಾಬಿನೆಟ್‌ನಲ್ಲಿ ತೀರ್ಮಾನ ಮಾಡಿದ್ದನ್ನು ಇಲ್ಲಿ ತಿದ್ದುಪಡಿ ಮಾಡಲಿಲ್ಲವೆ? ಕೊ-ಆಪರೇಟಿವ್ ಮತ್ತು ಪಂಚಾಯತ್ ಅದೆಲ್ಲ ಮಾಡಲಿಲ್ಲವೆ?

ಶ್ರೀ ಎಂ.ವೈ.ಘೋರ್ಪಡೆ: ಮಾನ್ಯ ಸೋಮಶೇಖರ್‌ರವರು ಕಂಪ್ಯೂಟರ್‌ನಲ್ಲಿ ಹಾಕಿರಿ ಎಂದು ಹೇಳಿದರು. ನಾವು ಕಂಪ್ಯೂಟರ್‌ನಲ್ಲಿ ಹಾಕುವುದಾದರೆ ಜೀರೋ ಡಿಸ್ಕ್ರಿಷನರಿ ಪದ್ಧತಿಯನ್ನು ನಾವು ಅನುಸರಿಸುವುದಾದರೆ ಕಂಪ್ಯೂಟರ್‌ನಲ್ಲಿ ಹಾಕಬಹುದು. ಇಲ್ಲದಿದ್ದರೆ ಕಂಪ್ಯೂಟರ್‌ನಲ್ಲಿ ಹಾಕಲಿಕ್ಕೆ ಆಗುವುದಿಲ್ಲ. ಮಾನ್ಯ

ಶಿವಪ್ಪನವರು ಜನರಲ್ ರಿಪೀಟ್ ಆಗಿದೆ ಎಂದು ಹೇಳಿದರು. ಅದು ನಿಜ. ನಾವೇನು ಚೇಂಜ್ ಮಾಡಿದ್ದೇವೆ ಅದರಲ್ಲಿ ಜನರಲ್ ರಿಪೀಟ್ ಆಗಬಹುದು. ಏಕೆಂದರೆ ಅದು ರಿಸರ್ವ್ ಕ್ಯಾಟಗರಿ ಅಲ್ಲ. ಅದು ತಪ್ಪೇನೂ ಇಲ್ಲ. ಮಾನ್ಯ ಎಸ್.ಎಸ್.ಪಾಟೀಲರು ಹೇಳಿದರು, ಜಿಲ್ಲಾಧಿಕಾರಿಗಳು ಕಳುಹಿಸಿರತಕ್ಕದ್ದನ್ನು ನೀವು ಏಕೆ ಅಪ್ರೂವ್ ಮಾಡಲಿಲ್ಲವೆಂದು. ಕಾರಣ ನಾನು ಮುಚ್ಚಿಡಲಿಕ್ಕೆ ಪ್ರಯತ್ನ ಮಾಡಲಿಲ್ಲ. ಜಿಲ್ಲಾಧಿಕಾರಿಗಳು ಕಳುಹಿಸಿದ ಪ್ರಕಾರ ನಾನು ಆಗಲೇ ತಮಗೆ ಹೇಳಿದೆ, ಕೆಲವು ತಾಲ್ಲೂಕುಗಳಲ್ಲಿ ಮೂರು ನಾಲ್ಕು ಎಸ್‌ಸಿ/ಎಸ್‌ಟಿ ರಿಸರ್ವೇಶನ್ಸ್ ಬರುತ್ತಿತ್ತು. ಅದಕ್ಕೋಸ್ಕರ ತಾಲ್ಲೂಕಿಗೆ ಕನಿಷ್ಟ ಒಂದು ರಿಸರ್ವೇಶನ್ ಎಸ್‌ಸಿಗೆ ಕೊಟ್ಟು ಆಮೇಲೆ ಸೀಟು ಜಾಸ್ತಿಯಿದ್ದರೆ ಎರಡನೆಯದು ಹಂಚುವುದು. ಅದೇರೀತಿಯಲ್ಲಿ ಎಸ್‌ಟಿಗೆ ಕೊಡುವುದು. ಈ ಬದಲಾವಣೆ ಏನಿದೆ ಇದು ಸಾಮಾಜಿಕ ನ್ಯಾಯದ ವಿರುದ್ಧ ಹೋಗುವುದಿಲ್ಲ. ಸಾಮಾಜಿಕ ನ್ಯಾಯವನ್ನು ಕಾಪಾಡುವಂತಹ ಪ್ರಯತ್ನ. ಏಕೆಂದರೆ ಯಾರಿಗೂ ಬೇಸರವಾಗಬಾರದು. ಅಲ್ಲಿರತಕ್ಕ ಜನಗಳಿಗೆ ಕೂಡ, ಅವರು ಎಲ್ಲರ ಓಟು ತೆಗೆದುಕೊಂಡು ಅಧಿಕಾರಕ್ಕೆ ಬಂದಿರುತ್ತಾರೆ, ಬರೀ ಎಸ್‌ಸಿ ಎಸ್‌ಟಿ ಓಟು ಅಲ್ಲ. ಆ ಕಾರಣದಿಂದ ಅವರ ಭಾವನೆಗಳಿಗೆ ಕೂಡ ಲಕ್ಷ್ಯವನ್ನು ಕೊಡಬೇಕಾಗುತ್ತದೆ. ಆ ಕಾರಣ ಎಸ್‌ಸಿಎಸ್‌ಟಿ ಜನ ರಿಸರ್ವೇಶನ್ ಸೀಟ್ಸ್‌ನಿಂದ ಆರಿಸಿ ಬಂದಿದ್ದರು ಅವರೇ ಹೇಳಿದರು. ಇದನ್ನು ಮಾಡಿದರೆ ನಮಗೇನು ಬೇರೆ ಜಾತಿಯವರು ಓಟು ಕೊಟ್ಟಿದ್ದಾರೆ ಅವರಿಗೆ ಸಂತೋಷವಾಗುತ್ತದೆಂದು ಇದರಲ್ಲಿ ಮಹಾತ್ಮಗಾಂಧೀಜಿಯವರ ಮಾತನ್ನು ಹೇಳಬೇಕಾಗುತ್ತದೆ. ಒಬಿಸಿ ಜನಸಂಖ್ಯೆ ಕಡಿಮೆಯಿದ್ದರೂ ಅವರಿಗೆ ರಿಸರ್ವ್ ಕೊಟ್ಟಿದ್ದಾರೆ , ಅಲ್ಲಿ ಒಬಿಸಿ ಜನರೇ ಇಲ್ಲ ಈ ಮಾತು ಏನಿದೆಯಲ್ಲ, ಒಬಿಸಿ ಮತ್ತು ಹೆಣ್ಣುಮಕ್ಕಳು ಮೀಸಲಾತಿ ಜನಸಂಖ್ಯೆ ಆಧಾರದ ಮೇಲೆ ಮಾಡಿದ್ದಲ್ಲ. ಎಸ್‌ಸಿ ಎಸ್‌ಟಿ ಗೆ ಮಾತ್ರ ಜನಸಂಖ್ಯೆಯ ಆಧಾರದ ಮೇಲೆ ಮೀಸಲಾತಿ ಕೊಡಲಾಗಿದೆ. ಹಿಂದೆ ನಾನು ಒಂದು ಸಲ ಹೇಳಿದ್ದೆ. ರೌಂಡ್ ಟೇಬಲ್ ಕಾನ್ಫರೆನ್ಸ್ ಇಂಗ್ಲೆಂಡ್‌ನಲ್ಲಿ ಆದಾಗ, ಡಾ:ಬಾಬಾಸಾಹೇಬ್ ಅಂಬೇಡ್ಕರ್ ಸೆಪರೇಟ್ ಎಲೆಕ್ಟೋರಲ್ ಆಗಬೇಕೆಂದರೆ ಹರಿಜನರು ಹರಿಜನರಿಗೆ ಓಟು ಮಾಡಬೇಕೆಂದು ಅಂದಾಗ, ಮಹಾತ್ಮ ಗಾಂಧೀಜಿಯವರು 21 ದಿವಸ ಉಪವಾಸ ಮಾಡಿದರು. ಅವರು ಹೇಳಿದರು, ರಿಸರ್ವೇಶನ್ ಮಾಡಬಹುದು, ಆದರೆ ಎಲ್ಲರೂ ಓಟು ಹಾಕಬೇಕು. ಯಾವುದೇ ಜಾತಿಯವರಾಗಲೀ ಎಲ್ಲರೂ ಓಟು ಹಾಕಬೇಕು. ಆದಕಾರಣ ಎಲ್ಲಿಯವರೆಗೂ ಈ ಕಾನ್‌ಸೆಪ್ಟ್ ಇದೆ, ಅಲ್ಲಿಯವರೆಗೆ ಎಲ್ಲರೂ ಎಲ್ಲರಿಗೂ ಓಟು ಹಾಕಬೇಕು. ಆಗ ನಾವು ನಮ್ಮ ದೇಶದ ಐಕ್ಯತೆಯನ್ನು ಕಾಪಾಡಿಕೊಂಡು ಬರಲಿಕ್ಕೆ ಆಗುತ್ತದೆ. ಇಲ್ಲದೇ ಹೋದರೆ ಭಾರೀ ಕಷ್ಟವಾಗುತ್ತದೆ. ಈಗ ನಾನು ಸ್ಪಷ್ಟವಾಗಿ ಹೇಳುತ್ತೇನೆ. ನಾವು ಮಾಡಿರತಕ್ಕಂಥಹ ರಿಸರ್ವೇಷನ್, ಇದರಲ್ಲಿ 28 ಪರ್ಸೆಂಟ್ ಎಸ್‌ಸಿ/ಎಸ್‌ಟಿ ಜನಾಂಗ ಬಂದಿದ್ದಾರೆ. ಅವರ ಜನಸಂಖ್ಯೆ ಇರುವುದು 23 ಪಸೆಂಟ್. ಮಿನಿಮಮ್ ರಿಸರ್ವೇಷನ್ ನಾವು ತಂದಿರುವುದರಿಂದ ನೀವೇನು ತೆಗೆದು ಹಾಕಿದ್ದೀರಿ, ತಂದಿರುವುದರಿಂದ 28 ಪರ್ಸೆಂಟ್

ಇದೆ. ನಿಮ್ಮ ಕಾಲಕ್ಕೆ ಓಬಿಸಿ ಇದ್ದೇ ಇರಲಿಲ್ಲ. ನಾವು 33 ಪರ್ಸೆಂಟ್ ರಿಸರ್ವೇಷನ್ ಮಾಡಿದ್ದೇವೆ. ಹೆಣ್ಣು ಮಕ್ಕಳ ರಿಸರ್ವೇಶನ್ ಅಂದರೆ ಪ್ರತಿಯೊಂದು ಕ್ಯಾಟಗರಿಯಲ್ಲಿ ಮೂರರಲ್ಲ ಒಂದು ಭಾಗ ಹೆಣ್ಣು ಮಕ್ಕಳು ಇರಬೇಕು. ನೀವು 'ಎ' ವರ್ಗ ಇದ್ದುದನ್ನು 'ಎ.ಬಿ' ಎಂದು ಮಾಡಿದಿರಿ ಸರಿ. ಅದೊಂದು ಕ್ರಾಂತಿಕಾರಕವಾದಂತಹ ಬದಲಾವಣೆ ಏನೂ ಇಲ್ಲ. ಕಾನೂನಿನ ಪ್ರಕಾರ ಏನು ಇದೆ ಅದನ್ನು ಕೊಟ್ಟಿರುತ್ತಾರೆ.

ಶ್ರೀ ಎಸ್.ಎಸ್.ಪಾಟೀಲ್: 'ಎ'ಗೆ ಎಷ್ಟು ಕೊಟ್ಟಿದ್ದೀರಿ, 'ಬಿ'ಗೆ ಎಷ್ಟು ಕೊಟ್ಟಿದ್ದೀರಿ ಎಲ್ಲವನ್ನೂ ಹೇಳಿ ಬಿಡಿ.

ಶ್ರೀ ಎಂ.ವೈ.ಘೋರ್ಪಡೆ:ಕಾನೂನು ಪ್ರಕಾರ ಏನಿದೆ ಅದನ್ನು ಕೊಟ್ಟಿರುತ್ತಾರೆ. ನಡೆದಿರತಕ್ಕಂಥಹ ಸಂಗತಿ ಇಷ್ಟು, ನಾವು ಎಲ್ಲಿ ತಪ್ಪು ಮಾಡಿದ್ದೇವೆ, ರಾಯಚೂರಿನಲ್ಲಿ, ಅದು ಮುದ್ದಾಂ ಮಾಡಿದ್ದು ಅಲ್ಲ. ಆಕಸ್ಮಾತ್ ತಪ್ಪಾಗಿದ್ದನ್ನು ನಾವು ತಿದ್ದಿದ್ದೇವೆ. ಈ ಗೈಡ್‌ಲೈನ್ಸ್ ನಾನೇನು ಹೇಳಿದೆನಲ್ಲಾ, ಅದರ ವಿರುದ್ಧವಾಗಿ ಏನಾದರೂ ಎಲ್ಲಿಯಾದರೂ ನಡೆದಿದ್ದರೆ ಅದನ್ನು ಹೇಳಿದರೆ, ಅಬ್ವಿಯೆಸ್ ಎರರ್ ಇದ್ದರೆ ಅದನ್ನು ಸರಿ ಮಾಡಿಸುವುದರಲ್ಲಿ ಏನೂ ತೊಂದರೆ ಇಲ್ಲ.

ಶ್ರೀ ಚೆಲುವ ರಾಯಸ್ವಾಮಿ: ಅವರೇ ಹೇಳುತ್ತಿದ್ದಾರೆ, ತಪ್ಪಾಗಿರುವ ಕಡೆ ಸರಿ ಪಡಿಸುತ್ತೇವೆ ಎಂದು ಹೇಳುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು: ಅವರೆಲ್ಲಸಮಂಜಸ ಉತ್ತರ ಕೊಟ್ಟಿದ್ದಾರೆ. ಒಬ್ಬರಿಗೆ ಅಲೋ ಮಾಡಿದರೆ 40 ಜನ ಏಳುತ್ತಾರೆ, ಬೇಡ.

ಶ್ರೀ ಎಂ.ವೈ.ಘೋರ್ಪಡೆ: ಏಪ್ರಿಲ್ 3ನೇ ತಾರೀಖಿಗೆ ಇಷ್ಟೆಲ್ಲಾ ಗೊಂದಲ ಇದ್ದರೂ ಕೂಡ ವಿರೋಧ ಇದ್ದರೂ ಕೂಡ ನಾವು ಅಧಿಕಾರವನ್ನು ವಾಪಸ್ ತೆಗೆದುಕೊಳ್ಳುವಂತಹ ಪ್ರಕ್ರಿಯೆ ಮುಗಿಸಿದೆವು. ಅಮೆಂಡ್‌ಮೆಂಟ್ ಮಾಡಿದೆವು. ಅಮೆಂಡ್‌ಮೆಂಟ್‌ಗೆ ಕೂಡ ಮಾನ್ಯ ರಾಜ್ಯಪಾಲರು ತಕ್ಷಣ ಒಪ್ಪಿದ್ದಾರೆ. ಏಕೆಂದರೆ ಅದರಲ್ಲಿ ಕಾನೂನು ವಿರುದ್ಧವಾದುದು ಏನೂ ಇದ್ದಿಲ್ಲ. ಆದರೆ ಅಮೆಂಡ್‌ಮೆಂಟ್ ಮಾಡುವುದು ಸುಲಭ. ಅಮೆಂಡ್‌ಮೆಂಟ್‌ಉದ್ದೇಶ ಏನೆಂದರೆ ಎಲೆಕ್ಷನ್ ಸಕಾಲಕ್ಕೆ ಆಗಲಿ ಎನ್ನುವುದೇ ಆಗಿದೆ. ಈಗ ನ್ಯಾಯವಾಗಿ ಹೇಳಬೇಕಾದರೆ ಎಲೆಕ್ಷನ್ಸ್ ಮೇ ತಿಂಗಳಲ್ಲಿ ಆಗಬೇಕಾಗಿತ್ತು. ಟರ್ಮ್ ಮುಗಿಯುತ್ತದೆ. ಆದರೆ ಈ ಎಲ್ಲಾ ಪರಿಸ್ಥಿತಿ ಗಮನದಲ್ಲಿಟ್ಟು ನಾವು ಮೇ ಒಳಗಾಗಿ ಎಲೆಕ್ಷನ್ಸ್ ಮಾಡಲಿಕ್ಕೆ ಆಗಲಿಲ್ಲ. ಈಗಾಗಲೇ ಎಲೆಕ್ಷನ್ ಕಮೀಷನರ್‌ಗೆ ನಾವು ರಿಸರ್ವೇಷನ್ಸ್ ಮಾಡಿದ್ದು ಕಳುಹಿಸಿಕೊಟ್ಟಿದ್ದೇವೆ. ಇಲ್ಲದೇ ಹೋದರೆ ಅವರು ಹೇಳಬಹುದಾಗಿತ್ತು. ನೀವು ರಿಸರ್ವೇಷನ್ಸ್ ಮಾಡಿಲ್ಲ,

ನಾವು ಎಲೆಕ್ಷನ್ಸ್ ನಡೆಸುವುದು ಹೇಗೆ ಎಂದು ಅವರು ಹೇಳಬಹುದಾಗಿತ್ತು. ಈಗ ಆ ಮಾತು ಎಲೆಕ್ಷನ್ ಕಮೀಷನರ್‌ಗೆ ಹೇಳಲಿಕ್ಕೆ ಸಾಧ್ಯ ಇಲ್ಲ. ಏಕೆಂದರೆ ಎಲೆಕ್ಷನ್ ಕಮೀಷನರ್ ಅವರು ತಿಳಿಸಿದ್ದಾರೆ. ನಾವು ರಿಸರ್ವೇಷನ್ಸ್ ಮಾಡಿದ ಆರು ವಾರದ ನಂತರ ಎಲೆಕ್ಷನ್ಸ್ ಮಾಡುತ್ತೇವೆ. ಅದರ ಕಾರಣ ಆರು ವಾರ ಅಂದರೆ ಮೇ ತಿಂಗಳಲ್ಲೇ ಮುಗಿಯುತ್ತದೆ. ಜೂನ್ ಮೊದಲ ವಾರದಲ್ಲಿ ಎಲೆಕ್ಷನ್ ಕಮೀಷನರ್‌ಗೆ ಡೇಟ್ಸ್ ಫಿಕ್ಸ್ ಮಾಡುವುದರಲ್ಲಿ ಯಾವುದೇ ತೊಂದರೆ ಇಲ್ಲ. ಅದನ್ನು ಮಾಡಿದರೆ ತಮ್ಮ ಕಾಲಕ್ಕೆ ಕರ್ನಾಟಕಕ್ಕೆ ಇರತಕ್ಕಂಥಹ ಕೀರ್ತಿ, ನಮ್ಮ ಕಾಲಕ್ಕೆ ಇರತಕ್ಕಂಥಹ ಕೀರ್ತಿ, ಅದು ಜಾಸ್ತಿನೋ ಕಡಿಮೆಯೋ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಅದನ್ನು ಉಳಿಸಿಕೊಂಡು ಹೋಗುವಂತಹ ಕ್ರಮ ಆಗುತ್ತದೆ. ಕರ್ನಾಟಕದ ಕಡೆ ಇಡೀ ದೇಶವೇ ನೋಡುತ್ತಿದೆ. ಕರ್ನಾಟಕದಲ್ಲಿ ನಾವು ಸಕಾಲಕ್ಕೆ ಎಲೆಕ್ಷನ್ಸ್ ಮಾಡಲಿಕ್ಕೆ ಆಗದಿದ್ದರೆ ಈ ಪಂಚಾಯತ್ ರಾಜ್ ವ್ಯವಸ್ಥೆಗೆ ನಾವು ಬಹಳಷ್ಟು ಅನ್ಯಾಯ ಮಾಡಿದಂತೆ ಆಗುತ್ತದೆ. ನಾವು ಸಣ್ಣ ಪುಟ್ಟ ಪ್ರತಿಷ್ಠೆಯ ಪ್ರಶ್ನೆಗಳನ್ನು ಬದಿಗಿಟ್ಟು ನಾವು ಒಳ್ಳೆಯ ಅಭಿಪ್ರಾಯದಿಂದ ಸ್ಪಷ್ಟವಾದಂತಹ ಗೈಡ್‌ಲೈನ್ಸ್ ಕೊಡಬೇಕು. ಗೈಡ್‌ಲೈನ್ಸ್ ಕೊಟ್ಟು, ಗೈಡ್‌ಲೈನ್ಸ್‌ನಲ್ಲಿ ಎಷ್ಟು ಡಿಸ್ಕ್ರಿಷನ್ ಇದೆ, ಅಷ್ಟು ಮಾತ್ರ ಉಪಯೋಗಿಸಿ ಏನು ಮಾಡಿಕೊಟ್ಟಿದ್ದೇವೆ, ಅದಕ್ಕೆ ಎಲ್ಲರೂ ಸಮರ್ಥನೆ ಮಾಡುತ್ತಾರೆ, ಸಮರ್ಥನೆ ಮಾಡಬೇಕು ಎಂದು ಹೇಳಿ ನಾನು ಪ್ರಾರ್ಥಿಸುತ್ತೇನೆ.

ಅಧ್ಯಕ್ಷರು: ಮಾನ್ಯ ಎಸ್.ಎಸ್.ಪಾಟೀಲ್ ಅವರು, ತಾವು ಬೇಡಿಕೆಯ ಮೇಲೆ ಚರ್ಚೆ ಪ್ರಾರಂಭ ಮಾಡಿ....

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ನಾವೊಂದು ವಿಚಾರಗಳನ್ನು ಹೇಳಬೇಕಾಗಿದೆ.

ಅಧ್ಯಕ್ಷರು: ಏನೇನು ಹೇಳಬೇಕೋ, ಅವೆಲ್ಲಾ ಆಗಿದೆ. ನಾನು ಅಲೋ ಮಾಡುವುದಿಲ್ಲ. ಮಾನ್ಯ ಪಾಟೀಲ್ ಅವರೇ ಪ್ರಾರಂಭ ಮಾಡಿ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಅಧ್ಯಕ್ಷರೆ, ತಾವು ದೊಡ್ಡ ಮನಸ್ಸು ಮಾಡಿ ನಿಯಮ 69ರ ಒಳಗಡೆ ಚರ್ಚೆಗೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ನಿಮಗೆ ತುಂಬಾ ಧನ್ಯವಾದಗಳು. ನಾವೇನೂ ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಈಗ ನಾನು ಮಾನ್ಯ ಮಂತ್ರಿಗಳಲ್ಲಿ ಕೇಳತಕ್ಕದ್ದು ಇಷ್ಟೇ. ಈ ಸ್ಟೇಜಿನಲ್ಲಿ, ನಾನು ಬಾಕಿ ವಿಚಾರಗಳ ಬಗ್ಗೆ ಮಾತನಾಡಲು ಹೋಗುವುದಿಲ್ಲ. ಬಹಳಷ್ಟು ವಿಚಾರಗಳು, ವಾದ-ವಿವಾದ, ಚರ್ಚೆ ಇವೆಲ್ಲ ಆಗುತ್ತದೆ. ಆದ್ದರಿಂದ ನಾನು ಯಾವುದನ್ನೂ ಮಾತನಾಡುವುದಕ್ಕೆ ಹೋಗುವುದಿಲ್ಲ. ನಿಮ್ಮ ಇಲಾಖೆಯ ಬೇಡಿಕೆ ಮೇಲೆ ಮಾತನಾಡತಕ್ಕಂಥ ಸಂದರ್ಭದಲ್ಲಿ ಈ ವಿಚಾರದ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ನೀವೇನು ನಮಗೆ

ಚುಚ್ಚಿದ್ದೀರಿ, ಅದಕ್ಕೆನಾವು ಉತ್ತರಗಳನ್ನುಕೊಡೋಣ. ಈಗ ತಾವೇನು ಹೇಳಿದಿರಿ. ಜೀರೋ ಡಿಸ್ಕಷನೂ ಸಾಧ್ಯವಾಗಲಿಲ್ಲ. ಬಂಚಿಂಗ್ ಏನು ಇದೆ, ಪಾಯಿಂಟೆಡ್ ಆಗಿ ತಾವೂ ಸಹಿತ ಕೇಳಿದ್ದು, ನಾವು ಸಹಿತ ಕೇಳಿದ್ದು. ಆ ಕಡೆ ಸದಸ್ಯರೂ ಸಹ ಕೇಳಿದ್ದು ಬಂಚಿಂಗ್ ಆಗದೇ ಇರುವ ಹಾಗೆ ಡಿವೈಡ್ ಮಾಡಬೇಕು ಎಂದು ಹೇಳಿ. ಅದೂ ಆಗಲಿಲ್ಲ. ನಾವ್ಯಾರೂ ಸಹಿತ ಎಲ್ಲೂ ಸಹಿತ ನಾವು ಹೇಳಿರತಕ್ಕದ್ದು ಏನು? ಎಸ್‌ಸಿ:ಎಸ್‌ಟಿ ರಿಸರ್ವೇಷನ್ ಬಗ್ಗೆ ನಾವೇನೂ ವಿರೋಧ ಮಾಡಿಲ್ಲ. ಓಬಿಸಿಗಳ ನಾಯಕತ್ವ ಎಲ್ಲಿದೆ ಮತ್ತು ಮಹಿಳೆ ಏನು ಇದೆ, ಅದಕ್ಕೆ ನೀವು ಮನಸೋ ಇಚ್ಛೆ ಮೀಸಲಾತಿ ಮಾಡಿದ್ದೀರಿ ಎನ್ನತಕ್ಕದ್ದೇ ನಾವು ಹೇಳತಕ್ಕದ್ದು. ಆದ್ದರಿಂದ ಈಗಲೂ ನಾನು ಮಾನ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ಇದನ್ನು ಏನಾದರೂ ತಿದ್ದುಪಡಿ ಮಾಡಲಿಕ್ಕೆ ಸಾಧ್ಯನಾ? ದಯವಿಟ್ಟು ಅದನ್ನು ನಮಗೆ ಹೇಳಿ. ಈ ಸ್ಟೇಜಿನಲ್ಲಿ ಆದರೂ ತಿದ್ದುಪಡಿ ಮಾಡಲಿಕ್ಕೆ ಸಾಧ್ಯವೋ ಇಲ್ಲವೋ ಎಂದು ನಮಗೆ ಒಂದು ಉತ್ತರ ಬೇಕು.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಇಷ್ಟು ಹೊತ್ತಿನವರೆಗೂ ಉತ್ತರ ಕೊಟ್ಟರು. ಕೇವಲ, ಇದು ಪ್ರತಿಪಕ್ಷದ ಕಡೆ ಇದ್ದಂತಹ ಶಾಸಕರು ನಾವೆಲ್ಲ ನಾಯಕರು ಹೇಳಿದಂತಹ ವಿಷಯವಲ್ಲ. ಇದು ಎಲ್ಲೆಲ್ಲಿ ಯಾವ ಜಿಲ್ಲೆಯಲ್ಲಿ ಯಾವ ಕ್ಷೇತ್ರದಲ್ಲಿ ಆಗಿದ್ದಂತಹ ಅನ್ಯಾಯ, ಇದು ಕೇವಲ ಈ ಕಡೆಯಿಂದ ಬರಲಿಲ್ಲ. ನಾನು ಏನೋ ರಾಯಚೂರಿನ ವಿಚಾರ ಪ್ರಸ್ತಾಪ ಮಾಡಿದೆ, ಕಾಂಗ್ರೆಸ್ ಶಾಸಕರಲ್ಲಿ, ಕಾಂಗ್ರೆಸ್‌ನಲ್ಲಿ ಅದೂ ಒಂದು ಬಂಡಾಯ ಎದ್ದಂತಹದು. ಅಲ್ಲಿದ್ದಂತಹ ಶಾಸಕರು ಏನು ಅನ್ಯಾಯ ಆಯಿತು ಎನ್ನುವಂತಹದನ್ನು ಅವರೂ ಪ್ರಸ್ತಾಪ ಮಾಡಿದರು. ಆಮೇಲೆ ಡಿಸಿ ಅವರೇನೋ ಒಂದು ಲಿಸ್ಟ್ ಕಳಿಸಿದ್ದರು. ಆಮೇಲೆ ಇಲ್ಲಿ ಬೆಂಗಳೂರಿಗೆ ಬಂದ ಮೇಲೆ ಏನು ಛೇಂಜ್ ಆಯಿತು, ಅದೂ ಬಂತು. ನಾನು ಆಗಲೇ ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳನ್ನು ವಿನಂತಿ ಮಾಡಿಕೊಂಡಿದ್ದೆ. ನೀವು ಲಿಸ್ಟ್ ತೆಗೆದುಕೊಂಡು ಬನ್ನಿ, ಜಿಲ್ಲಾಧಿಕಾರಿಗಳವರು ಕಳಿಸಿದಂತಹ ಲಿಸ್ಟ್, ಮತ್ತು ನೀವು ಮಾಡಿದಂತಹ ಲಿಸ್ಟನ್ನು ಕಂಪೇರ್ ಮಾಡಿ ಎಂದು ನಾನು ಹೇಳಿದೆ. ಆದರೂ ಸಹ ಅವನ್ನು ರೀಕನ್ಸಿಡರೇಷನ್ ಮಾಡಬೇಕು. ಮಾನ್ಯ ಘೋರ್ಪಡೆಯವರು ಒಂದು ಉದ್ದೇಶದಿಂದ, ಏನೋ ಹೊರಟಿದ್ದಾರೆ. ಮೇ ತಿಂಗಳಲ್ಲಿ ಎಲೆಕ್ಷನ್ ಆಗಲಿಲ್ಲ, ನಾವು ಜೂನ್ ತಿಂಗಳಲ್ಲಿ ಎಲೆಕ್ಷನ್ ಮಾಡಲೇಬೇಕು. ಎಲೆಕ್ಷನ್ ಮಾಡುವುದಕ್ಕೆ ನಮ್ಮದೇನೂ ತಕರಾರು ಇಲ್ಲ. ಎಲೆಕ್ಷನ್ ಮೇ ತಿಂಗಳಲ್ಲಿ ಆಗಬೇಕಾಗಿತ್ತು, ಏಕೆ ಆಗಲಿಲ್ಲ? ಜೂನ್‌ಗೆ ಏಕೆ ಹೋಯಿತು. ಈ ಅಮೆಂಡ್‌ಮೆಂಟ್ ಎಲ್ಲಾ ಬಂದವು. ಬಹುಶಃ ಅವರು ಯೂಶುಯಲ್ ಕೋರ್ಸ್‌ನಲ್ಲಿ ಮಾಡಿದ್ದರೆ ಮೇ ತಿಂಗಳಲ್ಲಿ ಎಲೆಕ್ಷನ್ ಆಗಬಹುದಾಗಿತ್ತು. ಇವರು ಅಮೆಂಡ್‌ಮೆಂಟ್ ತೆಗೆದುಕೊಂಡು ಬಂದು, ಮತ್ತೆ ಇನ್ನೊಂದು ತೆಗೆದುಕೊಂಡು ಮಾಡಿದ್ದಕ್ಕೆ ಜೂನ್‌ಗೆ ಸುಮ್ಮನೇ ಎಲೆಕ್ಷನ್ ಹೋಯಿತು. ಈಗ ಎಲೆಕ್ಷನ್ ಮಾಡಲೇಬೇಕು ಎಂದು ಹೇಳಿ ಸಲವಾರು ತಪ್ಪುಗಳನ್ನು ಮಾಡಿಕೊಂಡು, ಈ ಮೀಸಲಾತಿ ಬಗ್ಗೆ ತಪ್ಪುಗಳನ್ನು ಮಾಡಿಕೊಂಡು ಇವರು ಹರಿಬರೀಯಾಗಿ ಎಲೆಕ್ಷನ್

ಮಾಡುವುದು ಏನು ಸಾಧಿಸಿದ ಹಾಗೆ ಆಗುತ್ತದೆ? ಅದಕ್ಕೆ ಇವತ್ತು ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಇದರ ಬಗ್ಗೆ ರೀಕನ್ಸಿಡರೇಷನ್ ಮಾಡಲಿ. ನಮ್ಮದೇನೂ ತಕರಾರು ಇಲ್ಲ. ಎಲ್ಲೆಲ್ಲಿ ಏನೇನು ಅನ್ಯಾಯ ಆಗಿದೆ? ಎಂದು ಪ್ರತಿ ಒಬ್ಬ ಶಾಸಕರನ್ನು ಕರೆಸಿ ಕೇಳಿ. ಎಲ್ಲಿ ಅನ್ಯಾಯ ಆಗಿದೆ? ಅದನ್ನು ಸರಿಪಡಿಸುವಂತಹ ಕೆಲಸ ಆಗಬೇಕು. ಒಂದು ವಾರ ಎಲೆಕ್ಷನ್ ಮುಂದೆ ಹೋಗಬಹುದು. ಏನೂ ಆಗಲಿಕ್ಕಿಲ್ಲ. ಆದರೆ ನೀವು ಇದನ್ನು ಮಾಡಲಾರದೇ, ತಪ್ಪು ಸರಿ ಮಾಡಲಾರದೇ ಎಲೆಕ್ಷನ್ ಮಾಡಲು ಹೊರಟರೆ ಬಹುಶಃ ಅಸಮಾಧಾನ ಆಗುತ್ತದೆ. ಮತ್ತು ಈ ಒಂದು ಪ್ರೋಸೆಸ್ ಏನು ಇದೆ, ಎಲೆಕ್ಷನ್ ಪ್ರೋಸೆಸ್ ವ್ಯವಸ್ಥೆ ಇದರಲ್ಲಿ ಬಹಳಷ್ಟು ಗೊಂದಲಮಯವಾದ ವಾತಾವರಣ ನಿರ್ಮಾಣ ಆಗುತ್ತದೆ. ಅದಕ್ಕೆ ಇವತ್ತು ಮಾನ್ಯ ಅಧ್ಯಕ್ಷರ ಮುಖಾಂತರ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಇವತ್ತೂ ಅವರು ಇದನ್ನು ಒಂದು ಪ್ರತಿಷ್ಠೆ ಎಂದು ಮಾಡಿಕೊಳ್ಳಬಾರದು. ಗ್ರಾಮೀಣಾಭಿವೃದ್ಧಿ ಸಚಿವರು ಪ್ರತಿಷ್ಠೆ ಎಂದು ಮಾಡಿಕೊಳ್ಳದೇ ನಾವು ಜೂನ್‌ಗೆ ಎಲೆಕ್ಷನ್ ಮಾಡಲೇಬೇಕು ಎನ್ನುವಂತಹ ಒಂದು ತರಾತುರಿಯಲ್ಲಿ ಇವತ್ತು ಈ ಒಂದು ಗೊಂದಲ ಮಾಡುವುದು ಬೇಡ. ಅದಕ್ಕೆ ರೀಕನ್ಸಿಡರೇಷನ್ ಮಾಡಿ.

(ಗೊಂದಲ)

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಮಂತ್ರಿಗಳಿಂದ ಉತ್ತರ ಬೇಕು.

ಅಧ್ಯಕ್ಷರು: ಮಾನ್ಯ ಘೋರ್ಪಡೆಯವರೆ, ರೀಕನ್ಸಿಡರೇಷನ್ ಮಾಡುವುದಕ್ಕೆ ಆಗುತ್ತದೋ ಇಲ್ಲವೋ ಎಂದು ಮಾನ್ಯ ಸದಸ್ಯರು ಕೇಳುತ್ತಾರೆ. ಉತ್ತರ ಹೇಳಿ.

ಶ್ರೀ ಬೋಸರಾಜ್: ಆಗಿರುವ ತಪ್ಪನ್ನು ಸರಿಪಡಿಸಿದ್ದಾರೆ. ಅಲ್ಲಿ ಆಗಿರತಕ್ಕ ಎಸ್‌ಸಿ:ಎಸ್‌ಟಿ ಏನು ಬದಲಾವಣೆ ರಾಯಚೂರಿನಲ್ಲಿ ಆಯಿತು,

(ಗೊಂದಲ)

ಅಧ್ಯಕ್ಷರು: ರೀಕನ್ಸಿಡರೇಷನ್ ಮಾಡುವುದಕ್ಕೆ ಆಗುತ್ತದೋ ಇಲ್ಲವೋ ಎಂದು ಮಾನ್ಯ ಮಂತ್ರಿಗಳು ನೀವು ಹೇಳಿ.

ಶ್ರೀ ಚೆಲುವರಾಯಸ್ವಾಮಿ: ನೋಟಿಫಿಕೇಶನ್ ಮತ್ತೆ ಇಶ್ಯೂ ಮಾಡಿರತಕ್ಕದ್ದು ತಪ್ಪು. ದಯಮಾಡಿ ಅದರ ಬಗ್ಗೆ ಗಮನ ಹರಿಸಬೇಕು ಎಂದು ಹೇಳುತ್ತಿದ್ದೇನೆ. ರಿಸರ್ವೇಷನ್ ನೀವು ಯಾವುದಕ್ಕೆ ಕೊಡುತ್ತೀರಿ ಎಂದು ಕೇಳುತ್ತಿಲ್ಲ.

ಅಧ್ಯಕ್ಷರು: ನೀವು ಆಗಲೂ ಮಾತನಾಡಿದ್ದೀರಿ. ಈಗಲೂ ಮಾತನಾಡುತ್ತಿದ್ದೀರಿ. ಈ ರೀತಿ ಮಾತನಾಡಿದರೆ ನಾವು ಕಾರ್ಯಕ್ರಮವನ್ನು ಮುಂದುವರಿಸುವುದಕ್ಕೆ ಆಗುವುದಿಲ್ಲ.

5.40 ಪಿ.ಎಂ.

ಶ್ರೀ ಎಂ.ವೈ.ಘೋರ್ಪಡೆ: ಮಾನ್ಯ ಅಧ್ಯಕ್ಷರೆ, ಜಿಲ್ಲಾಧಿಕಾರಿಯವರು ಕಳಿಸಿರುವ ಪಟ್ಟಿ ಏನಿದೆ ಅದನ್ನು ಅದೇ ರೂಪದಲ್ಲಿ ನಾವು ಒಪ್ಪಲು ಏಕೆ ಆಗಲಿಲ್ಲವೆಂಬುದನ್ನು ನಾನು ಬಹಳ ಸ್ಪಷ್ಟವಾಗಿ ಹೇಳಿದೆ. ಎಸ್.ಸಿ, ಎಸ್.ಟಿ. ಬಂಚಿಂಗ್‌ನ್ನು ತಪ್ಪಿಸುವುದಕೋಸ್ಕರ ಆ ರೂಢಿಯಲ್ಲಿ ಸ್ವಲ್ಪ ಬದಲಾವಣೆ ಮಾಡಬೇಕಾಯಿತು. ಆದ್ದರಿಂದ ಜಿಲ್ಲಾಧಿಕಾರಿಯವರು ಕೊಟ್ಟಿದ್ದ ಪಟ್ಟಿಯನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳಲು ಆಗಲಿಲ್ಲ. ನಾವು ಈಗ ಗೈಡ್‌ಲೈನ್ಸ್ ಪ್ರಕಾರವೇ ಮಾಡಿದ್ದೇವೆ. ನಾನು ಏನು ಹೇಳಿದ್ದೇವೆ ಅದಕ್ಕೆ ವಿರುದ್ಧವಾಗಿ ಗೈಡ್‌ಲೈನ್ಸ್‌ನಲ್ಲಿ ಏನಾದರು ಇದ್ದರೆ ನಾವು ಮಾಡಿರುವುದನ್ನು ಸರಿಪಡಿಸಲು ನಾನು ಸಿದ್ಧನಾಗಿರುವೆ. ಗೈಡ್‌ಲೈನ್ಸ್ ಇರುವುದು ಪರಿಶಿಷ್ಟ ಜಾತಿ ಮತ್ತು ಪಂಗಡದವರ ಬಗ್ಗೆ ಮತ್ತು ಯಾವ್ಯಾವ ಜಿಲ್ಲೆಯಲ್ಲಿ ಎಷ್ಟು ನಂಬರ್ಸ್ ಇರಬೇಕು ಎಂಬುದರ ಬಗ್ಗೆ. ನಾವು ಜಿಲ್ಲೆಯನ್ನು ಯೂನಿಟ್ ಆಗಿ ಇಟ್ಟುಕೊಂಡು ಮೀಸಲಾತಿಯನ್ನು ಮಾಡುತ್ತಿದ್ದೇವೆ. ಆದರೆ ತಾವು ತಾಲ್ಲೂಕಿನಲ್ಲಿ ಎಷ್ಟು ಬಂತು ಎಂದು ಕೇಳುವುದು ನ್ಯಾಯವಲ್ಲ. ಏಕೆಂದರೆ ಕೆಲವು ತಾಲ್ಲೂಕಿನಲ್ಲಿ ಓ.ಬಿ.ಸಿ., ಕಡಿಮೆಯಾಗಬಹುದು ಇಲ್ಲವೆ ಜಾಸ್ತಿಯಾಗಬಹುದು, ಹೆಣ್ಣು ಮಕ್ಕಳ ಸಂಖ್ಯೆ ಜಾಸ್ತಿಯಾಗಬಹುದು ಇಲ್ಲವೆ ಕಡಿಮೆಯಾಬಹುದು. ಇದು ತಾಲ್ಲೂಕು ದೃಷ್ಟಿಯಿಂದ ಮಾತ್ರ. ಆದರೆ ಜಿಲ್ಲಾ ಮಟ್ಟದ ದೃಷ್ಟಿಯಿಂದ ಎಷ್ಟು ಮೀಸಲಾತಿ ಇರಬೇಕೋ ಅಷ್ಟು ಸೀಟು ಇದ್ದೇ ಇರುತ್ತದೆ. ಇಲ್ಲದಿದ್ದರೆ ಯಾರಾದರೂ ಕೋರ್ಟ್‌ಗೆ ಹೋಗಿ ಪ್ರಶ್ನೆ ಮಾಡಲು ಸಾಧ್ಯತೆಗಳು ಇದೆ. ಒಟ್ಟಿನಲ್ಲಿ ಗೈಡ್‌ಲೈನ್ಸ್ ಏನಿದೆ ಅದರ ಉಲ್ಲಂಘನೆಯಾಗಿಲ್ಲ, ಅದು ಆಗಿದ್ದರೆ ತೋರಿಸಿ.

ಶ್ರೀ ಬಿ.ಸೋಮಶೇಖರ್: ಮಾನ್ಯ ಅಧ್ಯಕ್ಷರೆ, ಮೀಸಲಾತಿಯನ್ನು ಕಡಿಮೆ ಮಾಡಿದ್ದಾರೆ ಎಂದು ನಾವು ಹೇಳಲಿಲ್ಲ. ಒಂದು ಜಿಲ್ಲೆಯನ್ನು ಯೂನಿಟ್ ಎಂದು ಇಟ್ಟುಕೊಂಡಮೇಲೆ ಯಾವ್ಯಾವ ಕಡೆ ಎಲ್ಲೆಲ್ಲಿ ಇರಬೇಕು ಎಂಬುದರಲ್ಲಿ ತಾರತಮ್ಯವಾಗಿದೆ. ಒಂದು ಜಿಲ್ಲೆಯಲ್ಲಿ ಬಿ.ಸಿ.ಎಂ., ಎಸ್.ಸಿ./ಎಸ್.ಟಿ, ಮಹಿಳೆಯರು ಇಷ್ಟು ಇರಬೇಕು ಎಂದು ಸರಿಯಾಗಿ ಮಾಡಿದ್ದೀರಿ. ಆದರೆ 33 ಪರ್‌ಸೆಂಟ್ ಮಹಿಳೆಯರಿಗೆ ಎಂದು ಮಾಡಿದ ಮೇಲೆ ಕೆಲವು ಕಡೆ 80 ಪರ್‌ಸೆಂಟ್ ಆಗಿರುವುದು, ಮತ್ತೆ ಕೆಲವು ಕಡೆ ಏನೂ ಇಲ್ಲದಿರುವುದು ಆಗಿದೆ. ಒಂದುವೇಳೆ ಒಂದು ಕಡೆ ಮಹಿಳೆಯರ ಜನಸಂಖ್ಯೆ 50 ಪರ್‌ಸೆಂಟ್ ಇತ್ತು ಎಂದು ಇಟ್ಟುಕೊಳ್ಳಿ. ಆ ಕಡೆ ನಾಲ್ಕು ಮಹಿಳೆಯ ಸ್ಥಾನಗಳಾಗಿ ಒಂದು ಸ್ಥಾನ ಪುರುಷ ಇದ್ದರೆ ಎಷ್ಟು ಅನಾಹುತವಾಗುತ್ತದೆ? ಇದರಲ್ಲಿ ಅನ್ಯಾಯವಾಗಿದೆಯೆಂದು ಎಲ್ಲರು ಒಪ್ಪಿಕೊಂಡಿದ್ದಾರೆ. ಇದು ಕೇವಲ ವಿರೋಧ ಪಕ್ಷದವರ ದೂರು ಅಲ್ಲ. ಇದರಲ್ಲಿ ತಾರತಮ್ಯವಾಗಿದೆ, ಯಾವ ರೀತಿ ನಿಯಮದ ಆಧಾರದ ಮೇಲೆ ಆಗಿಲ್ಲವೆಂದು ಎಲ್ಲ ಪಕ್ಷದವರು ಹೇಳಿದ್ದಾರೆ. ಆದರೆ ಚುನಾವಣೆಯನ್ನು ಎಂಟು ದಿವಸಗಳು ಮಟ್ಟಿಗಾದರು ಸಹ ಮುಂದಕ್ಕೆ ಹಾಕಬಾರದು

ಎಂಬ ದೃಷ್ಟಿಯಿಂದ ತಾವು ಇದನ್ನು ಹಿಡಿದುಕೊಂಡು ಕುಳಿತಿದ್ದೀರಿ. ಒಂದೇ ಒಂದು ದಿನದಲ್ಲಿ ಜೀರೋ ಡಿಸ್ಕ್ರಿಷನ್ ಆಧಾರದಲ್ಲಿ ಒಂದು ಕೆಲಸ ಮಾಡಿ ಎಲ್ಲ ಕಡೆಗೆ ಒಂದೊಂದು ಪರಿಶಿಷ್ಟ ಜಾತಿ ಇರಬೇಕು, ಒಂದು ಹೆಚ್ಚುವರಿ ಬರಬೇಕೆಂದರೆ ಎಲ್ಲಿ ಜನಸಂಖ್ಯೆ ಜಾಸ್ತಿ ಇದೆ ಅಲ್ಲಿ ಕೊಡಿ, ಒಂದು ತಾಲ್ಲೂಕಿನಲ್ಲಿ ಒಂದು ಬಿ.ಸಿ.ಎಂ.ಎ. ಇರಬೇಕು. ಒಂದು ಮಹಿಳೆಯರು ಇರಬೇಕು ಮತ್ತೊಂದು ಸಾಮಾನ್ಯ ವರ್ಗದವರು ಇರಬೇಕೆಂದು ಮಾಡಿ, ಇದು ನನ್ನ ಸಲಹೆ. ಇದನ್ನು ಎಲ್ಲರು ಒಪ್ಪಿಕೊಳ್ಳುತ್ತಾರೆ. ತಮ್ಮ ಪಕ್ಷದವರಾದ ಮಾನ್ಯ ಕೇಳಿವಾಡ್‌ರವರು ಒಂದು ಸಲಹೆಯನ್ನು ಕೊಟ್ಟರು. ಈ ಸಲ ಯಾವ ಒಂದು ಕ್ಯಾಟಗರಿಯಲ್ಲಿ ಇತ್ತೋ ಅದನ್ನು invariably it should be changed to some other catagory ಈ ಬ್ರಾಡ್ ಗೈಡ್‌ಲೈನ್ಸ್‌ನ್ನು ಇಟ್ಟುಕೊಂಡು ಕಂಪ್ಯೂಟರ್‌ಗೆ ಹಾಕಿ, ಬಹುಶಃ ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಇದರಲ್ಲಿ ಯಾರದ್ದೇ ಭಿನ್ನಾಭಿಪ್ರಾಯವಿಲ್ಲ. ಇವತ್ತು ಸಹ ತಾವು ಕಾರಿಜಾಂಡಂನ್ನು ಇಶ್ಯೂ ಮಾಡಬಹುದು. ಆದ್ದರಿಂದ ಎಲ್ಲಾ ಪಕ್ಷದವರು ಮೆಚ್ಚುವಂತೆ ಜೀರೋ ಡಿಸ್ಕ್ರಿಷನ್ ಆಧಾರದ ಮೇಲೆ ಗೈಡ್‌ಲೈನ್ಸ್ ಕೊಡಿ. ಇನ್‌ವೇರಿಯೆಬಲಿ ಒಂದೊಂದು ಕ್ಷೇತ್ರದಲ್ಲಿ ಇಂತಿಷ್ಟು ಇರಬೇಕೆಂದು ಹೇಳುವುದನ್ನು ಎಲ್ಲರೂ ಒಪ್ಪತಕ್ಕ ಮಾತು ಅದನ್ನು ಒಪ್ಪಬೇಕು ಎಂದು ಹೇಳುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ನಾವು ಸೆಪರೇಟ್ ಗೈಡ್ ಲೈನ್ಸ್‌ಗೆ ಒತ್ತಾಯ ಮಾಡುತ್ತಿಲ್ಲ. ಮಾನ್ಯ ಸೋಮಶೇಖರ್‌ರವರು ಹೇಳಿರುವ ವಿಚಾರ ಎರಡೂ ಕಡೆಯ ಸದಸ್ಯರುಗಳಿಗೆ ಸಂಬಂಧಪಟ್ಟಿದ್ದು. ಎರಡು ದಿವಸಗಳಲ್ಲಿ ಇದನ್ನು ಫೇರ್ ಆಗಿ ಮಾಡಲು ಸಾಧ್ಯ ಇದೆ. ಎಸ್.ಸಿ. ಎಸ್.ಟಿ.ಗಳ ಬಗ್ಗೆ ತಾವು ಮಾಡಿರುವುದರ ಬಗ್ಗೆ ಯಾರದ್ದು ವಿರೋಧ ಇಲ್ಲ. ಚುನಾವಣೆಗಳನ್ನು ಜೂನ್ ಮೊದಲ ವಾರದಲ್ಲಿ ಮಾಡಬಾರದು ಎಂದು ನಮ್ಮಗಳ ವಿರೋಧವೇನು ಇಲ್ಲ. ಆದರೂ ಸರ್ಕಾರ, ಅವರಿಗಿಂತ ಹೆಚ್ಚಾಗಿ ಆಡಳಿತ ಪಕ್ಷದವರು, ಅವರಿಗೆ ಅನುಕೂಲವಾಗುವ ರೀತಿಯಲ್ಲಿ... ತಮ್ಮ ಪಕ್ಷದ ಸದಸ್ಯರುಗಳೆ ಇದರ ಬಗ್ಗೆ ಹೇಳಿದ್ದಾರೆ, ಹಾಗಿದ್ದರೂ ತಾವು ಏಕೆ ಇದನ್ನು ಪ್ರತಿಷ್ಠೆಯ ವಿಚಾರವಾಗಿ ತೆಗೆದುಕೊಳ್ಳುತ್ತಿದ್ದೀರೋ ಅರ್ಥವಾಗುತ್ತಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಇದು ಸಾಮಾಜಿಕ ಸಂಘರ್ಷಕ್ಕೆ ಎಡೆ ಮಾಡಿಕೊಡುತ್ತದೆ ಎಂದು ಹೇಳಿದರು. ಅವರ ಕ್ಷೇತ್ರದಲ್ಲಿ ಐದು 'ಎ' ವರ್ಗದವರು ಇದ್ದಾರೆ ಎಂದರೆ ಅವರು ಹೇಗೆ ಜನರಿಗೆ ಉತ್ತರ ಕೊಡಬೇಕು? ಬಚ್ಚೇಗೌಡರು ಅದೇ ಮಾತನ್ನು ಹೇಳಿದರು. ತಾವು ಚರ್ಚೆ ಮಾಡಿದ್ದೀರಿ, ತಮ್ಮ ಕಮಿಟ್‌ಮೆಂಟ್, ಬದ್ಧತೆಯ ಬಗ್ಗೆ ನಾವುಗಳ್ಯಾರು ಪ್ರಶ್ನೆ ಮಾಡುವುದಿಲ್ಲ. ಆದರೆ ತಾವು ರೊಟೇಟ್ ಮಾಡಿರುವುದು ಸರಿಯಾಗಿಲ್ಲ. ಇದರ ಬಗ್ಗೆ ತೀವ್ರವಾದ ಪ್ರತಿಭಟನೆಯನ್ನು ಮಾಡುತ್ತಿದ್ದೇವೆ. ಒಂದು ಸಾವಿರ ಜಿಲ್ಲಾ ಪಂಚಾಯಿತಿ ಸೀಟುಗಳು, ಮೂರು ಸಾವಿರ ತಾಲ್ಲೂಕು ಬೋರ್ಡ್ ಸೀಟುಗಳು ಇದರ ಬಗ್ಗೆ ಈಗಲೂ ಸಹ ಒಂದು ದಿವಸದಲ್ಲಿ ಬದಲಾವಣೆ ಮಾಡಲು ಸಾಧ್ಯವಿದೆ. ಇದನ್ನು ಮಾಡಲು ಏನು ತೊಂದರೆ ಇದೆ? ಇದನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡುತ್ತಿದ್ದೇವೆ.

ಇದರಿಂದ ಆಡಳಿತ ಪಕ್ಷದ ಶಾಸಕರಿಗೆ ತೊಂದರೆ ಮಾಡುತ್ತಿದ್ದೀರಿ. ಈ ವ್ಯವಸ್ಥೆಗೆ ತಮ್ಮ ಮನಸ್ಸಿಗೆ ವಿರುದ್ಧವಾಗಿ ನಡೆದುಕೊಂಡಿದ್ದೀರಿ ಎಂದು ಹೇಳಿ ನಾವುಗಳೆಲ್ಲರು ಸಭಾತ್ಯಾಗ ಮಾಡುತ್ತಿದ್ದೇವೆ.

(ಜನತಾದಳ 'ಯು'ನ ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಶ್ರೀ ಜಗದೀಶ್‌ಶೆಟ್ಟರ್(ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಇಷ್ಟೊಂದು ಅನುಭವವಿದ್ದರು ಸಹ ಅವರು ಆತ್ಮಸಾಕ್ಷಿಗೆ ವಿರುದ್ಧವಾಗಿ ಈ ಕೆಲಸ ಮಾಡುತ್ತಿದ್ದಾರೆ. ನಾವುಗಳು ಇಷ್ಟೊಂದು ಕನ್‌ವಿನ್ಸ್ ಮಾಡಿದರು ಸಹ ಅವರು ಪುನರ್ಪರಿಶೀಲನೆ ಮಾಡಲು ತಯಾರಾಗುತ್ತಿಲ್ಲ. ಇದರಿಂದ ಬಹಳಷ್ಟು ಕ್ಷೋಭೆಯನ್ನು ಉಂಟು ಮಾಡುತ್ತಿದ್ದಾರೆ. ಇದು ಕೇವಲ ನಮ್ಮ ಭಾಗದಲ್ಲಿರುವ ಜನಪ್ರತಿನಿದಿಗಳ ಬೇಡಿಕೆಯಲ್ಲ, ಆಡಳಿತ ಪಕ್ಷದ ಶಾಸಕರು ಸಹ ನಮ್ಮ ಜೊತೆ ಧ್ವನಿಗೂಡಿಸಿದ್ದಾರೆ. ನಾನು ಚುನಾವಣೆಯನ್ನು ಮಾಡಲೇಬೇಕು, ಈ ಗೊಂದಲಮಯ ಸ್ಥಿತಿಯಲ್ಲಿ ಚುನಾವಣೆ ಮಾಡಲೇ ಬೇಕು ಎಂಬ ಧೋರಣೆಯೇನಿದೆ ಅದು ಸರಿಯಲ್ಲ. ಇದನ್ನು ನಾವು ಪ್ರತಿಭಟಿಸುತ್ತಿದ್ದೇವೆ. ನಮ್ಮ ಜೊತೆ ಆ ಭಾಗದ ಶಾಸಕರುಗಳೇನು ಧ್ವನಿಗೂಡಿಸಿದ್ದಾರೆ ಅವರು ನಮ್ಮಗಳ ಜೊತೆ ಭಾಗವಹಿಸುತ್ತಾರೆ ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿ ನಾವುಗಳ ಸಭಾತ್ಯಾಗ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಬಿ.ಜೆ.ಪಿ. ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಮಾನ್ಯ ಅಧ್ಯಕ್ಷರೆ, ತಾವು ಬಂಚಿಂಗ್ ಪದ್ಧತಿಯನ್ನು ಬಿಟ್ಟು ಬೇರೆ ತಪ್ಪಾಗಿದ್ದರೆ ತಿಳಿಸಿ ಎಂದು ಹೇಳಿದ್ದೀರಿ. ಕಾರ್ಕಳ ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿಯವರಿಗೆ ಒಂದು ಮೀಸಲಾತಿ ಇತ್ತು. ಅದನ್ನು ಈಗ ಉಡುಪಿಗೆ ವರ್ಗಾವಣೆ ಮಾಡಿದ್ದಾರೆ. ಜನಸಂಖ್ಯೆ ಆಧಾರದ ಮೇಲೆ ಕಾರ್ಕಳಕ್ಕೆ ಬರುತ್ತಿತ್ತು. ಇದರ ಬಗ್ಗೆ ನಾನು ವಿರೋಧ ಮಾಡುವುದಿಲ್ಲ ಮತ್ತು ಬದಲಾವಣೆ ಮಾಡಿ ಎಂದು ಕೇಳುತ್ತಿಲ್ಲ. ಆದರೆ ಕಾರ್ಕಳದಲ್ಲಿ ಇದ್ದದ್ದನ್ನು ಬದಲಾವಣೆ ಏಕೆ ಮಾಡಿದಿರಿ? ಜನಸಂಖ್ಯೆಯ ಆಧಾರದ ಮೇಲೆ ಕಾರ್ಕಳ ತಾಲ್ಲೂಕಿನ ಮಿಯಾರ್ ಕ್ಷೇತ್ರಕ್ಕೆ ಇದು ಇತ್ತು. ಅದನ್ನು ಉಡುಪಿ ತಾಲ್ಲೂಕಿಗೆ ಏಕೆ ಬದಲಾವಣೆ ಮಾಡಿದರು?

ಶ್ರೀ ಎಂ.ವೈ.ಘೋರ್ಪಡೆ: ಅದು ಜನಸಂಖ್ಯೆಯ ಆಧಾರದಲ್ಲೇ ಬದಲಾವಣೆಯಾಗಿರಬೇಕು?

ಶ್ರೀ ಜಯಪ್ರಕಾಶ್‌ಹೆಗಡೆ: ನಾನು ಪಟ್ಟಿಯನ್ನು ನೋಡಿದ್ದೇನೆ. ಏಕೆ ಬದಲಾವಣೆ ಮಾಡಿದಿರಿ ಎಂದು ಮಾತ್ರ ಕೇಳುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು: ತಾವು ಯಾರಾದರೂ ಉತ್ತರ ಹೇಳುತ್ತೀರಾ. ನಾನು ಮುಗಿಸುತ್ತಿದ್ದೇನೆ. ಬೇಡಿಕೆಯ ಮೇಲೆ ಯಾರಾದರು ಮಾತನಾಡುತ್ತೀರ?

ಶ್ರೀ ಕೆ.ಎಂ.ಕೃಷ್ಣಮೂರ್ತಿ: ನಾವು ನಮ್ಮ ಅಭಿಪ್ರಾಯಗಳನ್ನು ಹೇಳಲು ಅವಕಾಶ ಕೊಡದಿರುವುದನ್ನು ವಿರೋಧಿಸಿ, ಸರ್ಕಾರದ ಧೋರಣೆಯನ್ನು ಪ್ರತಿಭಟಿಸಿ ನಾವು ಬಾವಿಯಲ್ಲಿ ಧರಣಿ ಹೂಡುತ್ತೇವೆ.

(ಜನತಾದಳ(ಎಸ್)ನ ಸದಸ್ಯರು ಬಾವಿಯಲ್ಲಿ ಕುಳಿತು ಮಾತನಾಡುತ್ತಿದ್ದರು)

ಅಧ್ಯಕ್ಷರು: ಬೇಡಿಕೆಯ ಮೇಲೆ ಮಾತನಾಡುವವರು ಯಾರು ಇಲ್ಲ, ಆದ್ದರಿಂದ ಮಾನ್ಯ ಘೋರ್ಪಡೆಯವರು ತಾವು ಉತ್ತರವನ್ನು ಹೇಳಿ. ಅನಂತರ ಮತದಾನಕ್ಕೆ ಹಾಕೋಣ.

ಅಧ್ಯಕ್ಷರು: ಅನುದಾನ ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಇನ್ಯಾರೂ ಮಾತನಾಡುವವರು ಇದ್ದಂತೆ ಕಾಣುವುದಿಲ್ಲ. ಆದ್ದರಿಂದ ಮಾನ್ಯ ಘೋರ್ಪಡೆಯವರೇ, ತಾವು ಈಗ ಉತ್ತರ ಹೇಳಿಬಿಡಿ. ಅನಂತರ ನಾನು ಅನುದಾನ ಬೇಡಿಕೆಗಳನ್ನು ವೋಟಿಂಗ್‌ಗೆ ಹಾಕುತ್ತೇನೆ.

(ಮಾನ್ಯ ಸದಸ್ಯರುಗಳು ಸದನದ ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ಈಗ ಅವರ ಬೇಡಿಕೆ ಏನಿದೆ, ಅದನ್ನು ನಾಳೆ ಮೂವ್ ಮಾಡಲಿ. ಮಾತನಾಡುವವರು ಇನ್ನೂ ಇರಬಹುದು, ಅಂತಹವರಿಗೆ ಮಾತನಾಡಲು ಅವಕಾಶ ಕೊಡೋಣ. ಎಲ್ಲರೂ ಮಾತನಾಡಿದ ಮೇಲೆ ಬೇಡಿಕೆಗಳನ್ನು ಮತಕ್ಕೆ ಹಾಕೋಣ. ಈಗ ತಾನೇ ಮೀಸಲಾತಿ ಸಂಬಂಧಿಸಿದ ಚರ್ಚೆ ಮೇಲೆ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಅವರ ಇಲಾಖೆಯ ಬೇಡಿಕೆಗಳ ಮೇಲಿನ ಚರ್ಚೆಗೆ ಬೇಕಾದರೆ ಅವರು ನಾಳೆ ಉತ್ತರ ಕೊಡುತ್ತಾರೆ.

ಅಧ್ಯಕ್ಷರು: ಹಾಗಾದರೆ ಈಗ ನಾನು ಸಭೆಯನ್ನು ಮುಂದೂಡುತ್ತಿದ್ದೇನೆ. ಸದನವು ನಾಳೆ ಬೆಳಿಗ್ಗೆ 10 ಗಂಟೆಗೆ ಪುನಃ ಸಮಾವೇಶಗೊಳ್ಳಲಿದೆ.

(ಸದನವು ಸಂಜೆ 5.02 ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ 28ನೇ ಏಪ್ರಿಲ್ 2000ದಂದು ಬೆಳಿಗ್ಗೆ 10 ಘಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)